ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಹಿಂಸೆಗೆ ಬಲಿಯಾದ ಅಹಿಂಸೆಯ ಸಾಕಾರ ಮೂರ್ತಿಯ ನೆನಪಿನಲ್ಲಿ...



'ಅದಾನಿ ಎಫ್‌ಪಿಒ: ಬದಲಿಲ್ಲ' 8
ಅಸ್ಸಾಂ ಸಿ.ಎಂ ಹಿಮಂತ ಬಿಸ್ವಾ ಶರ್ಮಾ ಅಭಿಮತ
'ರೈತರಿಗೆ ಶೀಘ್ರ ಮಹದಾಯಿ ನೀರು' 5
'ಸೂಕ್ತವಯಸ್ಸಿನಲ್ಲಿ ತಾಯ್ತನ ಹೊಂದಲಿ' 9

ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಾತಿ ವಿಳಂಬ • ಚಿಕಿತ್ಸೆ ಒದಗಿಸಲು ಖಾಸಗಿ ಆಸ್ಪತ್ರೆಗಳ ನಿರಾಸಕ್ತಿ

ಆರೋಗ್ಯ ಸೇವೆಗೆ ಅಲೆದಾಟ

• ವರುಣ ಹೆಗಡೆ

ಬೆಂಗಳೂರು: ಶ್ರೀನಿವಾಸಪುರದ 65 ವರ್ಷದ ವ್ಯಕ್ತಿಯೊಬ್ಬರು ಮಿದುಳಿನಲ್ಲಿದ್ದ ಗಡ್ಡೆಯ ಶಸ್ತ್ರಚಿಕಿತ್ಸೆಗಾಗಿ ಶಿಫಾರಸು ಆಧಾರದಲ್ಲಿ ಒಂದು ತಿಂಗಳು ನಿಮ್ಹಾನ್ಸ್ ಸೇರಿದ್ದರು. ಬಳಿಕ ಮೂರು ಆಸ್ಪತ್ರೆಗಳಿಗೆ ಅಲೆದು, ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಸಿಗದೆ 2022ರ ಆಗಸ್ಟ್ ತಿಂಗಳಲ್ಲಿ ಮೃತಪಟ್ಟರು. ಬಿಪಿಎಲ್ ಕುಟುಂಬದ ಅವರು, ಸರ್ಕಾರಿ ಆರೋಗ್ಯ ಯೋಜನೆಯ ಫಲಾನುಭವಿ ಆಗಿದ್ದರೂ ಚಿಕಿತ್ಸಾ ವೆಚ್ಚವಾಗಿ ಆಸ್ಪತ್ರೆಗೆ ₹ 20 ಸಾವಿರ ಪಾವತಿಸಿದ್ದರು.

ಒಳನೋಟ
ಚಿಕಿತ್ಸೆಗೇ 'ರೋಗ'
ಪ್ರತಿಕ್ರಿಯಿಸಿ: 9606038256
feedback@prajavani.co.in

ರಾಜ್ಯದಲ್ಲಿ ಜಾರಿಯಲ್ಲಿರುವ ಆರೋಗ್ಯ ಯೋಜನೆಗಳಡಿ ಚಿಕಿತ್ಸೆ ಪಡೆದುಕೊಳ್ಳುವ ಬಹುತೇಕರ ಅನುಭವ ಇದೇ ರೀತಿಯದ್ದಾಗಿದೆ.

ರಾಜ್ಯದ ಆರೂವರೆ ಕೋಟಿ ಜನರಿಗೂ ಆರೋಗ್ಯ ಭದ್ರತೆ ಒದಗಿಸುವ ಭರವಸೆಯೊಂದಿಗೆ 2018ರಲ್ಲಿ ಪ್ರಾರಂಭವಾದ 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆ (ಎಬಿ–ಎಆರ್‌ಕೆ), ನಾಲ್ಕು ವರ್ಷಗಳಾದರೂ ಜನರಿಗೆ ಸಂಪೂರ್ಣ 'ಆರೋಗ್ಯ ಭದ್ರತೆ'ಯ ಭರವಸೆಯನ್ನು ಮೂಡಿಸಿಲ್ಲ. ತುರ್ತು ಸಂದರ್ಭದಲ್ಲಿ ದಾಖಲಾತಿ, ಕೆಳ ಹಂತದ ಆಸ್ಪತ್ರೆಗಳಿಂದ ಖಾಸಗಿ ಆಸ್ಪತ್ರೆಗೆ ಶಿಫಾರಸು ಸೇರಿ ಚಿಕಿತ್ಸೆಯ ಬಗೆಗಿನ ವಿವಿಧ ಗೊಂದಲಗಳು ಇನ್ನೂ ನಿವಾರಣೆಯಾಗಿಲ್ಲ. ಇದೀಗ ಮರು ಜಾರಿಯಾಗುತ್ತಿರುವ 'ಯಶಸ್ವಿನಿ' ಯೋಜನೆಗೆ ಪ್ರಾರಂಭದಲ್ಲಿಯೇ ವಿಘ್ನ ಎದುರಾಗಿದ್ದು, ಚಿಕಿತ್ಸಾ ಪ್ಯಾಕೇಜ್‌ಗಳಿಗೆ ಆಸ್ಪತ್ರೆಗಳು ಆಕ್ಷೇಪ ವ್ಯಕ್ತಪಡಿಸಿವೆ. ಇದರಿಂದಾಗಿ ಚಿಕಿತ್ಸೆಯ ಲಭ್ಯತೆ ಪ್ರಶ್ನೆಯಾಗಿ ಉಳಿದಿದೆ.

'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹ 5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದ್ದರೂ ಇಷ್ಟು ಮೊತ್ತದ ವೈದ್ಯಕೀಯ ಸೌಲಭ್ಯ ಪಡೆಯುವುದು ಅರ್ಹ ಫಲಾನುಭವಿಗಳಿಗೆ ಸವಾಲಾಗಿದೆ. ಸರ್ಕಾರಿ ಆಸ್ಪತ್ರೆಗಳ ಬಲವರ್ಧನೆಯ ಜತೆಗೆ ಖಾಸಗಿ ಆಸ್ಪತ್ರೆಗಳ ದುಬಾರಿ ಸೇವೆಗೆ ಕಡಿವಾಣ ಹಾಕುವ ಯೋಜನೆಯ ಮೂಲ ಉದ್ದೇಶವೇ ಫಲಾನುಭವಿಗಳಿಗೆ ಜೀವಸಂಕಟವನ್ನು ತಂದೊಡ್ಡಿದೆ. ಸರ್ಕಾರಿ ಸಂಸ್ಥೆಗಳಲ್ಲಿ ಹಾಸಿಗೆ ಸಮಸ್ಯೆಯಿಂದ ಚಿಕಿತ್ಸೆ ವಿಳಂಬವಾದರೆ, ಚಿಕಿತ್ಸಾ ಪ್ಯಾಕೇಜ್ ದರ ಕಡಿಮೆ ಎಂಬ ಕಾರಣಕ್ಕೆ ಖಾಸಗಿ ಆಸ್ಪತ್ರೆಗಳು ಶಿಫಾರಸು ಪ್ರಕರಣಗಳಿಗೆ ನಿರಾಸಕ್ತಿ ತೋರುತ್ತಿವೆ. ಇದರಿಂದಾಗಿ ರೋಗಿಗಳು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಹಾಗೂ 'ಯಶಸ್ವಿನಿ' ಯೋಜನೆಗೆ 1,650 ಚಿಕಿತ್ಸಾ ವಿಧಾನಗಳನ್ನು ಸೇರ್ಪಡೆ ಮಾಡಲಾಗಿದೆ. ಪ್ರತಿ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಗೂ ಗರಿಷ್ಠ ದರ ನಿಗದಿ ಮಾಡಲಾಗಿದೆ. ಉದಾಹರಣೆಗೆ 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯಡಿ ಮಂಡಿ ಚಿಪ್ಪು ಬದಲಾವಣೆಗೆ ₹ 1.50 ಲಕ್ಷ ನಿಗದಿ ಮಾಡಲಾಗಿದೆ. 'ಯಶಸ್ವಿನಿ' ಯೋಜನೆಯಡಿ ಸುಟ್ಟ ಗಾಯದ ಚಿಕಿತ್ಸೆಗೆ ಗರಿಷ್ಠ ₹ 1 ಲಕ್ಷ, ಹೃದಯದ ಕವಾಟ ಬದಲಿ ಶಸ್ತ್ರಚಿಕಿತ್ಸೆಗೆ ₹ 1.55 ಲಕ್ಷ ನಿಗದಿ ಮಾಡಲಾಗಿದೆ. ಇಷ್ಟೇ ಮೊತ್ತದಲ್ಲಿ ಶಸ್ತ್ರಚಿಕಿತ್ಸೆ ನಡೆಸಬೇಕೆಂಬ ನಿಯಮ ರೂಪಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಖಾಸಗಿ ಆಸ್ಪತ್ರೆಗಳು, ದಾಖಲಾತಿಗೆ ನಿರಾಕರಿಸುತ್ತಿವೆ.

'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯಡಿ ಸರ್ಕಾರಿ ಆಸ್ಪತ್ರೆಗಳಿಗೂ ಚಿಕಿತ್ಸೆಗೆ ಅನುಸಾರ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಹಣ ಬಿಡುಗಡೆ ಮಾಡುತ್ತಿದೆ. ಈ ಹಣವನ್ನು ಆಸ್ಪತ್ರೆಗಳ ಅಭಿವೃದ್ಧಿ ಹಾಗೂ ವೈದ್ಯರು, ವೈದ್ಯಕೀಯ ಸಿಬ್ಬಂದಿಗೆ ಪ್ರೋತ್ಸಾಹ ಧನ ಒದಗಿಸಲು ಬಳಸಿಕೊಳ್ಳಲಾಗುತ್ತಿದೆ.

ಹಳೆಯ ದರ ನಿಗದಿ: ಸಹಕಾರಿ ಇಲಾಖೆಯ ಮೂಲಕ 2003ರಲ್ಲಿ ಆರಂಭಗೊಂಡಿದ್ದ 'ಯಶಸ್ವಿನಿ' ಯೋಜನೆಯನ್ನು 2018ರ ಮೇ 31ರಂದು ಸ್ಥಗಿತಗೊಳಿಸಿ, ಆರೋಗ್ಯ ಕರ್ನಾಟಕ ಯೋಜನೆಯೊಂದಿಗೆ ವಿಲೀನಗೊಳಿಸಲಾಗಿತ್ತು. ಇದೀಗ ಯೋಜನೆಯ ಮಹತ್ವ ಮನಗಂಡ ಸರ್ಕಾರ, 'ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್' ಮೂಲಕ ಯೋಜನೆಯನ್ನು ಮತ್ತೆ ಅನುಷ್ಠಾನಗೊಳಿಸಿದೆ. ಫಲಾನುಭವಿಗಳು ಯೋಜನೆಯಡಿ ನೋಂದಾಯಿತ ಆಸ್ಪತ್ರೆಗೆ, ನೇರವಾಗಿ ತೆರಳಿ ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ. ಈ ಯೋಜನೆಯಡಿ ಯಶಸ್ವಿನಿ ಜಾಲದ ಆಸ್ಪತ್ರೆಗಳಲ್ಲಿ ಒಂದು ಕುಟುಂಬ ಗರಿಷ್ಠ ₹ 5 ಲಕ್ಷವರೆಗಿನ ವೆಚ್ಚದಲ್ಲಿ ನಗದುರಹಿತ ಚಿಕಿತ್ಸೆ ಪಡೆಯಬಹುದು. ಯೋಜನೆಯ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ₹ 330 ಕೋಟಿ ಮೀಸಲಿಡಲಾಗಿದೆ.

6ನೇ ಪುಟ ನೋಡಿ



ಕಲಬುರಗಿಯ ಜಿಮ್ಸ್ ಆಸ್ಪತ್ರೆಯಲ್ಲಿ ಜನರು ಆಯುಷ್ಮಾನ್ ಭಾರತ ಆರೋಗ್ಯ ಕಾರ್ಡ್ ಬಗ್ಗೆ ವಿಚಾರಿಸುತ್ತಿರುವುದು ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಆಯುಷ್ಮಾನ್ ಭಾರತ್ ಯೋಜನೆಯ ಮಾಹಿತಿಗೆ ಆಸ್ಪತ್ರೆಗಳಲ್ಲಿ ಆರೋಗ್ಯ ಮಿತ್ರ ವಿಭಾಗ ವಿದೆ. ತುರ್ತು ಚಿಕಿತ್ಸೆಗೆ ಶಿಫಾರಸಿನ ಅಗತ್ಯವಿಲ್ಲ. ನೇರ ತೆರಳಬಹುದು
ಡಿ. ರಂದೀಪ್
ಆರೋಗ್ಯ ಇಲಾಖೆ ಆಯುಕ್ತ

ಆರೋಗ್ಯ ಯೋಜನೆಗಳಡಿ ಚಿಕಿತ್ಸಾ ಪ್ಯಾಕೇಜ್‌ಗಳಿಗೆ ನಿಗದಿಪಡಿಸಿದ ದರ ಅವೈಜ್ಞಾನಿಕವಾಗಿದೆ. ಆ ದರದಲ್ಲಿ ಚಿಕಿತ್ಸೆ ನೀಡುವುದು ಕಷ್ಟ. ದರ ಪರಿಷ್ಕರಣೆಗೆ ಕೋರಿದ್ದೇವೆ
ಡಾ. ಗೋವಿಂದಯ್ಯ ಯತೀಶ್
ಫನಾ ಅಧ್ಯಕ್ಷ

ಆರೋಗ್ಯ ಯೋಜನೆಗಳ ಸುಧಾರಣೆಗೆ ತಜ್ಞರ ಸಲಹೆಗಳು

- ಆರೋಗ್ಯ ಯೋಜನೆಗಳಡಿ ಶಿಫಾರಸು ಪ್ರಕ್ರಿಯೆಗಳನ್ನು ಕೈಬಿಟ್ಟು, ರೋಗಿಗಳಿಗೆ ನೇರವಾಗಿ ದಾಖಲಾಗಲು ಅವಕಾಶ ನೀಡಬೇಕು.
- ಯೋಜನೆಗಳಡಿ ಚಿಕಿತ್ಸಾ ಪ್ಯಾಕೇಜ್‌ಗಳ ದರವನ್ನು ಕಾಲಕಾಲಕ್ಕೆ ಪರಿಷ್ಕರಣೆ ಮಾಡಬೇಕು.
- ಕುಟುಂಬವೊಂದಕ್ಕೆ ನಿಗದಿಪಡಿಸಿರುವ ಗರಿಷ್ಠ ವಿಮೆ ಮೊತ್ತವನ್ನು ಕೆಲ ಪ್ರಕರಣಗಳಲ್ಲಿ ವಿನಾಯಿತಿ ನೀಡಿ, ಹೆಚ್ಚಿನ ಚಿಕಿತ್ಸೆಗೆ ಅವಕಾಶ ಕಲ್ಪಿಸಬೇಕು.
- ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ ಆಸ್ಪತ್ರೆಗಳನ್ನೂ ಯೋಜನೆಗಳಡಿ ತರಬೇಕು.
- ಕ್ಯಾನ್ಸರ್ ಸೇರಿ ವಿವಿಧ ಕಾಯಿಲೆಗಳಿಗೆ ಸಂಬಂಧಿಸಿದಂತೆ ಅತ್ಯಾಧುನಿಕ ಚಿಕಿತ್ಸಾ ವಿಧಾನಗಳನ್ನು ಅಳವಡಿಸಬೇಕು.
- ಖಾಸಗಿ ಆಸ್ಪತ್ರೆಗಳು ಯೋಜನೆಗಳಡಿ ದಾಖಲಾತಿಗೆ ನಿರಾಕರಿಸಿದಲ್ಲಿ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು.
- ಎಲ್ಲ ಆಸ್ಪತ್ರೆಗಳಲ್ಲಿ ಆರೋಗ್ಯ ಯೋಜನೆಗಳ ಸಮರ್ಪಕ ಮಾಹಿತಿ ಒದಗಿಸಲು ಕ್ರಮ ಕೈಗೊಳ್ಳಬೇಕು.
- ಯೋಜನೆಗಳಡಿ ಚಿಕಿತ್ಸೆ ಒದಗಿಸಿದ ಆಸ್ಪತ್ರೆಗಳಿಗೆ ಗೊತ್ತುಪಡಿಸಲಾದ ಪ್ಯಾಕೇಜ್ ಹಣವನ್ನು ಕಾಲ ಕಾಲಕ್ಕೆ ಬಿಡುಗಡೆ ಮಾಡಬೇಕು.
- ಪೂರಕ ದಾಖಲಾತಿ ಒದಗಿಸಿಲ್ಲ ಎಂಬ ಕಾರಣಕ್ಕೆ ಚಿಕಿತ್ಸೆ ನಿರಾಕರಿಸಬಾರದು.
- ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲವರ್ಧಿಸಬೇಕು.

'ಮೊಘಲ್' ಇನ್ಮುಂದೆ 'ಅಮೃತ್ ಉದ್ಯಾನ'

ನವದೆಹಲಿ (ಪಿಟಿಐ): ರಾಷ್ಟ್ರಪತಿ ಭವನದ ಪ್ರಸಿದ್ಧ 'ಮೊಘಲ್ ಉದ್ಯಾನ'ವನ್ನು ಇನ್ನು ಮುಂದೆ 'ಅಮೃತ್ ಉದ್ಯಾನ' ಎಂದು ಕರೆಯಲಾಗುವುದು ಎಂದು ಅಧಿಕೃತ ಪ್ರಕಟಣೆ ಶನಿವಾರ ತಿಳಿಸಿದೆ. 9

'ಕೊಲಿಜಿಯಂ ಕಡೆಗಣನೆ: ಪ್ರಜಾಪ್ರಭುತ್ವಕ್ಕೆ ಮಾರಕ' 9

ಚಿನಕುರಳಿ
ಪ್ರಕಾಶ್ ಶೆಟ್ಟಿ



ಹಾರಾಟದ ವೇಳೆ ಡಿಕ್ಕಿ ಸಾಧ್ಯತೆ–ತಜ್ಞರ ಶಂಕೆ

ಸುಖೋಯ್, ಮಿರಾಜ್ ಪತನ

ನವದೆಹಲಿ/ಮೊರೆನಾ/ಭರತ್‌ಪುರ (ಪಿಟಿಐ): ಭಾರತೀಯ ವಾಯುಪಡೆಯ (ಐಎಎಫ್) ಎರಡು ಯುದ್ಧವಿಮಾನಗಳು ಮಧ್ಯಪ್ರದೇಶದ ಗ್ವಾಲಿಯರ್ ಸಮೀಪ ಶನಿವಾರ ಪತನವಾಗಿವೆ. ಸುಖೋಯ್–30ಎಂಕೆಐ ಹಾಗೂ ಮಿರಾಜ್–2000 ಯುದ್ಧವಿಮಾನಗಳು ಗ್ವಾಲಿಯರ್‌ನಿಂದ ದಿನನಿತ್ಯದ ಹಾರಾಟ ತರಬೇತಿಗೆ ತೆರಳಿದ್ದಾಗ ಈ ಅವಘಡ ಸಂಭವಿಸಿದೆ.

ಮಿರಾಜ್ ಯುದ್ಧವಿಮಾನದಲ್ಲಿದ್ದ ಪೈಲಟ್, ಬೆಳಗಾವಿಯ ವಿಂಗ್ ಕಮಾಂಡರ್ ಹನುಮಂತರಾವ್ ಸಾರಥಿ ಮೃತಪಟ್ಟಿದ್ದಾರೆ. ಆದರೆ, ಸುಖೋಯ್ ಯುದ್ಧವಿಮಾದಲ್ಲಿದ್ದ ಇಬ್ಬರು ಪೈಲಟ್‌ಗಳು ಹೊರಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅವರನ್ನು ಸೇನಾ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಹಾರಾಟದ ವೇಳೆ ವಿಮಾನಗಳ ನಡುವೆ ಡಿಕ್ಕಿ ಸಂಭವಿಸಿರಬಹುದು' ಎಂದು ರಕ್ಷಣಾ ತಜ್ಞರು ಶಂಕೆ ವ್ಯಕ್ತಪಡಿಸಿದ್ದಾರೆ. ಆದರೆ ವಾಯುಪಡೆಯು ಇದನ್ನು ಖಚಿತಪಡಿಸಿಲ್ಲ. ಅಪಘಾತಕ್ಕೆ ನಿಖರ ಕಾರಣ ತಿಳಿಯಲು ಉನ್ನತಮಟ್ಟದ ತನಿಖೆಗೆ ಆದೇಶಿಸಲಾಗಿದೆ. ನಾಲ್ಕು ವರ್ಷಗಳ ಹಿಂದೆ, ವಾಯುಪಡೆಯ ಸೂರ್ಯಕಿರಣ್ ತಂಡದ ಎರಡು ಹಾಕ್ ಯುದ್ಧವಿಮಾನಗಳು ಬೆಂಗಳೂರಿನಲ್ಲಿ ಡಿಕ್ಕಿಯಾಗಿದ್ದವು.

9ನೇ ಪುಟ ನೋಡಿ



ಮಧ್ಯಪ್ರದೇಶದ ಮೊರೆನಾ ಜಿಲ್ಲೆಯಲ್ಲಿ ಯುದ್ಧವಿಮಾನ ಪತನಗೊಂಡು ಹೊತ್ತಿ ಉರಿಯಿತು–ಪಿಟಿಐ ಚಿತ್ರ

ಬೆಳಗಾವಿಯ ಪೈಲಟ್ ಸಾವು



ಹನುಮಂತರಾವ್

ಬೆಳಗಾವಿ: ಗ್ವಾಲಿಯರ್ ಸಮೀಪ ಪತನವಾದ ಮಿರಾಜ್ ಯುದ್ಧ ವಿಮಾನದಲ್ಲಿ ಮೃತಪಟ್ಟ ಪೈಲಟ್, ವಿಂಗ್ ಕಮಾಂಡರ್ ಹನುಮಂತರಾವ್ ರೇವಣಸಿದ್ಧಪ್ಪ ಸಾರಥಿ (34) ಬೆಳಗಾವಿಯವರು.

'ಅವರ ಪಾರ್ಥಿವ ಶರೀರವನ್ನು ವಿಶೇಷ ವಿಮಾನದಲ್ಲಿ ಇಲ್ಲಿನ ಗಣೇಶಪುರಕ್ಕೆ ಭಾನುವಾರ ತರುವುದಾಗಿ ಮಾಹಿತಿ ಬಂದಿದೆ' ಎಂದು ಕುಟುಂಬದ ಮೂಲಗಳು 'ಪ್ರಜಾವಾಣಿ'ಗೆ ಖಚಿತಪಡಿಸಿವೆ. ಹನುಮಂತರಾವ್ ಅವರಿಗೆ ತಂದೆ, ತಾಯಿ, ಪತ್ನಿ ಮೀಮಾಂಶ, ಮೂರು ವರ್ಷದ ಪುತ್ರಿ, ಒಂದು ವರ್ಷದ ಪುತ್ರ ಇದ್ದಾರೆ. ತಂದೆ ರೇವಣಸಿದ್ಧಪ್ಪ ಹಾಗೂ ತಾಯಿ ಸಾವಿತ್ರಿ ಬೆಳಗಾವಿ ನಗರದಲ್ಲಿ ವಾಸವಿದ್ದಾರೆ. ಗಣೇಶಪುರದಲ್ಲಿ 1987ರಲ್ಲಿ ಜನಿಸಿದ ಅವರು, ನಗರದ ಕೇಂದ್ರೀಯ ವಿದ್ಯಾಲಯ–2ರಲ್ಲಿ ಶಿಕ್ಷಣ ಪೂರೈಸಿದ್ದರು.

2009ರಲ್ಲಿ ವಾಯುಪಡೆ ಸೇರಿದ ಅವರು, ಪತ್ನಿ, ಮಕ್ಕಳ ಜತೆ ಗ್ವಾಲಿಯರ್‌ನಲ್ಲಿ ನೆಲೆಸಿದ್ದರು. ತಂದೆ ರೇವಣಸಿದ್ಧಪ್ಪ ಅವರೂ ಸೇನೆಯಲ್ಲಿ ಕ್ಯಾಪ್ಟನ್ ಆಗಿ ನಿವೃತ್ತರಾಗಿದ್ದಾರೆ. ಸಹೋದರ ಪ್ರವೀಣ ವಾಯುಪಡೆಯಲ್ಲಿ ಗ್ರೂಪ್ ಕ್ಯಾಪ್ಟನ್ ಆಗಿದ್ದಾರೆ.

ಹುಬ್ಬಳ್ಳಿ: ಬಿಜೆಪಿ ಕಾರ್ಯಕರ್ತರಲ್ಲಿ ಅಮಿತೋತ್ಸಾಹ

ಕಾಂಗ್ರೆಸ್ ಕ್ಷೇತ್ರ ವಶಕ್ಕೆ ಮತ್ತೆ ರೋಡ್ ಶೋ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರೀಯ ಯುವಜನೋತ್ಸವ ಮೇಳವನ್ನು ಉದ್ಘಾಟಿಸಲು ಬಂದು, 8 ಕಿ.ಮೀ ರೋಡ್ ಶೋ ನಡೆಸಿದ್ದು ಮರೆಯುವ ಮುನ್ನವೇ ಗೃಹ ಸಚಿವ ಅಮಿತ್ ಶಾ ಸಹ ಹುಬ್ಬಳ್ಳಿಗೆ ಭೇಟಿ ನೀಡಿ ರೋಡ್ ಶೋ ನಡೆಸಿದರು.

ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಅಮೃತ ಮಹೋತ್ಸವ ಹಾಗೂ ಧಾರವಾಡದಲ್ಲಿ ವಿಧಿವಿಜ್ಞಾನ ವಿಶ್ವವಿದ್ಯಾಲಯದ ಭೂಮಿ ಪೂಜೆಯ ನೆಪದಲ್ಲಿ ಬಂದವರು, ಕಿತ್ತೂರು ಕರ್ನಾಟಕದಲ್ಲಿ ಕಾಂಗ್ರೆಸ್ ಹಿಡಿತದಲ್ಲಿರುವ ಕ್ಷೇತ್ರದಲ್ಲಿ ರೋಡ್‌ಶೋ ಮಾಡಿದರು. ಧಾರವಾಡ ಜಿಲ್ಲೆಯ ಕುಂದಗೋಳ, ಬೆಳಗಾವಿಯ ಎಂ.ಕೆ.ಹುಬ್ಬಳ್ಳಿಯ ರಸ್ತೆಯಲ್ಲಿ ಕಾರ್ಯಕರ್ತರಿಗೆ ಕೈಬೀಸುತ್ತ ಸಾಗಿದ ಅಮಿತ್ ಶಾ ವಾಹನ, ಈ ಭಾಗದ ಕಾರ್ಯಕರ್ತರಲ್ಲಿ ಅಮಿತೋತ್ಸಾಹ ತುಂಬಿತು.

'ದೇಶಕ್ಕಾಗಿ ಎರಡೂ ಕೈ ಎತ್ತಿ, ದೇಶದ ಪ್ರಗತಿಗಾಗಿ ಮುಷ್ಟಿ ಕಟ್ಟಿ, ಬೋಲೊ ಭಾರತ ಮಾತಾ ಕಿ ಜೈ' ಎಂದು ಅಮಿತ್ ಶಾ ಘೋಷಣೆ ಕೂಗಿದಾಗ ಸಾವಿರಾರು ಜನ ಧ್ವನಿಗೂಡಿಸಿದರು. ವೇದಿಕೆಯ ಮುಂದೆ ಸೇರಿದ್ದ ಸಹಸ್ರಾರು ವಿದ್ಯಾರ್ಥಿಗಳ ನಡುವೆ ಇದ್ದ ಕಾರ್ಯಕರ್ತರು ಆಗಾಗ ಜೈ ಶ್ರೀರಾಮ್, ಮೋದಿ, ಮೋದಿ ಎಂದೆಲ್ಲ ಕೂಗಿದರು.

₹25 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಒಳಾಂಗಣ ಕ್ರೀಡಾಂಗಣದ ವಿಶೇಷಗಳನ್ನು ಪ್ರಸ್ತಾಪಿಸಿದ ಅವರು, ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವಂತೆ ಆಗಿದ್ದು, ಮೋದಿ ಅವರ ದೂರದೃಷ್ಟಿಯಿಂದ ಎಂದು ಕೊಂಡಾಡಿದರು. ಸ್ಟಾರ್ಟ್ ಅಪ್‌ಗಳು, ಪೇಟೆಂಟ್‌ಗೆ ಅರ್ಜಿ ಸಲ್ಲಿಸುವಲ್ಲಿ, ನೋಂದಣಿಯಾಗುವಲ್ಲಿ ಭಾರತವು ಏರುಗತಿಯಲ್ಲಿ ಸಾಗಿದೆ. ಖೇಲೊ ಇಂಡಿಯಾ, ಫಿಟ್ ಇಂಡಿಯಾ, ಮೇಕ್‌ಇನ್ ಇಂಡಿಯಾ ಅಭಿಯಾನಗಳ ಫಲಾನುಭವಿಗಳ ಸಂಖ್ಯೆಗಳನ್ನು ಹೇಳುತ್ತ, ಭಾರತವು ಪ್ರಗತಿ ಪಥದಲ್ಲಿದೆ ಎಂಬುದನ್ನು ಪ್ರತಿಪಾದಿಸಿದರು.

5ನೇ ಪುಟ ನೋಡಿ



ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕು ವಿಧಾನ ಸಭೆ ಕ್ಷೇತ್ರ ಚುನಾವಣಾ ಪ್ರಚಾರದ ವಿಜಯ ಸಂಕಲ್ಪ ಯಾತ್ರೆಯ ಅಂಗವಾಗಿ ಕೇಂದ್ರ ಸಚಿವ ಅಮಿತ್ ಶಾ ರೋಡ್ ಶೋ ನಡೆಸಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್ ಇದ್ದರು –ಪ್ರಜಾವಾಣಿ ಚಿತ್ರ

ಬಿಜೆಪಿ ರೈತ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಇಂದಿನಿಂದ

ಬೆಂಗಳೂರು: ಬಿಜೆಪಿ ರೈತ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿಯು ಬೆಳಗಾವಿ ನಗರದಲ್ಲಿ ಭಾನುವಾರದಿಂದ ಎರಡು ದಿನಗಳ ಕಾಲ ನಡೆಯಲಿದೆ ಎಂದು ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ತಿಳಿಸಿದ್ದಾರೆ.

'ಬೆಳಗಾವಿಯ ಮಯೂರ ಪ್ರೆಸಿಡೆನ್ಸಿ ಕ್ಲಬ್‌ನಲ್ಲಿ ನಡೆಯುವ ಕಾರ್ಯಕಾರಿಣಿಯನ್ನು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಭಾನುವಾರ ಮಧ್ಯಾಹ್ನ 12 ಗಂಟೆಗೆ ಉದ್ಘಾಟಿಸುವರು. ರಾಷ್ಟ್ರೀಯ ರೈತ ಮೋರ್ಚಾ ಅಧ್ಯಕ್ಷ ರಾಜಕುಮಾರ ಚಹರ್ ಅಧ್ಯಕ್ಷತೆ ವಹಿಸುವರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಸಚಿವರಾದ ಗೋವಿಂದ ಕಾರಜೋಳ, ಶಶಿಕಲಾ ಜೊಲ್ಲೆ ಸೇರಿದಂತೆ ಹಲವರು ಪಾಲ್ಗೊಳ್ಳಲಿದ್ದಾರೆ' ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಸೋಮವಾರ ಮಧ್ಯಾಹ್ನ 12.30ರಿಂದ ಕಾರ್ಯಕಾರಿಣಿಯ ಸಮಾರೋಪ ಸಮಾರಂಭ ನಡೆಯಲಿದೆ. ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಸಮಾರೋಪ ಭಾಷಣ ಮಾಡುವರು. ಕೃಷಿ ಸಚಿವ ಬಿ.ಸಿ. ಪಾಟೀಲ ಸೇರಿದಂತೆ ಹಲವು ನಾಯಕರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ರಾಜಧಾನಿಯಲ್ಲಿ ಕನ್ನಡ ಭಾಷೆಯ ಸ್ಥಿತಿಗತಿ ಕುರಿತು ಚರ್ಚೆ

ಈಶಾನ್ಯ ಭಾಗದಲ್ಲಿ 16ನೇ ಸಮ್ಮೇಳನ

• ವರುಣ ಹೆಗಡೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 16ನೇ ಸಾಹಿತ್ಯ ಸಮ್ಮೇಳನವನ್ನು ಮಾರ್ಚ್ ಮೊದಲ ವಾರ ನಡೆಸಲು ನಿರ್ಧರಿಸಿದೆ. ನಗರದಲ್ಲಿ ಕನ್ನಡ ಭಾಷೆಯ ಸ್ಥಿತಿಗತಿಯ ಬಗ್ಗೆ ಈ ಸಮ್ಮೇಳನ ಕೇಂದ್ರೀಕೃತವಾಗಲಿದೆ.



ಎಂ. ಪ್ರಕಾಶಮೂರ್ತಿ

15ನೇ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2021ರ ಮಾರ್ಚ್ ತಿಂಗಳು ಹೆಬ್ಬಾಳದಲ್ಲಿ ನಡೆಸಲಾಗಿತ್ತು. ಸಮ್ಮೇಳನದ ಅಧ್ಯಕ್ಷರಾಗಿದ್ದ ಸಾಹಿತಿ ಸಿ. ವೀರಣ್ಣ, ತಮ್ಮ ಭಾಷಣದಲ್ಲಿ ಗಡಿ ವಿವಾದದ ಬಗ್ಗೆ ಪ್ರಸ್ತಾಪಿಸಿದ್ದರು. ವರ್ಷಕ್ಕೊಮ್ಮೆ ನಡೆಯಬೇಕಿದ್ದ ಈ ಸಮ್ಮೇಳನ ಕೋವಿಡ್ ಕಾರಣ ಕಳೆದ ವರ್ಷ ನಡೆದಿರಲಿಲ್ಲ. ಈಗ 16ನೇ ಸಮ್ಮೇಳನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಸಮ್ಮೇಳನಾಧ್ಯಕ್ಷರಾಗಿ ಲೇಖಕಿ ಎಚ್.ಎಸ್. ಶ್ರೀಮತಿ ಆಯ್ಕೆಯಾಗಿದ್ದಾರೆ.

ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ

ಜಿಲ್ಲಾ ಸಮ್ಮೇಳನಗಳಿಗೆ ಸರ್ಕಾರದಿಂದ ₹ 5 ಲಕ್ಷ ಅನುದಾನ ನೀಡಲಾಗುತ್ತಿದೆ. ಸಭಾಂಗಣಗಳ ಬಾಡಿಗೆ ಏರಿಕೆ ಸೇರಿ ವಿವಿಧ ವೆಚ್ಚ ಹೆಚ್ಚಳದಿಂದ ಇಷ್ಟು ಮೊತ್ತದಲ್ಲಿ ಎರಡು ದಿನಗಳ ಸಮ್ಮೇಳನ ನಡೆಸುವುದು ಜಿಲ್ಲಾ ಘಟಕಗಳಿಗೆ ಸವಾಲಾಗಿದೆ. ಆದ್ದರಿಂದ ಬೆಂಗಳೂರು ನಗರ ಜಿಲ್ಲಾ ಘಟಕವು ದಾನಿಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ನೆರವಿನಿಂದ ಅನುದಾನ ಕ್ರೋಢೀಕರಿಸಿ, ಸಮ್ಮೇಳನ ನಡೆಸಲು ನಿರ್ಧರಿಸಿದೆ.

'₹ 5 ಲಕ್ಷ ಅನುದಾನದಲ್ಲಿ ಸಮ್ಮೇಳನ ನಡೆಸಲು ಸಾಧ್ಯವಿಲ್ಲ. ಕಸಾಪ ಕೇಂದ್ರ ಘಟಕದ ಅಧ್ಯಕ್ಷರು ಸರ್ಕಾರದಿಂದ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿಸುವುದಾಗಿ ಹೇಳಿದ್ದರು. ಆ ಅನುದಾನ ಬಂದರೆ ಸಮ್ಮೇಳನದ ಕೆಲಸಕ್ಕೆ ಸಹಕಾರಿ ಆಗಲಿದೆ. ದಾನಿಗಳು ಹಾಗೂ ಸಂಘ-ಸಂಸ್ಥೆಗಳ ನೆರವು ಪಡೆಯಲಾಗುತ್ತಿದೆ' ಎಂದು ಎಂ. ಪ್ರಕಾಶಮೂರ್ತಿ ಹೇಳಿದರು.

> ಈಶಾನ್ಯ ಬೆಂಗಳೂರಿನಲ್ಲಿ ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ. ಶೀಘ್ರದಲ್ಲಿಯೇ ಸ್ಥಳ, ದಿನಾಂಕ ಘೋಷಿಸಲಾಗುವುದು.
>
> **ಎಂ. ಪ್ರಕಾಶಮೂರ್ತಿ,**
> ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ

ಕೋವಿಡ್ ಕಾರಣ ಕಳೆದ ಬಾರಿ ಸಮ್ಮೇಳನಾಧ್ಯಕ್ಷರ ಮೆರವಣಿಗೆಯನ್ನು ಮೊಟಕುಗೊಳಿಸಲಾಗಿತ್ತು. ಹೆಚ್ಚು ಜನರಿಗೆ ಆಹ್ವಾನವನ್ನೂ ನೀಡಿರಲಿಲ್ಲ. ವರ್ಷದ ಬಳಿಕ ನಡೆಯುತ್ತಿರುವ ಈ ಸಮ್ಮೇಳನವನ್ನು ಅದ್ದೂರಿಯಾಗಿ ನಡೆಸಲು ಪರಿಷತ್ತಿನ ನಗರ ಜಿಲ್ಲಾ ಘಟಕ ನಿರ್ಧರಿಸಿದೆ. ಈ ಘಟಕಕ್ಕೆ ಎಂ. ಪ್ರಕಾಶಮೂರ್ತಿ ಅವರು ಅಧ್ಯಕ್ಷರಾದ ಬಳಿಕ ನಡೆಯುತ್ತಿರುವ ಪ್ರಥಮ ಸಮ್ಮೇಳನವೂ ಇದಾಗಿದೆ. ಈಶಾನ್ಯ ಭಾಗದಲ್ಲಿ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ. ವಸಂತನಗರದಲ್ಲಿರುವ ಅಂಬೇಡ್ಕರ್ ಭವನದಲ್ಲಿ ಸಮ್ಮೇಳನ ನಡೆಯುವ ಸಾಧ್ಯತೆಯಿದೆ.

8 ಗೋಷ್ಠಿಗಳು: ಎರಡು ದಿನ ನಡೆಯುವ ಸಮ್ಮೇಳನದಲ್ಲಿ 8 ಗೋಷ್ಠಿಗಳನ್ನು ನಡೆಸಲು ನಿರ್ಧರಿಸಲಾಗಿದೆ. ಬೆಂಗಳೂರಿನಲ್ಲಿ ಕನ್ನಡದ ವಾತಾವರಣ, ವಲಸಿಗರಿಗೆ ಕನ್ನಡ ಕಲಿಕೆ, ನಗರದ ಕನ್ನಡ ಶಾಲೆಗಳ ಸ್ಥಿತಿಗತಿ, ಕನ್ನಡ ಭಾಷೆಯಲ್ಲಿ ಕಲಿಕೆ ಬಗ್ಗೆಯೂ ಸಮ್ಮೇಳನದಲ್ಲಿ ಚರ್ಚೆ ನಡೆಯಲಿದೆ. ಮಹಿಳೆಯರ ಸಾಮಾಜಿಕ, ಆರ್ಥಿಕ ಹಾಗೂ ಉದ್ಯೋಗ ಸಬಲೀಕರಣ ಸೇರಿ ವಿವಿಧ ವಿಷಯಗಳ ಮೇಲೆಯೂ ಗೋಷ್ಠಿಗಳನ್ನು ನಡೆಸುವ ಬಗ್ಗೆ ವಿಷಯ ಆಯ್ಕೆ ಸಮಿತಿ ಸಲಹೆ ನೀಡಿದೆ.

'ಅರ್ಥಪೂರ್ಣವಾಗಿ ಸಮ್ಮೇಳನ ನಡೆಸಲಾಗುವುದು. 'ರಾಜ್ಯ ರಾಜಧಾನಿಯಲ್ಲಿ ಕನ್ನಡ ಉಳಿದರೆ, ಇಡೀ ರಾಜ್ಯದಲ್ಲಿ ಕನ್ನಡ ಉಳಿದೀತು' ಎನ್ನುವ ಧ್ಯೇಯವಾಕ್ಯಕ್ಕೆ ಪೂರಕವಾದ ಗೋಷ್ಠಿಗಳು ನಡೆಯಲಿವೆ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆಯೋಜಿಸಲಾಗುವುದು. ಲಾಂಛನ ವಿನ್ಯಾಸ ಸೇರಿ ವಿವಿಧ ಪ್ರಕ್ರಿಯೆಗಳು ನಡೆಯುತ್ತಿವೆ' ಎಂದು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ತಿಳಿಸಿದರು.



'ವಖಾರಿಧೂಸ' ಬಿಡುಗಡೆ

ಬೀ-ಕಲ್ಚರ್ ಬೆಂಗಳೂರು, ಸಪ್ನ ಬುಕ್ ಹೌಸ್ ಜಂಟಿಯಾಗಿ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಿ.ಎಸ್. ಚೌಗಲೆ (ಎಡದಿಂದ ಮೊದಲಿಗರು) ಅವರ 'ವಖಾರಿಧೂಸ' ಕೃತಿಯನ್ನು ಚಲನಚಿತ್ರ ನಿರ್ದೇಶಕ ಎಂ.ಎಸ್. ಸತ್ಯು ಬಿಡುಗಡೆ ಮಾಡಿದರು. ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಹಾಗೂ ಲೇಖಕಿ ವಿಜಯಾ ಇದ್ದಾರೆ.

ಭಾನುವಾರದ ಪುರವಣಿ ಓದಿರಿ

ಚೆಸ್: ಬಿಎಂಎಸ್ ಕಾಲೇಜಿಗೆ 11 ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿ ಪುರಂನ ಬಿಎಂಎಸ್ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ 11 ವಿದ್ಯಾರ್ಥಿಗಳಿಗೆ ಅಖಿಲ ಭಾರತ ಮಟ್ಟದ ಚೆಸ್ ಟೂರ್ನಿಯಲ್ಲಿ ಬಹುಮಾನ ಲಭಿಸಿದೆ.

ಭರತ್ ಕೃಷ್ಣಾ ರಾಜೇಶ್ ₹ 25 ಸಾವಿರ, ಎ.ಹರ್ಷಿಣಿ ₹ 10 ಸಾವಿರ ನಗದು ಬಹುಮಾನ ಪಡೆದಿದ್ದಾರೆ. ಎಂಟು ವಿದ್ಯಾರ್ಥಿಗಳಿಗೆ ಸಮಾಧಾನಕರ ಬಹುಮಾನ ತಲಾ ₹ 5 ಸಾವಿರ, ರೋಹಿಲ್.ಆರ್.ಎಲ್. ಅವರು ವಿಶೇಷ ಬಹುಮಾನಕ್ಕೆ ಪಾತ್ರರಾಗಿದ್ದಾರೆ ಎಂದು ಕಾಲೇಜಿನ ಪ್ರಕಟಣೆ ಮಾಹಿತಿ ನೀಡಿದೆ.

ಕೃಷಿ ಕಾಯ್ದೆ ಹಿಂಪಡೆಯಲು ಆಗ್ರಹ

ಬೆಂಗಳೂರು: 'ರಾಜ್ಯ ಸರ್ಕಾರ ಜಾರಿಗೊಳಿಸಿರುವ ಕೃಷಿ ಕಾಯ್ದೆಗಳನ್ನು ಕೂಡಲೇ ಹಿಂಪಡೆಯಬೇಕು. ಇದು ನಮ್ಮ ಕೊನೆಯ ಮನವಿ' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಿಳಿಸಿದೆ.

'ಕೇಂದ್ರ ಸರ್ಕಾರ ಈಗಾಗಲೇ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದಿದೆ. ಆದರೆ, ರಾಜ್ಯ ಸರ್ಕಾರ ಮಾತ್ರ ಬೆಂಗಳೂರು ಮತ್ತು ಬೆಳಗಾವಿ ಅಧಿವೇಶನದಲ್ಲಿ ಹಿಂಪಡೆಯಲಾಗುವುದು ಎಂಬ ಭರವಸೆ ನೀಡುತ್ತಿದ್ದು, ರೈತರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದೆ. ಈ ಕಾಯ್ದೆಗಳನ್ನು ಮುಂದುವರಿಸಬೇಕು ಎಂದು ಸರ್ಕಾರದ ಮೇಲೆ ಯಾರಾದರೂ ಒತ್ತಡ ಹಾಕುತ್ತಿದ್ದಾರಾ? ಅಥವಾ ರೈತರನ್ನು ಕೃಷಿ ಕ್ಷೇತ್ರದಿಂದ ಹೊರಗಿಡುವ ಉದ್ದೇಶದಿಂದ ಈ ರೀತಿ ಮಾಡಲಾಗುತ್ತಿದೆಯೇ? ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ ಶನಿವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ಈಗಾಗಲೇ ಎಪಿಎಂಸಿ ಕಾಯ್ದೆಯಿಂದ ಶೇ 90ರಷ್ಟು ಕೃಷಿ ಮಾರುಕಟ್ಟೆ ನಿರ್ಜೀವಗೊಂಡಿದೆ. ಕಂದಾಯ ಕಾಯ್ದೆ ನೀತಿಯಿಂದಾಗಿ ಪ್ರತಿದಿನ ರೈತರು ಕೃಷಿ ಭೂಮಿಯನ್ನು ಕಳೆದುಕೊಂಡು, ಕೃಷಿ ಕ್ಷೇತ್ರದಿಂದಲೇ ವಂಚಿತರಾಗುತ್ತಿದ್ದಾರೆ. ಆದರೆ, ರಾಜ್ಯ ಸರ್ಕಾರ ಮಾತ್ರ ಧರ್ಮದ ಹೆಸರಿನಲ್ಲಿ ಜಾನುವಾರು ಹತ್ಯೆ ನಿಷೇಧ ಕಾಯ್ದೆ ಜಾರಿಗೆ ತಂದಿದೆ. ಇದರಿಂದ ರೈತರು ಪಶುಪಾಲನೆ, ಹೈನುಗಾರಿಕೆ ಮಾಡುವುದು ಕಷ್ಟವಾಗಿದೆ' ಎಂದು ಹೇಳಿದರು.

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೈನುಗಾರಿಕೆಯನ್ನು ಕಾರ್ಪೊರೇಟ್ ಕಂಪನಿಗಳಿಗೆ ನೀಡುವ ಉತ್ಸಾಹ ತೋರಿಸುತ್ತಿದ್ದಾರೆ. ಆದ್ದರಿಂದಲೇ, ಮಂಡ್ಯಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅಮೂಲ್ ನೊಂದಿಗೆ ನಂದಿನಿಯನ್ನು ವಿಲೀನಗೊಳಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದರು' ಎಂದರು.

'ಜ. 31ರಂದು ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ನಡೆಯುವ ರಾಜ್ಯ ರೈತ ಸಂಘದ ಕಾರ್ಯಕಾರಿ ಸಭೆಯಲ್ಲಿ ಈ ಎಲ್ಲಾ ಸಮಸ್ಯೆಗಳ ಬಗ್ಗೆ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಹೇಳಿದರು.

'ಎಜು ಸ್ಟೇಟಸ್' ಜ.31ಕ್ಕೆ

ಬೆಂಗಳೂರು: ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿಯಿಂದ (ಕ್ಯಾಮ್ಸ್) ಜ. 31ಕ್ಕೆ 'ಎಜು ಸ್ಟೇಟಸ್-2023' ಕಾರ್ಯಕ್ರಮವನ್ನು ಬೆಂಗಳೂರಿನ ಅರಮನೆ ಮೈದಾನದ ಶೀಶ್ ಮಹಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

'ರಾಜ್ಯದಲ್ಲಿ ಶಿಕ್ಷಣದ ಪ್ರಸ್ತುತ ಪರಿಸ್ಥಿತಿಯ ಅವಲೋಕನ' ಎಂಬ ರಾಜ್ಯಮಟ್ಟದ ವಿಚಾರಸಂಕಿರಣವನ್ನು ಆಯೋಜಿಸಲಾಗಿದೆ. ಲೇಖಕ ಮಣ್ಣೆ ಮೋಹನ್ ಅವರ 'ಸಂಕಷ್ಟಹರ ಕ್ಯಾಮ್ಸ್' (ಕ್ಯಾಮ್ಸ್ ಸಂಘಟನೆಯ ಉದಯ, ನಡೆದುಬಂದ ಹಾದಿ ಮತ್ತು ಹೋರಾಟದ ಕಥನ) ಎಂಬ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ.

ಕೋಲಾರ ಕ್ಷೇತ್ರದ ಸಂಸದ ಮುನಿಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟನೆಗೊಳಿಸಲಿದ್ದಾರೆ. ವಿಧಾನಪರಿಷತ್ ಸದಸ್ಯ ಪುಟ್ಟಣ್ಣ, ತುಮಕೂರಿನ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ವೀರೇಶಾನಂದ ಸರಸ್ವತಿ ಸ್ವಾಮೀಜಿ, ಸಚಿವ ವಿ. ಸೋಮಣ್ಣ, ದೆಹಲಿ ಶಾಸಕಿ ಅತಿಶಿ ಭಾಗವಹಿಸಲಿದ್ದಾರೆ ಎಂದು ಕ್ಯಾಮ್ಸ್ ಸಂಘಟನೆಯ ಕಾರ್ಯದರ್ಶಿ ಡಿ. ಶಶಿಕುಮಾರ್ ಪ್ರಕಟಣೆ ತಿಳಿಸಿದ್ದಾರೆ.

ಪಿಎಸ್‌ಐ ಮರು ಪರೀಕ್ಷೆ ಸಿದ್ಧ: ಡಿಜಿಪಿ ಟ್ವೀಟ್

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) 545 ಹುದ್ದೆಗಳಿಗೆ ಮರು ಪರೀಕ್ಷೆ ನಡೆಸಲು ಪೊಲೀಸ್ ಇಲಾಖೆ ಸಿದ್ಧವಿದೆ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಶನಿವಾರ ಟ್ವೀಟ್ ಮಾಡಿದ್ದಾರೆ.

'ಪಿಎಸ್‌ಐ ನೇಮಕಾತಿ ಪ್ರಕರಣ ನ್ಯಾಯಾಲಯದಲ್ಲಿದೆ. ಅಲ್ಲಿ ಪ್ರಕರಣ ಇತ್ಯರ್ಥ ಆಗುವವರೆಗೆ ಮರು ಪರೀಕ್ಷೆ ನಡೆಸಲು ಅವಕಾಶ ಇಲ್ಲ. ನ್ಯಾಯಾಲಯದ ಅಂತಿಮ ಆದೇಶಕ್ಕೆ ಇಲಾಖೆ ಬದ್ಧ' ಎಂದು ಉಲ್ಲೇಖಿಸಿದ್ದಾರೆ.

'ಆರ್‌ಎಸ್‌ಐ (ಸಿಎಆರ್ / ಡಿಎಆರ್), ವಿಶೇಷ ಆರ್‌ಎಸ್‌ಐ (ಕೆಎಸ್‌ಆರ್‌ಪಿ) ಹಾಗೂ ಪಿಎಸ್‌ಐ (ರಾಜ್ಯ ಕೈಗಾರಿಕಾ ಭದ್ರತಾ ಪಡೆ) ನೇಮಕಾತಿಗೆ ಈಗಾಗಲೇ ಪರೀಕ್ಷೆ ನಡೆಸಲಾಗಿದೆ' ಎಂದೂ ತಿಳಿಸಿದ್ದಾರೆ.

ಸರ್ಕಾರಿ ಕಲಾ ಕಾಲೇಜಿಗೆ ಎ+ ಮಾನ್ಯತೆ

ಬೆಂಗಳೂರು: ನಗರದ ಸರ್ಕಾರಿ ಕಲಾ ಕಾಲೇಜಿಗೆ ರಾಷ್ಟ್ರೀಯ ಮೌಲ್ಯಾಂಕನ ಹಾಗೂ ಮಾನ್ಯತಾ ಪರಿಷತ್ (ಎನ್‌ಎಎಸಿ) ಎ + ಮಾನ್ಯತೆ ನೀಡಿದೆ.

ಕಾಲೇಜು ಶಿಕ್ಷಣ ಇಲಾಖೆಯಲ್ಲಿ 440 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿವೆ. ಅದರಲ್ಲಿ 3.29 ಸಿಜಿಪಿಎ ಹೆಚ್ಚು ಅಂಕ ಪಡೆದಿರುವ ಸರ್ಕಾರಿ ಕಲಾ ಕಾಲೇಜಿಗೆ 4ನೇ ಆವೃತ್ತಿಯಲ್ಲಿ ಎ + ಮಾನ್ಯತೆ ಲಭ್ಯವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ಸುಪ್ರೀಂ ತೀರ್ಪಿನಂತೆ ಪಿಂಚಣಿ ನೀಡಿ'

ಪ್ರತಿಭಟನಾ ಸಭೆ ನಡೆಸಿದ ನಿವೃತ್ತ ನೌಕರರು; ಸುತ್ತೋಲೆ ವಾಪಸ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಂಚಣಿಗೆ ಸಂಬಂಧಿಸಿದಂತೆ ಕೇಂದ್ರೀಯ ಭವಿಷ್ಯ ನಿಧಿ ಪ್ರಾಧಿಕಾರವು ಹೊರಡಿಸಿದ ಸುತ್ತೋಲೆಯಿಂದ ಪಿಂಚಣಿದಾರರ ಹಿತಾಸಕ್ತಿಗೆ ಧಕ್ಕೆಯಾಗಿದೆ. ಸುಪ್ರೀಂ ಕೋರ್ಟಿನ ತೀರ್ಪಿನ ಅನುಸಾರ ಪಿಂಚಣಿ ನೀಡಬೇಕು' ಎಂದು ನಿವೃತ್ತ ನೌಕರರು ಆಗ್ರಹಿಸಿದರು.

ಕೇಂದ್ರೀಯ ಭವಿಷ್ಯ ನಿಧಿ ಪ್ರಾಧಿಕಾರವು ಕರೆದಿದ್ದ ಇಪಿಎಸ್-95 ನಿವೃತ್ತ ನೌಕರರ ಪಿಂಚಣಿ ಅದಾಲತ್‌ನಲ್ಲಿ ಎನ್‌ಎಸಿ, ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿಯ ನಿವೃತ್ತ ನೌಕರರು ಭಾಗವಹಿಸಿ, ಪ್ರತಿಭಟನಾ ಸಭೆ ನಡೆಸಿದರು.

'ಕೇಂದ್ರೀಯ ಭವಿಷ್ಯ ನಿಧಿ ಪ್ರಾಧಿಕಾರ ಹೊರಡಿಸಿರುವ ಸುತ್ತೋಲೆ ನಿವೃತ್ತರ ಪಾಲಿಗೆ ಮೃತ್ಯುಕೂಪವಾಗಿದೆ. ಅದನ್ನು ಕೂಡಲೇ ವಾಪಸ್ ಪಡೆದು, ಸುಪ್ರೀಂ ಕೋರ್ಟಿನ ತೀರ್ಪಿನ ಅನುಸಾರ ಪಿಂಚಣಿ ನೀಡಬೇಕು. ಅರ್ಜಿ ಸಲ್ಲಿಸುವ ಸರಳ ಮಾಹಿತಿಯನ್ನು ಅಂತರ್ಜಾಲದಲ್ಲಿ ಸೂಕ್ತ ರೀತಿಯಲ್ಲಿ ಪ್ರಕಟಿಸಬೇಕು' ಎಂದು ನಿವೃತ್ತ ನೌಕರ ನಂಜುಂಡೇಗೌಡ ಆಗ್ರಹಿಸಿದರು.

'ಇಳಿ ವಯಸ್ಸಿನಲ್ಲಿರುವ ನಿವೃತ್ತರ ಬಗ್ಗೆ ಸರ್ಕಾರ ಅಥವಾ ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ ಗಮನ ಹರಿಸುತ್ತಿಲ್ಲ. ಹೀಗಾಗಿ, ನಿವೃತ್ತರ ಬದುಕು ಅತ್ಯಂತ ಶೋಚನಿಯವಾಗಿದೆ. ಕೇಂದ್ರ ಸರ್ಕಾರ ಕೂಡಲೇ ಮಧ್ಯ ಪ್ರವೇಶಿಸಿ, ನಮ್ಮ ಸಮಸ್ಯೆಯನ್ನು ಬಗೆಹರಿಸಬೇಕು' ಎಂದು ಶಂಕರ್ ಕುಮಾರ್ ಒತ್ತಾಯಿಸಿದರು.

'ಕನಿಷ್ಠ ಪಿಂಚಣಿ ₹ 7,500, ಭತ್ಯೆ ಹಾಗೂ ವೈದ್ಯಕೀಯ ಸೌಲಭ್ಯ ನೀಡುವ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು. ನಾವೆಲ್ಲರೂ ವಿವಿಧತೆಯಲ್ಲಿ ಏಕತೆ ಕಾಣಬೇಕು. ಎಲ್ಲರೂ ಒಟ್ಟಾಗಿ ಹೋರಾಟ ಮಾಡಬೇಕು' ಎಂದು ಎನ್‌ಎಸಿ ಅಧ್ಯಕ್ಷ ಜಿಎಸ್‌ಎಂ ಸ್ವಾಮಿ ಹೇಳಿದರು.


ಪಿಂಚಣಿಗೆ ಆಗ್ರಹಿಸಿ ಭವಿಷ್ಯ ನಿಧಿ ಕಚೇರಿ ಮುಂದೆ ನಿವೃತ್ತ ನೌಕರರು ಪ್ರತಿಭಟನೆ ನಡೆಸಿದರು.

ಬಿಎಂಟಿಸಿ ಬಸ್ ಡಿಕ್ಕಿ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ–ನಾಗವಾರ ಮಾರ್ಗದಲ್ಲಿ ಬಿಎಂಟಿಸಿ ಬಸ್ ಡಿಕ್ಕಿಯಾಗಿ ಬೈಕ್ ಸವಾರ ಆಯೂಬ್ (35) ಎಂಬುವವರು ಮೃತಪಟ್ಟಿದ್ದಾರೆ.

ಸ್ಥಳದಲ್ಲಿದ್ದ ಮೂವರು ಗಾಯಗೊಂಡಿದ್ದಾರೆ.

ಗಾಯಗೊಂಡಿರುವ ರಫಿಯುಲ್ಲಾ, ಮಸಾದ್ದೀಕ್ ಹಾಗೂ ಮುನ್ನಾವರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಭಾರತೀಯ ಟಿ.ಸಿ ಜಂಕ್ಷನ್ ಬಳಿ ನಿಂತಿದ್ದ ಕಾರು ಹಾಗೂ ಬೈಕ್‌ಗಳಿಗೆ ಹೆಗಡೆ ನಗರದ ಕಡೆಗೆ ತೆರಳುತ್ತಿದ್ದ ಬಿಎಂಟಿಸಿ ಬಸ್ ಡಿಕ್ಕಿಯಾದ ಪರಿಣಾಮ ಈ ಅವಘಡ ನಡೆದಿದೆ.

ಚಾಲಕನ ನಿಯಂತ್ರಣ ಕಳೆದುಕೊಂಡಿದ್ದ ಬಸ್ ಎರಡು ಕಾರು ಹಾಗೂ ಬೈಕ್‌ಗೆ ಡಿಕ್ಕಿಯಾಗಿದೆ.

ಈ ಅವಘಡಕ್ಕೆ ಬಸ್‌ನ ಬ್ರೇಕ್ ವಿಫಲವಾಗಿರುವುದು ಕಾರಣವೆಂದು ಹೇಳಲಾಗಿದೆ. ಘಟನೆ ಸಂಬಂಧ ಚಿಕ್ಕಜಾಲ ಪೊಲೀಸರು ಬಸ್ ಚಾಲಕ ಗೋವಿಂದರಾಜು ಅವರನ್ನು ವಶಕ್ಕೆ ಪಡೆದಿದ್ದಾರೆ.

ಅತ್ಯಾಚಾರಕ್ಕೆ ಕುಮ್ಮಕ್ಕು: 10 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರಕ್ಕೆ ಕುಮ್ಮಕ್ಕು ನೀಡಿದ್ದ ಅಪರಾಧಿ ಸರಸ್ವತಿಗೆ (45) ಎಫ್‌ಟಿಎಸ್‌ಸಿ 4ನೇ ನ್ಯಾಯಾಲಯವು 10 ವರ್ಷಗಳ ಜೈಲು ಶಿಕ್ಷೆ, ₹ 5 ಸಾವಿರ ದಂಡ ವಿಧಿಸಿ ಆದೇಶಿಸಿದೆ.

15 ವರ್ಷದ ಬಾಲಕಿಯ ಅಜ್ಜಿ ಜಯನಗರದ ಬಿ.ಟಿ. ಆಸ್ಪತ್ರೆಯಲ್ಲಿ 2013ರ ಜ.15ರಂದು ಚಿಕಿತ್ಸೆಗೆ ದಾಖಲಾಗಿದ್ದರು.

ಅದೇ ಆಸ್ಪತ್ರೆಯಲ್ಲಿ ದಾಖಲಾಗಿದ್ದ ತಂದೆ ನೋಡಲು, ಶಿಕ್ಷೆಗೆ ಒಳಗಾಗಿರುವ ಸಂಜಯ್ ಬಂದು ಹೋಗುತ್ತಿದ್ದ ಅಲ್ಲಿದ್ದ ಸರಸ್ವತಿ ಎಂಬಾಕೆ ಬಾಲಕಿಯನ್ನು ಪರಿಚಯಿಸಿಕೊಂಡು ಮನೆಗೆ ಕಳುಹಿಸುವುದಾಗಿ ಸುಳ್ಳು ಹೇಳಿ, ತನ್ನ ಮನೆಗೆ ಕರೆದೊಯ್ದಿದ್ದಳು. ಅಲ್ಲಿ ಸಂಜಯ್ ಜತೆಗೆ ಮದುವೆಯಾಗುವಂತೆ ಬಲವಂತ ಮಾಡಿ ಮನೆಯಲ್ಲೇ ಇಟ್ಟುಕೊಂಡಿದ್ದಳು.

ಆ ವೇಳೆಯಲ್ಲಿ ಬಾಲಕಿ ಮೇಲೆ ಸಂಜಯ್ ಅತ್ಯಾಚಾರ ನಡೆಸಿದ್ದ. ಅತ್ಯಾಚಾರಕ್ಕೆ ಕುಮ್ಮಕ್ಕು ನೀಡಿದ ಆರೋಪದ ಮೇರೆಗೆ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಸಿಸಿಎಚ್51ನೇ ನ್ಯಾಯಾಲಯವು ಈ ಹಿಂದೆ ಅಪರಾಧಿ ಸಂಜಯ್‌ಗೆ 10 ವರ್ಷ ಜೈಲು ಶಿಕ್ಷೆ ಹಾಗೂ ₹ 15 ಸಾವಿರ ದಂಡ ವಿಧಿಸಿತ್ತು. ಆಗ 2ನೇ ಆರೋಪಿ ಸರಸ್ವತಿ ತಲೆಮರೆಸಿಕೊಂಡಿದ್ದಳು.

ನಂತರ, ಸರಸ್ವತಿಯನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದು ಈಗ ಪ್ರಕರಣದ 2ನೇ ಅಪರಾಧಿಗೂ ಶಿಕ್ಷೆ ಪ್ರಕಟವಾಗಿದೆ.

ಸರ್ಕಾರಿ ವಕೀಲ ಆರ್.ರವಿಚಂದ್ರ ವಾದ ಮಂಡಿಸಿದ್ದರು.

ಅತ್ಯಾಚಾರ: ಅಪರಾಧಿಗೆ 20 ವರ್ಷ ಕಠಿಣ ಜೈಲುಶಿಕ್ಷೆ



ಬೆಂಗಳೂರು: ಬಾಲಕಿ ಮೇಲೆ ಅತ್ಯಾಚಾರ ನಡೆಸಿದ್ದ ಅಪರಾಧಿ ಸಂತೋಷ್ ರುದ್ರಪಾಲ್ ಎಂಬಾತನಿಗೆ 20 ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ಎಫ್‌ಟಿಎಸ್‌ಸಿ 3ನೇ ನ್ಯಾಯಾಲಯವು ಆದೇಶಿಸಿದೆ.

ಬಾಲಕಿ ಕುಟುಂಬಸ್ಥರು ಬಡಾವಣೆಯೊಂದರ ಶೆಡ್‌ನಲ್ಲಿ ವಾಸವಿದ್ದರು. ಶೆಡ್ ಪಕ್ಕದಲ್ಲೇ ಅಪರಾಧಿ ನೆಲೆಸಿದ್ದ. 2019ರ ಮಾರ್ಚ್ 4ರಂದು ಬಾಲಕಿ ಕುಟುಂಬಸ್ಥರು ಇಲ್ಲದಿರುವಾಗ ಅತ್ಯಾಚಾರ ಎಸಗಿ ಸಂತೋಷ್ ಪರಾರಿಯಾಗಿದ್ದ. ಬೇಗೂರು ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಅಪರಾಧಿಗೆ ಭಾರತೀಯ ದಂಡ ಸಂಹಿತೆ ಕಲಂ 376 ಅಡಿ 10 ವರ್ಷಗಳ ಕಠಿಣ ಶಿಕ್ಷೆ, ₹ 10 ಸಾವಿರ ದಂಡ, ಈ ದಂಡದ ಮೊತ್ತವನ್ನು ಪಾವತಿಸದಿದ್ದರೆ ಒಂದು ವರ್ಷ ಹೆಚ್ಚುವರಿ ಜೈಲು ಶಿಕ್ಷೆ, ಕಲಂ 4 ಹಾಗೂ ಪೋಕ್ಸೊ ಕಾಯ್ದೆ ಅಡಿ 20 ವರ್ಷಗಳ ಕಠಿಣ ಶಿಕ್ಷೆ ಹಾಗೂ ₹ 10 ಸಾವಿರ ದಂಡ, ತಪ್ಪಿದಲ್ಲಿ ಒಂದು ವರ್ಷ ಶಿಕ್ಷೆ ವಿಧಿಸಿ ನ್ಯಾಯಾಧೀಶೆ ಇಷ್ರತ್ ಜಹಾನ್ ಅರ ಆದೇಶಿಸಿದ್ದಾರೆ.

ಸಂತ್ರಸ್ತ ಬಾಲಕಿಗೆ ₹ 4 ಲಕ್ಷ ಪರಿಹಾರ ಹಾಗೂ ಅಪರಾಧಿಗೆ ವಿಧಿಸಿದ್ದ ದಂಡದಲ್ಲಿ ₹ 15 ಸಾವಿರ ನೀಡುವಂತೆ ಆದೇಶದಲ್ಲಿ ತಿಳಿಸಿದ್ದಾರೆ.

ಸರ್ಕಾರಿ ವಕೀಲರಾದ ಗೀತಾ ರಾಮಕೃಷ್ಣ ಗೊರವರ ವಾದಿಸಿದ್ದರು.

277 ಕೆ.ಜಿ ಗಾಂಜಾ ಸಾಗಣೆ: ಜಾಮೀನಿಗೆ ಹೈಕೋರ್ಟ್ ನಕಾರ

ಬೆಂಗಳೂರು: ಕಾರು ಮತ್ತು ಲಾರಿಯಲ್ಲಿ ಒಟ್ಟು 277 ಕೆ.ಜಿಯಷ್ಟು ಗಾಂಜಾ ಸಾಗಣೆ ಮಾಡುತ್ತಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಜೈಲಿನಲ್ಲಿರುವ ಬಂಧಿತನಿಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಕೊಡಗು ಜಿಲ್ಲೆ ಕುಶಾಲನಗರದ ನಿವಾಸಿ ಸೈಯದ್ ಮೊಹಮ್ಮದ್ ಅಲಿಯಾಸ್ ನಸೀಮ್ ಎಂಬುವವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಜಾಮೀನು ನೀಡಲು ಈ ಪ್ರಕರಣ ಯೋಗ್ಯವಾಗಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಕಾರಿನ ಡಿಕ್ಕಿಯಲ್ಲಿ ಸಾಗಣೆ ಮಾಡುತ್ತಿದ್ದುದು ಗಾಂಜಾ ಎಂಬುದನ್ನು ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿ ದೃಢಪಡಿಸಿದೆ. ಹೀಗಾಗಿ, ಜಾಮೀನು ಅರ್ಜಿಯನ್ನು ವಜಾಗೊಳಿಸಲಾಗಿದೆ’ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ಮೊಹಮ್ಮದ್ ತೆರಳುತ್ತಿದ್ದ ಕಾರಿನಲ್ಲಿ 60 ಕೆ.ಜಿ ಮತ್ತು ಆ ಕಾರನ್ನು ಹಿಂಬಾಲಿಸಿಕೊಂಡು ಹೋಗುತ್ತಿದ್ದ ಲಾರಿಯೊಳಗೆ ಇದ್ದ 217 ಕೆ.ಜಿಯಷ್ಟು ಪ್ರಮಾಣದ ಗಾಂಜಾವನ್ನು ಮಂಗಳೂರು ನಗರದ ಆರ್ಥಿಕ ಅಪರಾಧಗಳ ತನಿಖೆ ಮತ್ತು ಮಾದಕ ವಸ್ತು ಸಾಗಣೆ ನಿಗ್ರಹ ದಳದ ಪೊಲೀಸರು ವಶಪಡಿಸಿಕೊಂಡಿದ್ದರು. ಆರೋಪಿ ಸೈಯದ್ ಮೊಹಮ್ಮದ್ ಕಳೆದ ಒಂದು ವರ್ಷ ಏಳು ತಿಂಗಳಿನಿಂದ ಜೈಲಿನಲ್ಲಿದ್ದಾರೆ.

ಆಂಧ್ರದ ಮೂವರ ಬಂಧನ, ₹ 37 ಲಕ್ಷ ನಗದು ವಶ

ಪಿಎಸ್‌ಐ ಸಮವಸ್ತ್ರ ಧರಿಸಿ ₹ 80 ಲಕ್ಷ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ಸಮವಸ್ತ್ರ ಧರಿಸಿ, ಅಡಿಕೆ ವ್ಯಾಪಾರಿಯ ಕಾರಿನಲ್ಲಿದ್ದ ₹ 80 ಲಕ್ಷವನ್ನು ದೋಚಿ ಪರಾರಿಯಾಗಿದ್ದ ಆಂಧ್ರಪ್ರದೇಶದ ಮೂವರು ಆರೋಪಿಗಳನ್ನು ವಿಲ್ಸನ್ ಗಾರ್ಡನ್ ಪೊಲೀಸರು ಬಂಧಿಸಿದ್ದಾರೆ.

ಕಡಪ ಜಿಲ್ಲೆಯ ಭತಲ್ ಶಿವರಾಮ್ ಕೃಷ್ಣ ಯಾದವ್ ಅಲಿಯಾಸ್ ‘ಗಲ್ಲಿ ರೌಡಿ’ (19), ಸಹೋದರರಾದ ಶೇಖ್ ಚೆಂಪತಿ ಲಾಲ್‌ಬಾಷಾ (36) ಹಾಗೂ ಶೇಖ್ ಚೆಂಪತಿ ಜಾಕೀರ್ (27) ಎಂಬುವವರನ್ನು ಬಂಧಿಸಲಾಗಿದೆ. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ.

‘ಭತಲ್ ಶಿವರಾಮ್ ನೀಡಿದ ಮಾಹಿತಿ ಮೇರೆಗೆ, ರಕ್ತಚಂದನ ಅಕ್ರಮ ಸಾಗಾಟ ಹಾಗೂ ಮಾರಾಟ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ತಿರುಪತಿಯ ವಿಶೇಷ ಕಾರಾಗೃಹದಲ್ಲಿದ್ದ ಸಹೋದರರನ್ನು ಅಧಿಕಾರಿಗಳ ಅನುಮತಿ ಪಡೆದು ಬಂಧಿಸಿ ವಿಚಾರಣೆಗೆ ಒಳಪಡಿಸಲಾಯಿತು. ಆಂಧ್ರಪ್ರದೇಶದ ಬೇರೆ ಬೇರೆ ಠಾಣೆಗಳಲ್ಲಿ ಶೇಖ್ ಚೆಂಪತಿ ಲಾಲ್ ಬಾಷಾ ವಿರುದ್ಧ 54 ಹಾಗೂ ಶೇಖ್ ಚೆಂಪತಿ ಜಾಕೀರ್ ವಿರುದ್ಧ 33 ಪ್ರಕರಣಗಳಿವೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಏನಿದು ಪ್ರಕರಣ?: ‘ಡಿಸೆಂಬರ್ 27ರಂದು ಮಧ್ಯಾಹ್ನ 1.30ರ ಸಮಯದಲ್ಲಿ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆ ವ್ಯಾಪ್ತಿಯ ಶಾಂತಿ ನಗರ ಬಸ್‌ನಿಲ್ದಾಣ ಸಮೀಪ ಅಡಿಕೆ ವ್ಯಾಪಾರಕ್ಕೆ ಸಂಬಂಧಿಸಿದ ಹಣವನ್ನು ಕಾರಿನಲ್ಲಿ ಕೊಂಡೊಯ್ಯಲಾಗುತ್ತಿತ್ತು. ಪಿಎಸ್‌ಐ ಸಮವಸ್ತ್ರದಲ್ಲಿ ರಿವೋಲಿ ಜಂಕ್ಷನ್‌ನ ಬಳಿ ಬಂದ ಆರೋಪಿಗಳು ತಾವು ಪೊಲೀಸರೆಂದು ಪರಿಚಯಿಸಿಕೊಂಡು ಕಾರು ತಡೆದಿದ್ದರು. ನಂತರ, ಚಾಲಕನಿಗೆ ಥಳಿಸಿ ಹಣ ದೋಚಿ ಪರಾರಿಯಾಗಿದ್ದರು’ ಎಂದು ಮೂಲಗಳು ಹೇಳಿವೆ.

ಸುಲಿಗೆ ಹಣದಲ್ಲಿ ಜೂಜಾಟ: ‘ಆರೋಪಿಗಳಿಗೆ ಜೂಜಾಟದ ಶೋಕಿ ಇತ್ತು. ಸುಲಿಗೆ ಹಣದಲ್ಲಿ ₹ 43 ಲಕ್ಷವನ್ನು ಜೂಜಾಟದಲ್ಲಿ ಕಳೆದುಕೊಂಡಿದ್ದಾರೆ. ಉಳಿಕೆ ₹ 37 ಲಕ್ಷವನ್ನು ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿವೆ.



ಆರೋಪಿಗಳಿಂದ ಜಪ್ತಿ ಮಾಡಿದ ಹಣ

ನಕಲಿ ವಸ್ತು ಮಾರಾಟ

ಬೆಂಗಳೂರು: ಟಾಟಾ ಕಂಪನಿಯ ಸ್ಟೀಲ್ ಥ್ರೆಡ್ ಸಾಕೇಟ್ ಹೆಸರಿನಲ್ಲಿ ನಕಲಿ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಮಳಿಗೆಯ ಮೇಲೆ ಸಿ.ಸಿ.ಬಿಯ ಆರ್ಥಿಕ ಅಪರಾಧ ದಳದ ಸಿಬ್ಬಂದಿ ದಾಳಿ ನಡೆಸಿ ₹ 96 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಲಾಲ್‌ಬಾಗ್ ರಸ್ತೆಯ ಕೆ.ಎಸ್. ಗಾರ್ಡನ್‌ನ 4ನೇ ಕ್ರಾಸ್‌ನ ಕೋಲ್ಕತ್ತ ಪೇಂಟಿಂಗ್ಸ್‌ಗೆ ಸೇರಿದ ಗೋದಾಮಿನ ಮೇಲೆ ಸಿಬ್ಬಂದಿ ದಾಳಿ ನಡೆಸಿದಾಗ ನಕಲಿ ವಸ್ತುಗಳು ಪತ್ತೆಯಾಗಿವೆ.

‘ನಕಲಿ ವಸ್ತುಗಳನ್ನೇ ಅಸಲಿಯೆಂದು ಮಾರಾಟ ಮಾಡಿ, ಗ್ರಾಹಕರಿಗೆ ವಂಚಿಸಲಾಗುತ್ತಿತ್ತು. ಗೋದಾಮಿನಲ್ಲಿ 218 ಬಾಕ್ಸ್‌ಗಳಲ್ಲಿ 3,030 ಥ್ರೆಡ್ ಸಾಕೆಟ್‌ಗಳನ್ನು ದಾಸ್ತಾನು ಮಾಡಿಕೊಳ್ಳಲಾಗಿತ್ತು. ಅವುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಮೂಲಗಳು ತಿಳಿಸಿವೆ. ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಚಾರ ನಿಯಮ ಉಲ್ಲಂಘನೆ: ₹1.40 ಕೋಟಿ ದಂಡ ಬಾಕಿ

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆಗೆ ಪಾವತಿಸಬೇಕಿರುವ ₹1.40 ಕೋಟಿಗೂ ಹೆಚ್ಚು ದಂಡದ ಮೊತ್ತವನ್ನು ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಾಕಿ ಉಳಿಸಿಕೊಂಡಿವೆ. ಈ ಮೊತ್ತ ಪಾವತಿಸುವಂತೆ ಎರಡು ಸಂಸ್ಥೆಗಳಿಗೆ ಸಂಚಾರ ಪೊಲೀಸರು ಪತ್ರ ಬರೆದಿದ್ದಾರೆ.

ಸಂಚಾರ ವಿಭಾಗದ ವಿಶೇಷ ಕಮಿಷನರ್ ಡಾ.ಎಂ.ಎ.ಸಲೀಂ ಅವರು ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.


ಬಸ್ ಚಾಲಕರು ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲ್ಲಿಸುವುದ ರಿಂದ ಸಂಚಾರಕ್ಕೆ ತೊಂದರೆಯಾಗು ತ್ತಿದೆ. ಅದರಲ್ಲೂ ಬಿಎಂಟಿಸಿ ಚಾಲಕರು ಎಲ್ಲೆಂದರಲ್ಲಿ ಬಸ್‌ಗಳನ್ನು ನಿಲ್ಲಿಸು ವುದು ದಟ್ಟಣೆಗೆ ಕಾರಣವಾಗುತ್ತಿದೆ. ದಂಡ ವಿಧಿಸುತ್ತಿದ್ದರೂ ಈ ಪ್ರವೃತ್ತಿ ಕಡಿಮೆಯಾಗಿಲ್ಲ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಬಿಎಂಟಿಸಿ ಒಂದರಿಂದಲೇ ₹1.30 ಕೋಟಿಗೂ ಹೆಚ್ಚು ದಂಡ ಬರಬೇಕಿದೆ. ಚಾಲಕರಿಗೆ ಎಚ್ಚರಿಕೆ ನೀಡಿ ದಟ್ಟಣೆ ಕಡಿಮೆ ಮಾಡಲು ಸಹಕರಿಸಬೇಕು ಎಂದು ಸಲಹೆ ನೀಡಿದ್ದಾರೆ.

‘ಸಂಚಾರ ಪೊಲೀಸರಿಂದ ಪತ್ರ ಬಂದಿದೆ. ಸಂಚಾರ ನಿಯಮ ಉಲ್ಲಂಘನೆ ಪ್ರಕರಣದಲ್ಲಿ ಚಾಲಕರ ಸಂಬಳದಿಂದ ಕಡಿತ ಮಾಡಿ ದಂಡ ಪಾವತಿಸುವುದು ಮೊದಲಿನಿಂದ ನಡೆದಿದೆ. ಸಂಚಾರ ಪೊಲೀಸರಿಗೆ ಬಾಕಿ ಮೊತ್ತ ಪಾವತಿಸಲಾಗುವುದು’ ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ತಿಳಿಸಿದರು.

‘ಅಡ್ಡಾದಿಡ್ಡಿ ಬಸ್ ಚಾಲನೆ ಸಂಬಂಧ ಮೂರು ವರ್ಷದ ಅವಧಿಯಲ್ಲಿ ಬಿಎಂಟಿಸಿಗೆ 26 ಸಾವಿರ ನೋಟಿಸ್ ನೀಡಲಾಗಿತ್ತು. ಅದರ ದಂಡದ ಮೊತ್ತ ಪಾವತಿಸುವಂತೆ ಸೂಚಿಸಿ ಬಿಎಂಟಿಸಿಗೆ ಪತ್ರ ಬರೆಯಲಾಗಿದೆ’ ಎಂದು ಬೆಂಗಳೂರು ನಗರ ಸಂಚಾರ ವಿಭಾಗದ ವಿಶೇಷ ಕಮಿಷನರ್ ಡಾ.ಎಂ.ಎ.ಸಲೀಂ ‘ಪ್ರಜಾವಾಣಿ’ಗೆ ತಿಳಿಸಿದರು.

ಬಂಡೆ ಮೇಲೆ ಚಿರತೆ ಪ್ರತ್ಯಕ್ಷ



ಮಾಗಡಿ: ತಾಲ್ಲೂಕಿನ ಬಂಟರಕುಪ್ಪೆ ಗುಡ್ಡದ ಬಂಡೆಯ ಮೇಲೆ ಶುಕ್ರವಾರ ಹಗಲು ಹೊತ್ತಿನಲ್ಲಿ ಎರಡು ಚಿರತೆ ಪ್ರತ್ಯಕ್ಷವಾಗಿದ್ದು, ಅವುಗಳನ್ನು ಗಮನಿಸಿದ ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಆಗಮಿಸಿದ ವಲಯ ಅರಣ್ಯ ಅಧಿಕಾರಿ ಜಗದೀಶ್ ಗೌಡ ಪಟಾಕಿ ಸಿಡಿಸಿ ಚಿರತೆಗಳನ್ನು ಓಡಿಸಿದರು.

ಬಂಟರಕುಪ್ಪೆ, ಮಲ್ಲೂರು ಹಾಗೂ ಸಾವನದುರ್ಗ ಅರಣ್ಯದ ಅಂಚಿನ ಗ್ರಾಮಗಳಲ್ಲಿ ಆಗಾಗ ಪ್ರತ್ಯಕ್ಷವಾಗುವ ಚಿರತೆಗಳು ಮೇಕೆ, ಕುರಿ, ನಾಯಿ, ಹಸುವಿನ ಕರುಗಳನ್ನು ಎತ್ತಿಕೊಂಡು ಹೋಗುತ್ತವೆ.

ಸಾವನದುರ್ಗ, ಸಿದ್ದೇದೇವರ ಬೆಟ್ಟ, ಬಂಟರಕುಪ್ಪೆ ಬೆಟ್ಟದ ಮಾರ್ಗವಾಗಿ ಶಿವಗಂಗೆಯ ತನಕ ಚಿರತೆಗಳು ಸಂಚರಿಸುತ್ತಿವೆ.

ಶಾಂತವೇರಿ ಗೋಪಾಲಗೌಡರ ಜನ್ಮ ಶತಮಾನೋತ್ಸವದಲ್ಲಿ ಶಾಸಕ ರಮೇಶ್ ಕುಮಾರ್ ಹೇಳಿಕೆ

‘ಕೋಟಿಗಳ ಲೆಕ್ಕದಲ್ಲಿ ರಾಜಕಾರಣಿಗಳ ಆದಾಯ ಏರಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಲೆ ಏರಿಕೆ, ಆದಾಯ ಕುಸಿತದಿಂದ ಸಾಮಾನ್ಯ ಜನರ ಬದುಕು ಪಾತಾಳ ಸೇರುತ್ತಿದ್ದರೆ, ರಾಜಕಾರಣಿಗಳ ಆದಾಯ ಕೋಟಿ ಲೆಕ್ಕದಲ್ಲಿ ಏರಿಕೆಯಾಗುತ್ತಿದೆ. ಅವರು ಈ ಗುಟ್ಟನ್ನು ತಮ್ಮ ಮಕ್ಕಳಿಗಷ್ಟೇ ಬಿಟ್ಟುಹೋಗುತ್ತಾರೆ ಎಂದು ಶಾಸಕ ರಮೇಶ್ ಕುಮಾರ್ ಹೇಳಿದರು.

ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾಜವಾದಿ ಶಾಂತವೇರಿ ಗೋಪಾಲಗೌಡರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಮೊದಲ ಬಾರಿ ಸ್ಪರ್ಧಿಸಿದಾಗ ಸಾಧಾರಣ ಆಸ್ತಿ ಹೊಂದಿದ್ದ ರಾಜಕಾರಣಿ, ಆಯ್ಕೆಯಾದ ಐದು ವರ್ಷಗಳ ನಂತರ ₹ 380 ಕೋಟಿ ಆಸ್ತಿ ನಮೂದಿಸುತ್ತಾನೆ. ಆದಾಯ ಪ್ರತಿ ಐದು ವರ್ಷಗಳಿಗೆ ಒಮ್ಮೆ ಏರಿಕೆಯಾಗುತ್ತಲೇ ಸಾಗುತ್ತದೆ. ಈ ಕುರಿತು ಯಾವ ತನಿಖಾ ಸಂಸ್ಥೆಗಳೂ ಪ್ರಶ್ನಿಸುವುದಿಲ್ಲ. ಮೂಲ ಪತ್ತೆ ಹಚ್ಚುವುದಿಲ್ಲ ಎಂದು ದೂರಿದರು.

‘ಗೋಪಾಲಗೌಡರು ಮೌಲ್ಯಗಳ ಅಗ್ರಹಾರ. ಅವರ ಹೆಸರು ಪ್ರಸ್ತಾಪಿಸದೇ ಕರ್ನಾಟಕದ ಇತಿಹಾಸ ಪೂರ್ಣವಾಗದು' ಎಂದರು.

ಶತಮಾನೋತ್ಸವ ಆಚರಣಾ ಸಮಿತಿ ಸದಸ್ಯ ಕೆ.ಟಿ.ನಾಗರಾಜ್ ಪ್ರಾಸ್ತಾವಿಕ ಮಾತನಾಡಿದರು. ತಿಮ್ಮರಾಜ, ಶಿವಾನಂದ ಕುಗ್ವೆ ಗೀತೆಗಳನ್ನು ಹಾಡಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್, ಸಮಿತಿಯ ಪ್ರಮುಖರಾದ ಜಿ.ಎ. ಪುರುಷೋತ್ತಮ ಗೌಡ, ಮಣಿ ಹೆಗಡೆ, ಡಾ.ಅರುಣ್ ಹೊಸಕೊಪ್ಪ, ರೇಖಾ ವಿಷ್ಣುಮೂರ್ತಿ, ನಳಿನಿ ವೆಂಕಪ್ಪಗೌಡ, ಸಿ.ಕೆ.ರಾಮೇಗೌಡ, ಗೋಪಾಲಗೌಡರ ಮಕ್ಕಳಾದ ರಾಮಮನೋಹರ, ಇಳಾಗೀತಾ ಇದ್ದರು.

‘ಕಲಾಪಗಳಿಗೆ ಕನ್ನಡಿಯಾಗಿದ್ದ ಪ್ರಜಾವಾಣಿ’

ದಶಕಗಳ ಹಿಂದೆ ನಡೆಯುತ್ತಿದ್ದ ಶಾಸನ ಸಭೆಯಲ್ಲಿ ಮೌಲ್ಯಯುತ ಚರ್ಚೆಗಳಾಗುತ್ತಿದ್ದವು. ಸದಸ್ಯರ ಪ್ರಶ್ನೆಗಳನ್ನು ಸಚಿವರು ಗಂಭೀರವಾಗಿ ಪರಿಗಣಿಸುತ್ತಿದ್ದರು. ಜನರು ಬೆಳಿಗ್ಗೆ ‘ಪ್ರಜಾವಾಣಿ’ ಕೈಗೆತ್ತಿಕೊಂಡರೆ ಇಡೀ ಸದನದಲ್ಲಿ ನಡೆದ ವಿಷಯಗಳು ಅರ್ಥವಾಗಿಬಿಡುತ್ತಿದ್ದವು. ಅಷ್ಟೊಂದು ಸೊಗಸಾಗಿ ವರದಿಗಳನ್ನು ಕಟ್ಟಿಕೊಡಲಾಗುತ್ತಿತ್ತು. ಇಂದು ಸದನದಲ್ಲಿ ನಡೆಯುವ ಬೆಳವಣಿಗೆಗಳು, ಬಳಸುವ ಪದಗಳನ್ನು ಕೇಳಲು ಆಗದು, ಅದನ್ನೇ ಮಾಧ್ಯಮಗಳು ವಿಜೃಂಭಿಸುತ್ತವೆ ಎಂದು ರಮೇಶ್ ಕುಮಾರ್ ಹೇಳಿದರು.



ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಶಾಂತವೇರಿ ಗೋಪಾಲಗೌಡ ಜನ್ಮಶತಮಾನೋತ್ಸವ ಸಮಾರಂಭದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಅವರು ಕಾಗೋಡು ಸತ್ಯಾಗ್ರಹ ನೆಲದ ಮಣ್ಣಿಗೆ ನಮಿಸಿದರು. ರಾಮಮನೋಹರ ಶಾಂತವೇರಿ, ಪುರುಷೋತ್ತಮ ಗೌಡ ಇದ್ದಾರೆ

ಚಾಟ್‌ಜಿಪಿಟಿ ಬಳಕೆಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಟ್‌ಜಿಪಿಟಿ ಸೇರಿ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು ವಿದ್ಯಾರ್ಥಿಗಳು ಬಳಸದಂತೆ ಆರ್.ವಿ. ವಿಶ್ವವಿದ್ಯಾಲಯ ನಿರ್ಬಂಧಿಸಿದ್ದು, ಇತರೆ ಉನ್ನತ ಶಿಕ್ಷಣ ಸಂಸ್ಥೆಗಳೂ ಈ ಕುರಿತು ನಿರ್ಧಾರ ತೆಗೆದುಕೊಳ್ಳಲು ಚರ್ಚೆ ನಡೆಸಿವೆ.

ಎಂಜಿನಿಯರಿಂಗ್ ಕೋರ್ಸ್‌ನ ಕಂಪ್ಯೂಟರ್ ಸೈನ್ಸ್ ವಿಭಾಗದ ವಿದ್ಯಾರ್ಥಿಗಳು ಅಸೈನ್‌ಮೆಂಟ್ ಬರೆಯುವಾಗ ಚಾಟ್ ಜಿಪಿಟಿ, ಗಿಟ್‌ಹಬ್, ಕಾಪಿಲಾಟ್, ಬ್ಲಾಕ್‌ಬಾಕ್ಸ್ ಮತ್ತಿತರ ಆನ್‌ಲೈನ್ ವೇದಿಕೆಗಳನ್ನು ಬಳಸಬಾರದು. ಈ ಕುರಿತು ಬೋಧಕ ವರ್ಗ ನಿಯಮಿತವಾಗಿ ಪರಿಶೀಲನೆ ನಡೆಸಬೇಕು. ಆನ್‌ಲೈನ್ ವೇದಿಕೆಗಳ ಹೊರತಾಗಿ ಅಸೈನ್‌ಮೆಂಟ್‌ಗಳನ್ನು ಮೇಲ್ವಿಚಾರಣೆಯಲ್ಲಿ ರೂಪಿಸಬೇಕು ಎಂದು ಆರ್‌ವಿ ವಿಶ್ವವಿದ್ಯಾಲಯ ಆಡಳಿತ ಮಂಡಳಿ ಆಂತರಿಕ ಸುತ್ತೋಲೆ ಹೊರಡಿಸಿದೆ.

‘ಕೃತಿಚೌರ್ಯದ ಕೆಲ ಪ್ರಕರಣಗಳನ್ನು ಪತ್ತೆಹಚ್ಚಿದ್ದೇವೆ. ಅವು ಮುಂದುವರಿಯದಂತೆ ತಡೆಯಲು ನಿರ್ಬಂಧದ ಕ್ರಮ ಅನಿವಾರ್ಯವಾಗಿದೆ. ಸಂಕಲನ, ವ್ಯವಕಲನ ಕಲಿತ ನಂತರ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಕ್ಯಾಲ್ಕ್ಯುಕೇಟರ್‌ನಂತೆ ಬಳಸಲು ಅಭ್ಯಂತರವಿಲ್ಲ’ ಎನ್ನುತ್ತಾರೆ ವಿಶ್ವವಿದ್ಯಾನಿಲಯದ ಕಂಪ್ಯೂಟರ್ ಸೈನ್ಸ್ ವಿಭಾಗದ ಡೀನ್ ಸಂಜಯ್ ಆರ್. ಚಿಟ್ನಿಸ್.

‘ಆನ್‌ಲೈನ್ ವೇದಿಕೆಗಳನ್ನು ಸಕಾರಾತ್ಮಕವಾಗಿ ಬಳಸಿಕೊಳ್ಳಲು ಅಭ್ಯಂತರವಿಲ್ಲ. ಆದರೆ, ದುರ್ಬಳಕೆಯಾಗದಂತೆ ತಡೆಯಲು ಅಗತ್ಯ ಕ್ರಮ ಕೈಗೊಳ್ಳುವ ಕುರಿತು ಎಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರು, ಕಾರ್ಯಕಾರಿ ಮಂಡಳಿ ಸದಸ್ಯರ ಜತೆ ಚರ್ಚಿಸಲಾಗುವುದು’ ಎಂದು ವಿಟಿಯು ಉಪಕುಲಪತಿ ವಿದ್ಯಾಶಂಕರ್ ಪ್ರತಿಕ್ರಿಯಿಸಿದರು.



ಬ್ಯಾಟರಾಯನಪುರ ಕ್ಷೇತ್ರದ ಕೊಡಿಗೇಹಳ್ಳಿ ವಾರ್ಡ್ ವ್ಯಾಪ್ತಿಯ ಅಂಗಳ ಪರಮೇಶ್ವರಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೊಳಿಸುವ ₹2 ಕೋಟಿ ವೆಚ್ಚದ ಕಾಮಗಾರಿಗೆ ಶಾಸಕ ಕೃಷ್ಣ ಬೈರೇಗೌಡ ಚಾಲನೆ ನೀಡಿದರು. ಪಾಲಿಕೆ ಮಾಜಿ ಸದಸ್ಯ ಕೆ.ಎಂ.ಚೇತನ್, ಕಾಂಗ್ರೆಸ್ ಮುಖಂಡರಾದ ವೆಂಕಟಸ್ವಾಮಿ, ಹನುಮಂತಿ, ಎಂ.ಮುರಳಿ, ಶಾಂತಮ್ಮ, ಬಿಬಿಎಂಪಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸೋಮಶೇಖರ್ ಇತರರು ಇದ್ದರು.

ವಿವಿಧ ಕಾಮಗಾರಿಗಳಿಗೆ ಚಾಲನೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಕೊಡಿಗೇಹಳ್ಳಿ ವಾರ್ಡ್ ವ್ಯಾಪ್ತಿಯ ಅಂಗಳ ಪರಮೇಶ್ವರಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೊಳಿಸುವ ₹2 ಕೋಟಿ ವೆಚ್ಚದ ಕಾಮಗಾರಿಗೆ ಶಾಸಕ ಕೃಷ್ಣ ಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಈ ರಸ್ತೆಯು ಕೊಡಿಗೇಹಳ್ಳಿ ಮುಖ್ಯರಸ್ತೆಯಿಂದ ಮುನೇಶ್ವರ ಲೇಔಟ್, ಕಣ್ಣೂರಮ್ಮ ಬಡಾವಣೆ, ಭದ್ರಪ್ಪ ಬಡಾವಣೆ, ದೇವಿನಗರ ಸುತ್ತಮುತ್ತಲ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಾಗಿದ್ದು, ಕಳೆದ ಬಾರಿ ಸುರಿದ ಭಾರಿ ಮಳೆಯಿಂದ ರಸ್ತೆಯು ಹಾಳಾಗಿತ್ತು. ಪರಿಶೀಲನೆ ನಡೆಸಿ, ನೀರು ನಿಲ್ಲುತ್ತಿದ್ದ ಸ್ಥಳಗಳನ್ನು ಗುರುತಿಸಿ, ಮತ್ತೆ ರಸ್ತೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಇದರಿಂದ ಈ ಭಾಗದ ಹಲವು ಬಡಾವಣೆಗಳ ನಿವಾಸಿಗಳಿಗೆ ಅನುಕೂಲವಾಗಲಿದೆ’ ಎಂದು ತಿಳಿಸಿದರು.

ಪಾಲಿಕೆ ಮಾಜಿ ಸದಸ್ಯ ಕೆ.ಎಂ. ಚೇತನ್, ಕಾಂಗ್ರೆಸ್ ಮುಖಂಡರಾದ ವೆಂಕಟಸ್ವಾಮಿ, ಹನುಮಂತಿ, ಎಂ.ಮುರಳಿ, ಶಾಂತಮ್ಮ, ಬಿಬಿಎಂಪಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಗುದ್ದಲಿ ಪೂಜೆ: ಇದಕ್ಕೂ ಮುನ್ನ ಅಮೃತ ನಗರೋತ್ಥಾನ ಯೋಜನೆಯಡಿ ಥಣಿಸಂದ್ರ ವಾರ್ಡ್ ವ್ಯಾಪ್ತಿಯ ಹೆಗಡೆ ನಗರದ ಅಡ್ಡರಸ್ತೆಗಳನ್ನು ಅಭಿವೃದ್ಧಿಗೊಳಿಸುವ ₹2 ಕೋಟಿ ವೆಚ್ಚದ ಕಾಮಗಾರಿಗೆ ಕೃಷ್ಣ ಬೈರೇಗೌಡ ಗುದ್ದಲಿಪೂಜೆ ನೆರವೇರಿಸಿದರು

ಕಾಂಗ್ರೆಸ್ ಮುಖಂಡರಾದ ಎಂ. ಜಯಗೋಪಾಲಗೌಡ, ಪಳನಿ ವೆಂಕಟೇಶ್, ಬಸವರಾಜು, ಶುಕೂರ್ ಅಹಮದ್, ಎನ್.ಎಸ್. ದಿಲೀಪ್ ಕುಮಾರ್, ಟಿ.ಎನ್. ಮಹೇಶ್ ಕುಮಾರ್, ಬಿಬಿಎಂಪಿ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ನಾಗಪ್ಪ, ಸಹಾಯಕ ಎಂಜಿನಿಯರ್ ಸುರೇಶ್ ದೇವತ್ ರಾಜ್ ಮತ್ತಿತರರು ಇದ್ದರು.

ವಿಚ್ಛೇದಿತ ಪತ್ನಿಯ ಅರ್ಜಿ ಮಾನ್ಯ ಮಾಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ವಿಚ್ಛೇದನ ಪಡೆದು ಎಂಟು ವರ್ಷಗಳಾದರೂ ತಂದೆಯು ಮಗುವನ್ನು ಭೇಟಿ ಮಾಡಲು ಮುಂದಾಗಿಲ್ಲ ಮತ್ತು ಕೋರ್ಟ್ ವಿಚಾರಣೆಗೂ ಹಾಜರಾಗಿಲ್ಲ. ಹಾಗಾಗಿ, ನಾನು ನನ್ನ ಮಗನೊಂದಿಗೆ ಆಸ್ಟ್ರೇಲಿಯಾದಲ್ಲಿ ನೆಲೆಸಲು ಅವಕಾಶ ಕಲ್ಪಿಸಿ ಕೊಡಬೇಕು’ ಎಂಬ ತಾಯಿಯೊಬ್ಬರ ಮನವಿಯನ್ನು ಹೈಕೋರ್ಟ್ ಮನ್ನಿಸಿದೆ.

‘ವಿಚ್ಛೇದನದ ಬಳಿಕ ಎರಡನೇ ವಿವಾಹವಾಗಿ ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದು, ನಾನೂ ಮತ್ತು ನನ್ನ ಮಗುವಿಗೆ ಅಲ್ಲಿಯೇ ನೆಲೆಸಲು ಶಾಶ್ವತ ವೀಸಾ ಪಡೆಯಲು ಅನುಮತಿಸಿ’ ಎಂದು ಕೋರಿ ತಾಯಿಯ ಪರವಾಗಿ ಅವರ ತಂದೆ ಸಲ್ಲಿಸಿದ್ದ ಅರ್ಜಿಯನ್ನು ಮದ್ದೂರಿನ ಸಿವಿಲ್ ನ್ಯಾಯಾಲಯ ವಜಾಗೊಳಿಸಿತ್ತು.

ಈ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಈ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ತಾಯಿಯ ಮನವಿಯನ್ನು ಪುರಸ್ಕರಿಸಿದೆ.

‘ವಿಚ್ಛೇದನದ ಬಳಿಕ ಎಂಟು ವರ್ಷ ಕಳೆದರೂ ತಂದೆ ಮಗುವನ್ನು ನೋಡಲು ಬಂದಿಲ್ಲ. ಮಗುವಿಗೆ ಆಸ್ಟ್ರೇಲಿಯಾ ವಿಸಾ ಪಡೆಯುವ ಸಂಬಂಧ ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆಗೂ ಹಾಜರಾಗಿಲ್ಲ. ಈ ಅಂಶವನ್ನು ಗಮನಿಸಿದರೆ, ಪತಿ ಮುಂದಿನ ದಿನಗಳಲ್ಲಿ ಮಗುವನ್ನು ನೋಡುವ ಆಸಕ್ತಿ ಕಳೆದುಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಹೀಗಾಗಿ, ಇಬ್ಬರ ಮಧ್ಯೆ ಮತ್ತಷ್ಟು ದಾವೆಗಳು ದಾಖಲಾಗುವುದನ್ನು ತಪ್ಪಿಸಲು ಈ ಅರ್ಜಿಯನ್ನು ಪುರಸ್ಕರಿಸಲಾಗುತ್ತಿದೆ’ ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣವೇನು?: ದಂಪತಿ 2006ರಲ್ಲಿ ವಿವಾಹವಾಗಿದ್ದರು. ಇವರಿಗೆ ಪುತ್ರನಿದ್ದಾನೆ. ವಿಚ್ಛೇದನ ಕೋರಿದ ಅರ್ಜಿ ವಿಚಾರಣೆ ನಡೆಸುತ್ತಿದ್ದ ನ್ಯಾಯಾಲಯ; ಪುತ್ರ ತಾಯಿಯ ಆರೈಕೆಯಲ್ಲಿರಲು ಅವಕಾಶ ನೀಡಿತ್ತು. ಮಗುವನ್ನು ತಿಂಗಳಿಗೆ ಒಮ್ಮೆ ಭೇಟಿ ಮಾಡಲು ತಂದೆಗೆ ಅವಕಾಶ ನೀಡಿ ವಿಚ್ಛೇದನ ಮಂಜೂರು ಮಾಡಿತ್ತು.

ಆದರೆ, ವಿಚ್ಛೇದನದ ಬಳಿಕ ಪತಿ ಒಮ್ಮೆಯೂ ಮಗನನ್ನು ಭೇಟಿ ಮಾಡಿರಲಿಲ್ಲ. ಪತ್ನಿ ಸದ್ಯ ಪ್ರವಾಸಿ ವಿಸಾ ಪಡೆದು ಮಗುವಿನೊಂದಿಗೆ ತಮ್ಮ ಎರಡನೇ ಪತಿಯ ಜತೆ ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದಾರೆ.

‘ಇಡಬ್ಲ್ಯುಎಸ್ 10% ಮೀಸಲಾತಿ ಮಹಾವಂಚನೆ’ ಪುಸ್ತಕ ಬಿಡುಗಡೆ

‘ಶತಮಾನದ ದೊಡ್ಡ ಮೋಸ’

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ರವಿವರ್ಮಕುಮಾರ್ ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಲೇಖಕಿ ಅಶ್ವಿನಿ ಓಬಳೇಶ್, ರಾಷ್ಟ್ರೀಯ ಕಾನೂನು ಶಾಲೆ ಪ್ರಾಧ್ಯಾಪಕ ಬಾಬು ಮ್ಯಾಥ್ಯು, ಡಿ.ಉಮಾಪತಿ, ಲೇಖಕರಾದ ಮಾವಳ್ಳಿ ಶಂಕರ್, ಶ್ರೀಪಾದ್ ಭಟ್ ಮತ್ತು ವಿಕಾಸ್ ಆರ್.ಮೌರ್ಯ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ಜಾರಿಗೆ ತಂದಿರುವುದು ಈ ಶತಮಾನದ ಅತಿದೊಡ್ಡ ಮೋಸ’ ಎಂದು ವಕೀಲ ರವಿವರ್ಮ ಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಪ್ರಕಟಿಸಿರುವ ಮಾವಳ್ಳಿ ಶಂಕರ್, ಬಿ.ಶ್ರೀಪಾದ ಭಟ್, ವಿಕಾಸ್ ಆರ್.ಮೌರ್ಯ ಸಂಪಾದಿತ ‘ಇಡಬ್ಲ್ಯುಎಸ್ 10% ಮಹಾವಂಚನೆ’ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಇಡೀ ದೇಶದಲ್ಲಿ ಮೊದಲು ಮೀಸಲಾತಿ ಜಾರಿಗೆ ಬಂದಿದ್ದು ಮೈಸೂರು ಸಂಸ್ಥಾನದಲ್ಲಿ. 1872ರಲ್ಲಿ ಮೊದಲ ಜಾತಿ ಜನಗಣತಿ ನಡೆಯಿತು. ಅದರ ಪ್ರಕಾರ ಶೇ 3.4ರಷ್ಟು ಮಾತ್ರ ಬ್ರಾಹ್ಮಣ ಸಮುದಾಯ ಇತ್ತು. ಸರ್ಕಾರಿ ಹುದ್ದೆಗಳಲ್ಲಿ ಶೇ 100ರಷ್ಟು ಬ್ರಾಹ್ಮಣರೇ ಇದ್ದರು. ಆಡಳಿತದಲ್ಲಿ ಬ್ರಾಹ್ಮಣರ ಪ್ರಾತಿನಿಧ್ಯ ಕಡಿಮೆ ಮಾಡುವ ಸಲುವಾಗಿಯೇ ಮೊದಲ ಬಾರಿಗೆ 1974ರಲ್ಲಿ ಪೊಲೀಸ್ ನೇಮಕಾತಿಯಲ್ಲಿ ಮೀಸಲಾತಿ ಜಾರಿಗೆ ತರಲಾಯಿತು’ ಎಂದರು.

ಈ ಮೀಸಲಾತಿಗೆ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಾಂವಿಧಾನಿಕ ಚೌಕಟ್ಟು ನೀಡಿದರು. ಇದಕ್ಕೆ ತದ್ವಿರುದ್ಧವಾಗಿ ಈಗ ಇಡಬ್ಲ್ಯುಎಸ್ ಮೀಸಲಾತಿ ಜಾತಿಗೆ ತರಲಾಗಿದೆ ಎಂದು ಹೇಳಿದರು.

‘ಎಲ್ಲಾ ಸಮುದಾಯದ ಬಡವರಿಗೆ ಮೀಸಲಾತಿ ದೊರೆತಿದ್ದರೆ ತೊಂದರೆ ಇರಲಿಲ್ಲ. ಈಗಾಗಲೇ ಮೀಸಲಾತಿ ಪಟ್ಟಿಯಲ್ಲಿ ಇರುವ ಸಮುದಾಯಗಳನ್ನು ಇದರಿಂದ ಹೊರಗಿಡಲಾಗಿದೆ. ಇದನ್ನು ಬ್ರಾಹ್ಮಿನ್– ಬನಿಯಾ ಮೀಸಲಾತಿ ಎಂದಷ್ಟೇ ಹೇಳಬೇಕು. ಆದರೆ, ಆರ್ಥಿಕವಾಗಿ ಹಿಂದುಳಿದವರ ಮೀಸಲಾತಿ ಎಂದು ಹೇಳುವ ಮೂಲಕ ಎಲ್ಲ ಸಮುದಾಯಗಳಿಗೆ ಮೋಸ ಮಾಡಲಾಗಿದೆ. ಇದಕ್ಕೆ ರಾಷ್ಟ್ರಪತಿ ಮತ್ತು ಸುಪ್ರೀಂ ಕೋರ್ಟ್ ಸಮ್ಮತಿ ನೀಡಿರುವುದು ದುರಂತ’ ಎಂದರು.

‘ಮೀಸಲು ಕ್ಷೇತ್ರದಿಂದ ಆಯ್ಕೆಯಾದವರೂ ಸೇರಿ ಎಲ್ಲಾ ಸಂಸದರು ಕಣ್ಮುಚ್ಚಿಕೊಂಡು ಒಪ್ಪಿಗೆ ಸೂಚಿಸಿದ್ದಾರೆ. ಈ ಮಸೂದೆಗೆ ಮತಕೊಟ್ಟ ಸಂಸದರಿಗೆ ಮತ ಹಾಕುವುದಿಲ್ಲ ಎಂಬ ಆಂದೋಲನ ನಡೆಯಬೇಕು. ಇಡಬ್ಲ್ಯುಎಸ್ ಮೀಸಲಾತಿ ತೆಗೆಯದ ಪಕ್ಷಕ್ಕೆ ಮತವಿಲ್ಲ ಎಂಬ ಕೂಗು ದೊಡ್ಡದಾಗಬೇಕು’ ಎಂದು ಅವರು ಹೇಳಿದರು.

ಪುಸ್ತಕ ಕುರಿತು ಮಾತನಾಡಿದ ಪತ್ರಕರ್ತ ಡಿ.ಉಮಾಪತಿ, ‘ಹಿಂದೂ ಧರ್ಮದ ಕೇಡುಗಳ ವಿರುದ್ಧ ಬೌದ್ಧ ಧರ್ಮ ಉದಯವಾಗಿ, ಸಮಾನತೆಯನ್ನು ಸ್ಥಾಪಿಸಿತ್ತು. ಅದಕ್ಕೆ ಪ್ರತಿಕ್ರಾಂತಿಯಾಗಿ ಪುಷ್ಯ ಮಿತ್ರ ಶೃಂಗ ಬ್ರಾಹ್ಮಣವಾದಕ್ಕೆ ಮರಳಿ, ಅದರ ಸ್ಥಾನ ಒದಗಿಸಿಕೊಟ್ಟ. ಅವನ ಪ್ರತಿಕ್ರಾಂತಿಯೇ ಮನುಸ್ಮೃತಿ ಆಯಿತು. ಜಾತಿ ವ್ಯವಸ್ಥೆ ಮತ್ತಷ್ಟು ಬಲಗೊಂಡಿತು. ಅಂಬೇಡ್ಕರ್ ಸಂವಿಧಾನ ಅದನ್ನು ಹಿಮ್ಮೆಟ್ಟಿಸಿತ್ತು. ಸಂವಿಧಾನದ ವಿರುದ್ಧ ಈಗ ಮತ್ತೊಮ್ಮೆ ಪುಷ್ಯ ಮಿತ್ರ ಶೃಂಗನ ರೀತಿಯ ಪ್ರತಿಕ್ರಾಂತಿ ಗಟ್ಟಿಯಾಗುತ್ತಿದೆ. ಅದನ್ನು ಹಿಮ್ಮೆಟ್ಟಿಸಬೇಕಿದೆ’ ಎಂದರು.

ಬಿಡುಗಡೆಯಾದ ಪುಸ್ತಕ

ಪುಸ್ತಕ: ಇಡಬ್ಲ್ಯುಎಸ್ 10% ಮಹಾವಂಚನೆ (ಲೇಖನಗಳ ಸಂಗ್ರಹ)
ಸಂಪಾದಕರು: ಮಾವಳ್ಳಿ ಶಂಕರ್, ಬಿ.ಶ್ರೀಪಾದ ಭಟ್, ವಿಕಾಸ್ ಆರ್. ಮೌರ್ಯ
ಪುಟ: 108
ಬೆಲೆ: ₹90
ಪ್ರಕಾಶನ: ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ)

ಸುದ್ದಿ 2 ನಿಮಿಷ

12ನೇ ತರಗತಿ ವಿದ್ಯಾರ್ಥಿಗಳಿಗೆ ಫೆ. 2ರಿಂದ ಕಾರ್ಯಾಗಾರ

ಬೆಂಗಳೂರು: ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 12ನೇ ತರಗತಿ ವಿದ್ಯಾರ್ಥಿಗಳಿಗೆ ದಯಾನಂದ ಸಾಗರ್ ವಿಶ್ವವಿದ್ಯಾಲಯವು ಯಶಸ್ವಿಯಾಗಿ ಪರೀಕ್ಷೆ ಎದುರಿಸುವ ಬಗ್ಗೆ ಫೆ.2ರಿಂದ ಫೆ.9ರವರೆಗೆ ‘ಮೈಂಡ್ ಸ್ಪಾರ್ಕ್ ಸೀರೀಸ್’ ಶೀರ್ಷಿಕೆಯಡಿ ಕಾರ್ಯಾಗಾರ ಹಮ್ಮಿಕೊಂಡಿದೆ.

ಎಂಟು ದಿನಗಳ ಈ ಕಾರ್ಯಾಗಾರದಲ್ಲಿ ಉಚಿತ ಪ್ರವೇಶ ಇರಲಿದೆ. ಮಂಡಳಿಯ ಪರೀಕ್ಷೆಯನ್ನು ಸುಲಭವಾಗಿ ಎದುರಿಸಲು ಅನುಸರಿಸಬೇಕಾದ ಕಾರ್ಯತಂತ್ರಗಳನ್ನು ವಿಷಯ ತಜ್ಞರು ತಿಳಿಸಿಕೊಡಲಿದ್ದಾರೆ. ಸಿಬಿಎಸ್‌ಇ ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯವು ಸತತವಾಗಿ ರಾಜ್ಯದ ಅಗ್ರ ಮೂರು ವಿಶ್ವ ವಿದ್ಯಾಲಯಗಳಲ್ಲಿ ಸ್ಥಾನ ಪಡೆಯುತ್ತಿದೆ. ಉತ್ತಮವಾಗಿ ಅಂಕ ಪಡೆಯಲು ಕಾರ್ಯಾಗಾರದಲ್ಲಿ ವಿಷಯ ತಜ್ಞರು ಸಲಹೆ ಸೂಚನೆಗಳನ್ನೂ ನೀಡಲಿದ್ದಾರೆ.

ಪ್ರತಿನಿತ್ಯ ನಾಲ್ಕು ಗಂಟೆಗಳ ಕಾಲ ಈ ಕಾರ್ಯಾಗಾರ ನಡೆಯಲಿದೆ. ವಿದ್ಯಾರ್ಥಿಗಳು https://dsuedu.in/CBSE--STUDENT ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಶಾಲೆಗಳು https://dsuedu.in/CBSE--COLLEGE ಮೂಲಕ ನೋಂದಾಯಿಸಿ, ಕಾರ್ಯಾಗಾರದಲ್ಲಿ ಪಾಲ್ಗೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.



ಬಿಜೆಪಿ ಸೇರಲು ಗಿರೀಶ್ ನಾಶಿ ನಿರ್ಧಾರ

ಬೆಂಗಳೂರು: ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿ 2019ರ ಉಪ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದ ಗಿರೀಶ್ ಕೆ. ನಾಶಿ ಬಿಜೆಪಿ ಸೇರಲು ನಿರ್ಧರಿಸಿದ್ದಾರೆ. ಮುಂದಿನ ವಾರ ಅಧಿಕೃತವಾಗಿ ಪಕ್ಷದ ಸದಸ್ಯತ್ವ ಪಡೆಯುವ ಸಾಧ್ಯತೆ ಇದೆ.

ಆರಂಭದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಗಿರೀಶ್, 2019ರ ಉಪ ಚುನಾವಣೆ ಸಂದರ್ಭದಲ್ಲಿ ಜೆಡಿಎಸ್ ಸೇರಿದ್ದರು. ಆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಬಿಜೆಪಿ ಅಭ್ಯರ್ಥಿಯಾಗಿದ್ದ ಅಬಕಾರಿ ಸಚಿವ ಕೆ. ಗೋಪಾಲಯ್ಯ ಎದುರು ಸೋಲು ಕಂಡಿದ್ದರು. ಈಗ ಜೆಡಿಎಸ್ ತೊರೆದು ಬಿಜೆಪಿ ಸೇರಲು ತೀರ್ಮಾನಿಸಿದ್ದಾರೆ.

ಗೋಪಾಲಯ್ಯ ಅವರೊಂದಿಗೆ ಪ್ರಾಥಮಿಕ ಹಂತದಲ್ಲಿ ಚರ್ಚೆ ನಡೆದಿತ್ತು. ನಂತರ ಬಿಜೆಪಿ ರಾಜ್ಯ ಉಸ್ತುವಾರಿಯಾಗಿರುವ ಅರುಣ್ ಸಿಂಗ್ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೇರಿ ಪ್ರಮುಖ ನಾಯಕರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ. ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಆಯ್ಕೆಯಲ್ಲಿ ತಮ್ಮನ್ನು ಪರಿಗಣಿಸುವಂತೆ ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಗಿರೀಶ್, ‘2019ರ ಉಪ ಚುನಾವಣೆಯಲ್ಲಿ ಸೋಲು ಅನುಭವಿಸಿದ ಬಳಿಕ ನಾನು ಮುಂದಿನ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಜೆಡಿಎಸ್ ವರಿಷ್ಠರಿಗೆ ತಿಳಿಸಿದ್ದೆ. ಈಗ ಬೇಷರತ್ತಾಗಿ ಬಿಜೆಪಿ ಸೇರಲು ನಿರ್ಧರಿಸಿದ್ದೇನೆ. ಪಕ್ಷ ಯಾವುದಾದರೂ ಕ್ಷೇತ್ರದಲ್ಲಿ ಅವಕಾಶ ನೀಡಿದರೆ ಸ್ಪರ್ಧಿಸುವುದಾಗಿ ತಿಳಿಸಿದ್ದೇನೆ’ ಎಂದರು.

ಜಾರ್ಜ್ ಹಿಡಿತದ ‘ಸರ್ವಜ್ಞನಗರ’: ಸರಿಸಾಟಿ ಯಾರು?

• ರಾಜೇಶ್ ರೈ ಚಟ್ಲ

ಪ್ರಜಾ ಮತ ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023

ಕ್ಷೇತ್ರ ಸ್ಥಿತಿ–ಗತಿ

ಬೆಂಗಳೂರು: ಕಾಂಗ್ರೆಸ್‌ನ ಪ್ರಭಾವಿ, ಹಿರಿಯ ನಾಯಕ ಕೆ.ಜೆ. ಜಾರ್ಜ್ (ಕೇಳಚಂದ್ರ ಜೋಸೆಫ್ ಜಾರ್ಜ್) ಪ್ರತಿನಿಧಿಸುವ ಕ್ಷೇತ್ರ- ಸರ್ವಜ್ಞನಗರ. 2004ರ ವಿಧಾನಸಭೆ ಚುನಾವಣೆಯಲ್ಲಿ ಭಾರತೀನಗರ ಕ್ಷೇತ್ರದಿಂದ ಆಯ್ಕೆಯಾಗಿ ವಿಧಾನಸಭೆ ಪ್ರವೇಶಿಸಿದ್ದ ಜಾರ್ಜ್, ಕ್ಷೇತ್ರ ಮರುವಿಂಗಡಣೆಯಿಂದಾಗಿ 2008ರಲ್ಲಿ ಸರ್ವಜ್ಞ ನಗರ ಕ್ಷೇತ್ರದಿಂದ ಸ್ಪರ್ಧಿಸುವಂತಾಯಿತು.

ಮೂರು ಚುನಾವಣೆಗಳಲ್ಲಿ (2008, 2013, 2018) ಗೆಲ್ಲುತ್ತಲೇ ಬಂದಿರುವ ಜಾರ್ಜ್, ಕ್ಷೇತ್ರದಲ್ಲಿ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿದ್ದಾರೆ. ಹೀಗಾಗಿ, ಬಿಜೆಪಿ, ಜೆಡಿಎಸ್ ಸೇರಿದಂತೆ ಇತರ ಯಾವುದೇ ಪಕ್ಷಗಳಿಗೆ ಅವರ ಸವಾಲು ಎದುರಲ್ಲಿದೆ.

ನಾಗವಾರ, ಎಚ್‌ಬಿಆರ್ ಬಡಾವಣೆ, ಬಾಣಸವಾಡಿ, ಕಮ್ಮನಹಳ್ಳಿ, ಕಾಚರಕನಹಳ್ಳಿ, ಕಾಡುಗೊಂಡನಹಳ್ಳಿ, ಲಿಂಗರಾಜಪುರ, ಮಾರುತಿ ಸೇವಾನಗರ ಸೇರಿದ ವಿಶಾಲ ಕ್ಷೇತ್ರವಿದು. ನೆರೆ ರಾಜ್ಯಗಳಿಂದ ಕೆಲಸ ಅರಸಿ ಬರುವ ಹೆಚ್ಚಿನ ಮಂದಿ ಆಶ್ರಯ ಪಡೆದುಕೊಳ್ಳುವುದು ಈ ಭಾಗದಲ್ಲಿಯೇ. ಹೀಗಾಗಿ ಜನಸಂಖ್ಯೆಯ ಒತ್ತಡ, ಕಿರಿದಾದ ರಸ್ತೆಗಳು, ಅಡ್ಡಾದಿಡ್ಡಿ ಬೆಳೆದಿರುವ ಗಲ್ಲಿಗಳು, ಸಂಚಾರ ದಟ್ಟಣೆ, ಕುಡಿಯುವ ನೀರಿನ ಅಸಮರ್ಪಕ ಪೂರೈಕೆ ಹೀಗೆ ಸಮಸ್ಯೆಗಳ ದೊಡ್ಡ ಪಟ್ಟಿಯೇ ತೆರೆದುಕೊಳ್ಳುತ್ತದೆ. ಅಭಿವೃದ್ಧಿ ಕಡಿಮೆ, ಸಮಸ್ಯೆಗಳು ಜಾಸ್ತಿ ಎನ್ನುವುದು ಸ್ಥಳೀಯರ ಆರೋಪ. ಹಲವು ಸೂಕ್ಷ್ಮ ಪ್ರದೇಶಗಳನ್ನು ಹೊಂದಿರುವುದರಿಂದ ಕ್ಷೇತ್ರದಲ್ಲಿ ಅಪರಾಧ ಚಟುವಟಿಕೆಗಳೂ ಹೆಚ್ಚು ಎನ್ನುವ ಅಪಖ್ಯಾತಿಯೂ ಇದೆ.


ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಗೃಹ, ನಗರಾಭಿವೃದ್ಧಿ ಖಾತೆಗಳನ್ನು ಜಾರ್ಜ್ ನಿಭಾಯಿಸಿದ್ದಾರೆ. ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ, ಸಲಹೆಗಾರರನ್ನಾಗಿ ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ ನೇಮಕ ಸೇರಿ ಹಲವು ವಿವಾದಗಳೂ ಗೃಹ ಸಚಿವರಾಗಿದ್ದಾಗ ಜಾರ್ಜ್ ಅವರನ್ನು ಸುತ್ತಿಕೊಂಡಿದ್ದವು. ಗಣಪತಿ ಆತ್ಮಹತ್ಯೆ ಪ್ರಕರಣವನ್ನು ಅಸ್ತ್ರವನ್ನಾಗಿ ಮಾಡಿಕೊಂಡಿದ್ದ ಪ್ರತಿಪಕ್ಷಗಳು ರಾಜೀನಾಮೆಗೆ ಒತ್ತಾಯಿಸಿದ್ದರಿಂದ ಪದತ್ಯಾಗ ಮಾಡಬೇಕಾಗಿಯೂ ಬಂದಿತ್ತು. ಆದರೆ, ಜಾರ್ಜ್ ವಿರುದ್ಧ ಅನೇಕ ಆರೋಪಗಳನ್ನು ಹೊರಿಸಿದರೂ ಅವುಗಳನ್ನು ಸಾಬೀತುಪಡಿಸಲು ಸಾಧ್ಯವಾಗಿರಲಿಲ್ಲ. ಈ ಎಲ್ಲದರ ಮಧ್ಯೆ, ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳೂ ಆಗಿವೆ.

ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಮತಗಳು ನಿರ್ಣಾಯಕ. ಹೀಗಾಗಿ, ಈ ಕೋಟೆಯನ್ನು ಹೇಗೆ ಒಡೆಯುವುದು ಎಂಬ ಚಿಂತೆ ಬಿಜೆಪಿಯನ್ನು ಕಾಡುತ್ತಿದೆ. ಈ ಬಾರಿ ಕೂಡಾ ಜಾರ್ಜ್ ಅವರೇ ಕಾಂಗ್ರೆಸ್ ಹುರಿಯಾಳಾಗುವುದು ನಿಶ್ಚಿತ. ಏಕೆಂದರೆ, ಕ್ಷೇತ್ರದಲ್ಲಿ ‘ಕೈ’ ಪಕ್ಷದಿಂದ ಅವರು ಏಕಮೇವ ಆಕಾಂಕ್ಷಿ. ಅವರಿಗೆ ಸರಿಸಾಟಿಯಾದ ಅಭ್ಯರ್ಥಿಯನ್ನು ಕಣಕ್ಕಿಳಿಸುವುದು ಬಿಜೆಪಿ ಮುಂದಿರುವ ಸವಾಲು. 2013ರಲ್ಲಿ ಬಿಜೆಪಿಯಿಂದ ಕಣಕ್ಕಿಳಿದಿದ್ದ ಪದ್ಮನಾಭ ರೆಡ್ಡಿ, 2018ರಲ್ಲಿಯೂ ಕಣಕ್ಕಿಳಿಯಲು ತಯಾರಿ ನಡೆಸಿದ್ದರು. ಆದರೆ, ಕೊನೆ ಗಳಿಗೆಯಲ್ಲಿ ಎಂ.ಎನ್. ರೆಡ್ಡಿಗೆ ಬಿಜೆಪಿ ಟಿಕೆಟ್ ನೀಡಿತ್ತು. ಹೀಗಾಗಿ ಈ ಬಾರಿ, ಜಾರ್ಜ್ ಎದುರು ಬಿಜೆಪಿಯಿಂದ ತೊಡೆ ತಟ್ಟುವವರು ಯಾರು ಎನ್ನುವುದು ಕುತೂಹಲ ಮೂಡಿಸಿದೆ. ಪ್ರಾಬಲ್ಯ ಇಲ್ಲದೇ ಇದ್ದರೂ ಪೈಪೋಟಿ ನೀಡಲು ಜೆಡಿಎಸ್, ಆಮ್ ಆದ್ಮಿ ಪಕ್ಷ ಕೂಡ ಸಜ್ಜಾಗಿವೆ.

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ



ಕೆ.ಜೆ. ಜಾರ್ಜ್
ಹಾಲಿ ಶಾಸಕ (ಕಾಂಗ್ರೆಸ್)



ಹಾಲಿ ಮತದಾರರ ವಿವರ

1,78,183 ಪುರುಷರು
1,74,734 ಮಹಿಳೆಯರು
3,52,977 ಒಟ್ಟು
60 ತೃತೀಯ ಲಿಂಗಿಗಳು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	1,09,955	69,618	45,487
ಬಿಜೆಪಿ	56,651	46,781	22,879
ಜೆಡಿಎಸ್	4,919	7,709	17,531

‘ಸಿದ್ದರಾಮಯ್ಯ ಪಲಾಯನ ಮಾಡಿದ್ದೇಕೆ?’

ಪ್ರಜಾವಾಣಿ ವಾರ್ತೆ

ನಂಜನಗೂಡು (ಮೈಸೂರು ಜಿಲ್ಲೆ): ‘ಮುಂದಿನ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯ 11 ಕ್ಷೇತ್ರಗಳಲ್ಲೂ ಗೆಲ್ಲುತ್ತೇವೆ ಎನ್ನುವ ಸಿದ್ದರಾಮಯ್ಯ ಬೇರೆಡೆಗೆ ಪಲಾಯನ ಮಾಡಿದ್ದೇಕೆ’ ಎಂದು ಸಂಸದ ವಿ. ಶ್ರೀನಿವಾಸ ಪ್ರಸಾದ್ ಪ್ರಶ್ನಿಸಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಳೆದ ಚುನಾವಣೆಯಲ್ಲಿ ಬಾದಾಮಿಯಲ್ಲಿ ಅಲ್ಪಮತಗಳಿಂದ ಗೆಲುವು ಪಡೆದಿದ್ದರು. ಚಾಮುಂಡೇಶ್ವರಿಯಲ್ಲಿ 35 ಸಾವಿರ ಮತಗಳಿಂದ ಹೀನಾಯ ಸೋಲು ಕಂಡರು. ಮಾಜಿ ಮುಖ್ಯಮಂತ್ರಿಗೆ ತವರಲ್ಲಿ ಸ್ಪರ್ಧಿಸಲು ಕ್ಷೇತ್ರವಿಲ್ಲವೇ, ಜಿಲ್ಲೆಯ ಜನರ ಮೇಲೆ ವಿಶ್ವಾಸವಿಲ್ಲವೇ, ಚಾಮುಂಡೇಶ್ವರಿ ಅಥವಾ ವರುಣಾದಲ್ಲಿ ಗೆಲ್ಲಲಾಗೋಲ್ಲವೇ?’ ಎಂದು ವ್ಯಂಗ್ಯವಾಗಿ ಕೇಳಿದರು.

‘ಪಕ್ಷಾಂತರಿಗಳಿಗೆ ಮತ ಹಾಕುವುದಿಲ್ಲ’

ಕೋಲಾರ: ಪಕ್ಷಾಂತರಿಗಳಿಗೆ ಹಾಗೂ ಜಿಲ್ಲೆ ನಿರ್ಲಕ್ಷಿಸಿರುವ ಪಕ್ಷಗಳಿಗೆ ಮತ ಹಾಕುವುದಿಲ್ಲವೆಂದು ಕೆಲ ಮತದಾರರು ಶನಿವಾರ ಪ್ರಮಾಣ ಸ್ವೀಕರಿಸಿದ್ದಾರೆ.

‘ಹಣಕ್ಕಾಗಿ ಮಾರಿಕೊಂಡವರಿಗೆ, ಮುಂಬೈಗೆ ಹೋದವರಿಗೆ, ಕ್ಷೇತ್ರದ ಹೊರಗಿನವರಿಗೆ, ಜಿಲ್ಲೆ ಅಭಿವೃದ್ಧಿ ಮಾಡದವರಿಗೆ, ರಸ್ತೆಗಳಲ್ಲಿ ಗುಂಡಿ ಬಿದ್ದಿದ್ದರೂ ನಿರ್ಲಕ್ಷಿಸಿರುವವರಿಗೆ, ರೈತರ ಸಮಸ್ಯೆಗಳಿಗೆ ಸ್ಪಂದಿಸದವರಿಗೆ, ರೈತರ ಮೇಲೆ ಗೋಲಿಬಾರ್ ನಡೆಸಿರುವ ಸರ್ಕಾರಗಳಿಗೆ ಕೋಲಾರದ ಮತದಾರರು ಮತದಾನ ಮಾಡುವುದಿಲ್ಲ’ ಎಂದು ನಗರದ ಎಪಿಎಂಸಿ ಮಾರು ಕಟ್ಟೆಯ ಸಮೀಪದ ನರಸಿಂಹಸ್ವಾಮಿ ದೇಗುಲ ಬಳಿ ಪ್ರಮಾಣ ಮಾಡಿದ್ದಾರೆ.

ಕೊರೊನಾ ಕಾಲದಲ್ಲಿ ಜನರಿಗೆ ಸ್ಪಂದಿಸಿದ ಸ್ಥಳೀಯ ನಾಯಕರಿಗೆ ಮತ ಹಾಕುವುದಾಗಿ ನಿರ್ಣಯ ಕೈಗೊಂಡಿದ್ದಾರೆ. 10 ಸದಸ್ಯರು ಒಂದೆಡೆ ಸೇರಿ, ಪ್ರಮಾಣ ಸ್ವೀಕರಿಸಿದ್ದು, ಇವರು ಜೆಡಿಎಸ್ ಕಾರ್ಯಕರ್ತರು ಎಂಬುದು ಗೊತ್ತಾಗಿದೆ.



ಸೂರ್ಯ ನಮಸ್ಕಾರ

ಯೋಗ ಗಂಗೋತ್ರಿ, ಕರ್ನಾಟಕ ಹಾಗೂ ಆಯುಷ್ ಇಲಾಖೆ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ರಥಸಪ್ತಮಿ ಸೂರ್ಯ ನಮಸ್ಕಾರ – ಯೋಗ ಉತ್ಸವ -2023’ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಯೋಗಾಭ್ಯಾಸಿಗಳು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ಮುಸ್ಲಿಂ ಮತದಾರರ ಮನವೊಲಿಸುತ್ತೇವೆ: ಸಿ.ಟಿ. ರವಿ

ಬೆಂಗಳೂರು: ‘ಪ್ರಧಾನಿ ನರೇಂದ್ರ ಮೋದಿ ಆಡಳಿತದ ಅವಧಿಯಲ್ಲಿ ಆಗಿರುವ ಅಭಿವೃದ್ಧಿಯನ್ನು ಮುಂದಿಟ್ಟುಕೊಂಡು ಮುಸ್ಲಿಂ ಮತದಾರರನ್ನು ಮನವೊಲಿಸಲು ನಾವು ಪ್ರಯತ್ನಿಸುತ್ತೇವೆ. ಆದರೆ, ಕಾಂಗ್ರೆಸ್‌ನವರಂತೆ ಮತ ಬ್ಯಾಂಕ್ ರಾಜಕಾರಣ ಮಾಡುವುದಿಲ್ಲ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಮುಸ್ಲಿಂ ಮತದಾರರನ್ನು ಸೆಳೆಯುವಂತೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಪಕ್ಷದ ನಾಯಕರಿಗೆ ಪ್ರಧಾನಿ ಸೂಚನೆ ನೀಡಿರುವ ಕುರಿತು ಸುದ್ದಿಗಾರರಿಗೆ ಶನಿವಾರ ಪ್ರತಿಕ್ರಿಯಿಸಿದ ಅವರು, ‘ನಾವು ಏನು ಮಾಡಿದ್ದೇವೆ? ಜನರಿಗೆ ಯಾವ ಸೌಲಭ್ಯ ಕಲ್ಪಿಸಿದ್ದೇವೆ? ಎಂಬುದನ್ನು ನಮ್ಮನ್ನು ವಿರೋಧಿಸುವವರು ಸೇರಿದಂತೆ ಎಲ್ಲ ಮತದಾರರಿಗೂ ತಿಳಿಸುವುದು ನಮ್ಮ ಕರ್ತವ್ಯ ಎಂದಷ್ಟೇ ಮೋದಿಯವರು ಹೇಳಿದ್ದಾರೆ. ನಾನು ಪ್ರತಿನಿಧಿಸುವ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಅಲ್ಪಸಂಖ್ಯಾತರ ಮಕ್ಕಳ ಶಿಕ್ಷಣಕ್ಕಾಗಿ ₹ 37 ಕೋಟಿ ಒದಗಿಸಲಾಗಿದೆ. ಇದು ತುಷ್ಟೀಕರಣ ಅಲ್ಲ. ಮೋದಿಯವರ ಸರ್ಕಾರ ಜಾರಿ ಮಾಡಿದ ಯಾವುದಾದರೂ ಜಾತಿ ಆಧಾರಿತ ಯೋಜನೆ ತೋರಿಸಿ’ ಎಂದು ಕೇಳಿದರು.

‘ನಾವು ಅಲ್ಪಸಂಖ್ಯಾತರನ್ನು ಗುರಿಯಾಗಿಟ್ಟುಕೊಂಡು ಕೆಲಸ ಮಾಡಿಲ್ಲ. ಕಾಂಗ್ರೆಸ್ ತನ್ನ ರಾಜಕೀಯ ನೀತಿಯ ಭಾಗವಾಗಿ ಟಿಪ್ಪು ಸುಲ್ತಾನ್‌ಗೆ ವಿಶೇಷ ಮನ್ನಣೆ ನೀಡಿತ್ತು. ಟಿಪ್ಪು ಸುಲ್ತಾನ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಇಬ್ಬರಲ್ಲಿ ಮೈಸೂರಿಗೆ ಹೆಚ್ಚು ಕೊಡುಗೆ ನೀಡಿದವರು ಯಾರು? ಬ್ರಿಟೀಷರ ವಿರುದ್ಧ ಹೋರಾಟ ನಡೆಸಿದ್ದರ ಹೊರತಾಗಿ ಉಳಿದದ್ದೆಲ್ಲವೂ ಆತನ ಕ್ರೌರ್ಯಗಳೇ. ಕಾಂಗ್ರೆಸ್ ಟಿಪ್ಪುವನ್ನು ನಿಜವಾಗಿ ಪ್ರೀತಿಸುವುದಿಲ್ಲ. ಆತನ ಹೆಸರಿನಲ್ಲಿ ಲಾಭ ಪಡೆಯಲು ಯತ್ನಿಸುತ್ತಿದೆ. ನಾವು ಅಂತಹ ಮತಬ್ಯಾಂಕ್ ರಾಜಕೀಯ ಮಾಡುವುದಿಲ್ಲ’ ಎಂದರು.

ಅಂತರರಾಷ್ಟ್ರೀಯ ಸಂಚು: ‘2002ರ ಗುಜರಾತ್ ಗಲಭೆಯ ಕುರಿತು ಬಿಬಿಸಿ ವಾಹಿನಿಯು ನಿರ್ಮಿಸಿರುವ ಸಾಕ್ಷ್ಯಚಿತ್ರದ ಹಿಂದೆ ಭಾರತದಲ್ಲಿ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಅಂತರ ರಾಷ್ಟ್ರೀಯ ಮಟ್ಟದ ಸಂಚು ಇದೆ’ ಎಂದರು.

‘ಸಾಕ್ಷ್ಯಚಿತ್ರವು ಪ್ರಾಮಾಣಿಕವಾದ ಅಭಿಪ್ರಾಯಗಳನ್ನು ಒಳಗೊಂಡಿಲ್ಲ. ಗಲಭೆ ಕುರಿತು ವಿಚಾರಣೆ ನಡೆಸಿದ್ದ ನಾನಾವತಿ ಮತ್ತು ಶಾ ಆಯೋಗಗಳು ನೀಡಿದ್ದ ವರದಿಯಲ್ಲಿ ಅಭಿಪ್ರಾಯಗಳನ್ನು ಉಲ್ಲೇಖಿಸಿಲ್ಲ. 2022ರ ಜನವರಿಯಲ್ಲೇ ಸುಪ್ರೀಂ ಕೋರ್ಟ್ ಮೋದಿಯವರನ್ನು ಆರೋಪಗಳಿಂದ ಮುಕ್ತಗೊಳಿಸಿದೆ. ನೀವು ಸುಪ್ರೀಂ ಕೋರ್ಟ್ ಅನ್ನು ಗೌರವಿಸುತ್ತೀರೋ? ಬ್ರಿಟಿಷರನ್ನೋ? ಕೆಲವರು ಈಗಲೂ ಗುಲಾಮಗಿರಿಯ ಮನಸ್ಥಿತಿ ಹೊಂದಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ನೇತಾಜಿ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಿ’

ಬೆಂಗಳೂರು: ‘ವಿದ್ಯಾರ್ಥಿಗಳು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ತತ್ವಾದರ್ಶಗಳನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳಬೇಕು’ ಎಂದು ಶಿಕ್ಷಣ ತಜ್ಞ ಅಲ್ಲಮಪ್ರಭು ಬೆಟ್ಟದೂರು ಕರೆ ನೀಡಿದರು.

ನಗರದ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 125ನೇ ಜನ್ಮದಿನಾಚರಣೆಯ ಪ್ರಯುಕ್ತ ಎಐಡಿಎಸ್‌ಒ ಹಮ್ಮಿಕೊಂಡಿದ್ದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ನೇತಾಜಿ ಅವರು ಸ್ವಾತಂತ್ರ್ಯ ಸಂಗ್ರಾಮದ ಬಹುದೊಡ್ಡ ನಾಯಕರಾಗಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ಒಂದು ವೈಚಾರಿಕ ಮುನ್ನೋಟವನ್ನು ಹೊಂದಿದ್ದರು. ಮಹಿಳಾ ಸೈನ್ಯವನ್ನು ಕಟ್ಟಿ ಚಳವಳಿಯಲ್ಲಿ ಮಹಿಳೆಯರಿಗೂ ಕೂಡ ಪಾಲುದಾರಿಕೆಯನ್ನು ನೀಡಿದ್ದರು’ ಎಂದು ತಿಳಿಸಿದರು.

ಹಂಪಿ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಮುರಿಗೆಪ್ಪ ಮಾತನಾಡಿ, ‘ಸುಭಾಷ್ ಚಂದ್ರ ಬೋಸ್ ಅವರ ಮುಖ್ಯ ಗುರಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವುದಾಗಿತ್ತು. ಜಾತಿ–ಧರ್ಮವನ್ನು ಮೀರಿ ರಾಷ್ಟ್ರೀಯತೆಯ ಭಾವನೆಗೆ ಗೌರವಿಸುವುದು ಅವರ ವೈಶಿಷ್ಟ್ಯವಾಗಿತ್ತು’ ಎಂದರು. ಎಐಡಿಎಸ್‌ಒ ರಾಷ್ಟ್ರೀಯ ಅಧ್ಯಕ್ಷ ವಿ.ಎನ್. ರಾಜ ಶೇಖರ್, ರಾಜ್ಯ ಘಟಕದ ಅಧ್ಯಕ್ಷೆ ಅಶ್ವಿನಿ ಕೆ.ಎಸ್.,ಕಾರ್ಯದರ್ಶಿ ಅಜಯ್ ಕಾಮತ್ ಇದ್ದರು.

ಬ್ರಾಹ್ಮಣರ ಮಾಲೀಕತ್ವದ ಪತ್ರಿಕೆಗಳಿಗೆ ಜಾಹೀರಾತು: ಮಹಾಸಭಾ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ, ಹಿಂದುಳಿದ ವರ್ಗಗಳ ಮಾಲೀಕತ್ವದ ಪತ್ರಿಕೆಗಳಿಗೆ ನೀಡುತ್ತಿರುವ ಪ್ರೋತ್ಸಾಹಕ ಜಾಹೀರಾತು ಬೆಂಬಲವನ್ನು ಬ್ರಾಹ್ಮಣ ಸಮುದಾಯದ ಮಾಲೀಕತ್ವದ ಪತ್ರಿಕೆಗಳಿಗೂ ವಿಸ್ತರಿಸಿದ ರಾಜ್ಯ ಸರ್ಕಾರದ ಆದೇಶವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸ್ವಾಗತಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ, ‘ಕಳೆದ ಸಾಲಿನ ಬಜೆಟ್‌ನಲ್ಲಿ ಹಿಂದುಳಿದ ವರ್ಗಗಳ ಒಡೆತನದ ಪತ್ರಿಕೆಗಳ ಮಾಲೀಕರ ಪತ್ರಿಕೆಗಳಿಗೆ ಪ್ರೋತ್ಸಾಹಕ ಜಾಹೀರಾತು ನೀಡುವ ಮೂಲಕ ಸರ್ಕಾರ ಕನ್ನಡ ಭಾಷಾ ಪತ್ರಿಕೆಗಳ ಉಳಿವಿಗೆ ದಿಟ್ಟ ಕ್ರಮ ಕೈಗೊಂಡಿತ್ತು. ಇದರಿಂದ 450ಕ್ಕೂ ಅಧಿಕ ಪತ್ರಿಕೆಗಳ ಉಳಿವಿಕೆ ದಾರಿಯಾಗಿತ್ತು. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿದ್ದ ಲಿಂಗಾಯತ, ಒಕ್ಕಲಿಗ ಮತ್ತು ಅಲ್ಪ ಸಂಖ್ಯಾತ ಸಮುದಾಯದ ಒಡೆತನದ ಪತ್ರಿಕೆಗಳೂ ಸವಲತ್ತನ್ನು ಪಡೆದಿವೆ. ಈ ಸವಲತ್ತಿನಿಂದ ಬ್ರಾಹ್ಮಣ ಸಮುದಾಯದ ಮಾಲೀಕತ್ವದ ಸುಮಾರು 25ರಷ್ಟು ಪತ್ರಿಕೆಗಳು ವಂಚಿತವಾಗಿದ್ದವು’ ಎಂದು ಮಾಹಿತಿ ನೀಡಿದ್ದಾರೆ.

‘ಯಾವುದೇ ಸಮುದಾಯದ ಮಾಲೀಕತ್ವದ ಪತ್ರಿಕೆಗಳಿಗೆ ಮುದ್ರಣ ಕಾಗದ ದರ, ಮುದ್ರಣ ವೆಚ್ಚ, ಸರಬರಾಜು, ನೌಕರರ ಭತ್ಯೆ ವೆಚ್ಚಗಳು ಒಂದೇ ಆಗಿರುತ್ತವೆ. ಹಾಗಾಗಿ, ಬ್ರಾಹ್ಮಣರ ಮಾಲೀಕತ್ವದ ಪತ್ರಿಕೆಗಳಿಗೂ ಈ ಸವಲತ್ತು ವಿಸ್ತರಿಸಲು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮನವಿ ಮಾಡಿತ್ತು. ನಮ್ಮ ಈ ಮನವಿಗೆ ಮುಖ್ಯಮಂತ್ರಿ ಸ್ಪಂದಿಸಿದ್ದಾರೆ. ಸ್ವಾತಂತ್ರ್ಯಾ ನಂತರ ಇದೆ ಮೊದಲ ಬಾರಿ ಇಂತಹ ಅವಕಾಶ ದೊರೆತಿದೆ. ಆದರೆ, ಕೆಲವರು ಈ ಸವಲತ್ತು ಕೇವಲ ಬ್ರಾಹ್ಮಣ ಸಮುದಾಯದ ಒಡೆತನದ ಪತ್ರಿಕೆಗಳಿಗಷ್ಟೇ ಸೀಮಿತ ಎಂಬಂತೆ ಪ್ರಚಾರ ಮಾಡುತ್ತಿದ್ದಾರೆ’ ಎಂದಿದ್ದಾರೆ.

ಇನ್ನಷ್ಟು ನಗರ ಸುದ್ದಿಗಳು 9

ನಗರದಲ್ಲಿ ಇಂದು

ಸಮ್ಮಿಲನ–2023: 10ನೇ ವರ್ಷದ ಸಂಗೀತ ಸಂಭ್ರಮ ಹಾಗೂ ಕನ್ನಡ ಕಲರವ ಕಂಬಾರ ನಮನ ಕಾರ್ಯಕ್ರಮ: ಉದ್ಘಾಟನೆ: ಆಚಾರ್ಯ ಅರುಣ್ ಪ್ರಕಾಶ್, ಕೆ. ಹರೀಶ್, ಸಂಗೀತ ಗಾಯನ: ಶ್ರೀ ಮ್ಯೂಸಿಕ್ ವಿದ್ಯಾರ್ಥಿಗಳಿಂದ, ಬೆಳಿಗ್ಗೆ 9ರಿಂದ. ಕಂಬಾರ ನಮನ ಕಾರ್ಯಕ್ರಮದ ಅತಿಥಿಗಳು: ಚಂದ್ರಶೇಖರ ಕಮಬಾರ, ಪ.ರಾ. ಕೃಷ್ಣಮೂರ್ತಿ, ಸನ್ಮಾನ: ಪಂ. ಎಂ.ಪಿ. ಹೆಗಡೆ ಪಡಿಗೇರಿ ಅವರಿಗೆ. ಸಂಗೀತ ಗಾಯನ: ಎಂ.ಪಿ. ಹೆಗಡೆ ಅವರಿಂದ, ಸಂಜೆ 4.30ರಿಂದ

ಜಿ.ಪಿ. ರಾಮಣ್ಣ ಸಂಪಾದಿತ ‘ಕ್ಲಬ್ ಹೌಸ್ ಕತೆಗಳು’, ಕೆ.ಎನ್. ಭಗವಾನ್ ಅವರ ‘ಬಾಲ್ಯದ ನನ್ನೂರಿಗೊಂದು ಪಯಣ’ ಪುಸ್ತಕಗಳ ಬಿಡುಗಡೆ: ಜಿ.ಎಸ್. ನಂಜುಂಡಸ್ವಾಮಿ, ಅಧ್ಯಕ್ಷತೆ: ಜಿ. ಅಶ್ವತ್ಥನಾರಾಯಣ(ಅನಾಜಿ), ಕೃತಿಗಳ ಕುರಿತು: ಚಿಂತಾಮಣಿ ಕೊಡ್ಲೆಕೆರೆ, ಪರಂಪರಾ ರಾಜ್ಯೋತ್ಸವ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ: ಬೇಲೂರು ರಾಮಮೂರ್ತಿ, ಉಪಸ್ಥಿತಿ: ಕೆ.ಎನ್. ಭಗವಾನ್, ಎಂ. ಬೈರೇಗೌಡ, ಎಂ. ಭರತ್ ಭೂಷಣ್, ಆಯೋಜನೆ: ಪರಂಪರಾ, ಸ್ಥಳ: ರವೀಂದ್ರ ಕಲಾಕ್ಷೇತ್ರ (ಮಹಿಳಾ ವಿಶ್ರಾಂತಿ ಗೃಹ), ಜೆ.ಸಿ. ರಸ್ತೆ, ಬೆಳಿಗ್ಗೆ 10



‘ಸೀತೂ ಮದುವೆ’ ನಾಟಕದ ದೃಶ್ಯ

‘ಸೀತೂ ಮದುವೆ’ ನಾಟಕ ಪ್ರದರ್ಶನ: ನಿರ್ದೇಶನ: ಶೈಲೇಶ್ ಕುಮಾರ್, ಆಯೋಜನೆ: ಸೈಡ್ ವಿಂಗ್ಸ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 7.30



ರೋಶಿನಿ.ಎ ರೆಡ್ಡಿ

ಭರತನಾಟ್ಯ ರಂಗಪ್ರವೇಶ: ರೋಶಿನಿ.ಎ ರೆಡ್ಡಿ, ಉಪಸ್ಥಿತಿ: ಜಿ. ವಿ. ರಾಮಕೃಷ್ಣ, ಕವಿತಾ ರಾಮಕೃಷ್ಣ, ವಿವೇಕ್ ಸುಬ್ಬಾರೆಡ್ಡಿ, ರಾಧಾ ರಾಮಚಂದ್ರ, ಯಮುನಾ ಶ್ರೀನಿಧಿ, ನವ್ಯಾ ನಟರಾಜನ್, ಆಯೋಜನೆ: ಪುಟ್ಟಣ್ಣ ಚೆಟ್ಟಿ ಸಭಾಭವನ, ಜೆ.ಸಿ. ರಸ್ತೆ, ಸಂಜೆ 5ರಿಂದ

ಪ್ರೇರಣಾ ಸಮಾರಂಭ: ಸಾನ್ನಿಧ್ಯ: ಸಿದ್ಧರಾಮಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಎಂ.ಟಿ.ಬಿ ನಾಗರಾಜ್, ಅಧ್ಯಕ್ಷತೆ: ಎಚ್.ಎಂ. ರೇವಣ್ಣ, ಅತಿಥಿಗಳು: ಯತೀಂದ್ರ ಸಿದ್ದರಾಮಯ್ಯ, ಎಂ. ಲಕ್ಷ್ಮಣ್, ಎಂ. ರಾಮಯ್ಯ, ಲಿಂಗಪ್ಪ, ನಾಗರಾಜು, ಆಯೋಜನೆ: ಕಾಳಿದಾಸ ಹೆಲ್ತ್ ಆ್ಯಂಡ್ ಎಜುಕೇಷನ್ ಟ್ರಸ್ಟ್, ಸ್ಥಳ: ಡಿ. ದೇವರಾಜ್ ಅರಸು ಭವನ, ವಸಂತನಗರ, ಬೆಳಿಗ್ಗೆ 10

ಕ್ಷತ್ರಿಯರ ಬೃಹತ್ ಸಮಾವೇಶ: ಬಸವರಾಜ ಬೊಮ್ಮಾಯಿ, ಬಿ.ಎಸ್. ಯಡಿಯೂರಪ್ಪ, ಅರುಣ್ ಸಿಂಗ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಪ್ರಭು ಚವ್ಹಾಣ್, ಎಂ.ಟಿ.ಬಿ ನಾಗರಾಜ್, ಬೈರತಿ ಬಸವರಾಜ, ಬಂಡೆಪ್ಪ ಕಾಶೆಂಪೂರ, ಆಯೋಜನೆ: ಕರ್ನಾಟಕ ಕ್ಷತ್ರಿಯ ಒಕ್ಕೂಟ, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 10

ಕೋಟಿ–ಚೆನ್ನಯ್ಯ ಕ್ರೀಡಾಕೂಟ–2023’ ಉದ್ಘಾಟನೆ: ಕೆ.ಸಿ. ನಾರಾಯಣ ಗೌಡ, ಅಧ್ಯಕ್ಷತೆ: ಕೆ. ಹರೀಶ್ ಕುಮಾರ್, ಆಯೋಜನೆ: ಬಿಲ್ಲವ ಅಸೋಸಿಯೇಷನ್, ಸ್ಥಳ: ವೈ.ಎಂ.ಸಿ.ಎ. ಮೈದಾನ, ರಿಸರ್ವ್ ಬ್ಯಾಂಕ್ ಪಕ್ಕ, ನೃಪತುಂಗ ರಸ್ತೆ, ಬೆಳಿಗ್ಗೆ 10

ಪಿ.ವಿ. ನಾರಾಯಣ ಅವರಿಗೆ ಅಭಿನಂದನೆ, ಕನ್ನಡ ಪ್ರಧಾನ ಗ್ರಂಥ ಬಿಡುಗಡೆ ಸಮಾರಂಭ: ಹಂ.ಪ. ನಾಗರಾಜಯ್ಯ, ಗ್ರಂಥ ಬಿಡುಗಡೆ: ಟಿ.ವಿ. ವೆಂಕಟಾಚಲಶಾಸ್ತ್ರೀ, ಅಭಿನಂದನೆ ನುಡಿ: ಎಚ್. ಶಶಿಕಲಾ, ಅಧ್ಯಕ್ಷತೆ: ಜಿ.ಎಸ್. ಸಿದ್ಧಲಿಂಗಯ್ಯ, ಉಪಸ್ಥಿತಿ: ಎಂ. ನರಸಿಂಹ, ಬೈರಮಂಗಲ ರಾಮೇಗೌಡ, ಆರ್. ಲಕ್ಷ್ಮೀನಾರಾಯಣ, ಆಯೋಜನೆ: ಡಾ.ಪಿ.ವಿ. ನಾರಾಯಣ ಅಭಿನಂದನೆ ಸಮಿತಿ, ಸ್ಥಳ: ಸಾಂಸ್ಕೃತಿಕ ಭವನ, ಉದಯಭಾನು ಕಲಾಸಂಘ, ಗವೀಪುರ, ಬೆಳಿಗ್ಗೆ 10.30

ಸಂಸ್ಥೆಯ ಉದ್ಘಾಟನೆ, ‘ಮಕ್ಕಳ ಬೆಳವಣಿಗೆಯಲ್ಲಿ–ಪೋಷಕರ ಪಾತ್ರ’ ಕುರಿತು ಮಾತುಕತೆ: ಉದ್ಘಾಟನೆ: ಸೋಮಶೇಖರ್ ಮೂರ್ತಿ, ಅಧ್ಯಕ್ಷತೆ: ತೇಜಸ್ ಎಂ.ಕೆ., ವಿಷಯ ಮಂಡನೆ: ದೊಡ್ಡಿ ಶಿವರಾಂ, ಅತಿಥಿಗಳು: ವಿ. ನಾರಾಯಣಸ್ವಾಮಿ, ಎಂ. ಶಿವರಾಜ್, ಎಚ್. ಜಯಮ್ಮ, ಉಪಸ್ಥಿತಿ: ರಾಮಯ್ಯ, ರಾಮಲಿಂಗಬಾಬು, ಕುಮಾರ್ ಜಿ., ಕೆ. ವಿ. ನಟರಾಜ್, ಬಿ.ಕೆ. ಶಿವಕುಮಾರ್, ಸುರೇಶ್ ವಿ., ಕೇಶವಮೂರ್ತಿ, ಆಯೋಜನೆ ಮತ್ತು ಸ್ಥಳ: ವಿಶ್ವರತ್ನ ಡಾ.ಬಿ.ಆರ್. ಅಂಬೇಡ್ಕರ್ ಸಾಮಾಜಿಕ, ಸಾಂಸ್ಕೃತಿಕ ಮತ್ತು ಶಿಕ್ಷಣ ಸೇವಾ ಟ್ರಸ್ಟ್, ಕಮಲಾನಗರ, ಬೆಳಿಗ್ಗೆ 10.30

‘ಸಾಹಿತ್ಯೋತ್ಸವ–2023’ ಪುಸ್ತಕ ಬಿಡುಗಡೆ, ಕವಿಗೋಷ್ಠಿ, ‘ಅವ್ವ’ ಪ್ರಶಸ್ತಿ ಪ್ರದಾನ, ಭರತನಾಟ್ಯ ಮತ್ತು ನಾಟಕ ಪ್ರದರ್ಶನ: ಅತಿಥಿಗಳು: ಚಿತ್ರಲೇಖ, ನಿಡಸಾಲೆ ಪುಟ್ಟಸ್ವಾಮಯ್ಯ, ಎಂ.ಆರ್. ಕಮಲ, ಚಂದ್ರಿಕಾ ಪುರಾಣಿಕ್, ಆಶಾ ರಘು, ಬೇಲೂರು ರಘುನಂದನ್, ಶುಭಾ ನಾಡಿಗ್, ಆಯೋಜನೆ: ಸಾಹಿತ್ಯಲೋಕ ಪಬ್ಲಿಕೇಷನ್ಸ್ ಅವ್ವ ಪುಸ್ತಕಾಲಯ ಆ್ಯಂಡ್ ಸಾಹಿತ್ಯ ಮೈತ್ರಿ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30ರಿಂದ

‘ಸರ್ವೋದಯ’, ‘ಬಯಲು’ ವೀರಗಾಸೆ ಗೀತ ರೂಪಕ: ನಿರ್ದೇಶನ: ಮಹಾಂತೇಶ್ ದೇಗಾವಿ, ವೀರಗಾಸೆ ನೃತ್ಯ ಸಂಯೋಜನೆ: ಎಸ್.ಎಚ್. ಚನ್ನವೀರಪ್ಪ, ಪ್ರಸ್ತುತಿ: ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರದ ಮಕ್ಕಳು, ಸಹಕಾರ: ಎಂ.ಸಿ. ನರೇಂದ್ರ, ಆಯೋಜನೆ: ರಾಗಿ ಕಣ ಸಂತೆ, ಸ್ಥಳ: ಶ್ರೀರಾಮಕೃಷ್ಣ, ಸಮಗ್ರ ಶಿಕ್ಷಣ ಕೇಂದ್ರದ ಆವರಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

ಜನಭಾವ ನವಗಾನ–1: ಗಾಯನ: ಎಚ್. ಎರ್ರಿಸ್ವಾಮಿ, ಮಂಜುಳ ಚಿಂಚಲಿ, ಸುಜಾತ, ಮಹೇಶ್ ಹೂಗಾರ್, ಪ್ರೇಮ, ಮಂಜುನಾಥ್ ಎನ್.ಆರ್., ಜ್ಯೋತಿ, ಗಣೇಶ್ ಬಿ.ಎನ್., ರಾಜು ಜಿ.ಜಿ., ಶ್ರೀಲಕ್ಷ್ಮಿ, ಆಯೋಜನೆ: ಮಂದಾರ ಗಾಯನ ಚೇತನ, ಸ್ಥಳ: ಮಹಿಳೆಯರ ವಿಶ್ರಾಂತಿ ಗೃಹ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30

ಗೌರಿ ಲಂಕೇಶ್ ಅವರ 61ನೇ ಜನ್ಮ ವಾರ್ಷಿಕೋತ್ಸವ: ‘ಮೌನವಾದ ಧ್ವನಿಗಳು: ಹೊಸ ಭಾರತದಲ್ಲಿ ಪತ್ರಿಕೋದ್ಯಮಕ್ಕೆ ಇರುವ ಬೆದರಿಕೆಗಳು’ ಕುರಿತು ಉಪನ್ಯಾಸ: ಶಶಿಕುಮಾರ್, ಅಧ್ಯಕ್ಷತೆ: ತೀಸ್ತಾ ಸೆಟಲ್‌ವಾಡ್, ಕವಿತಾ ಲಂಕೇಶ್ ಅವರು ನಿರ್ಮಿಸಿರುವ ಗೌರಿ ಕಿರು ಚಿತ್ರದ ಬಿಡುಗಡೆ, ಆಯೋಜನೆ: ಗೌರಿ ಮೆಮೊರಿಯಲ್ ಟ್ರಸ್ಟ್, ಸ್ಥಳ: ಕಲಾವಿದರ ಸಂಘ, ಚಾಮರಾಜಪೇಟೆ, ಸಂಜೆ 5

‘ಕೀಚಕ ವಧೆ’ ಪೌರಾಣಿಕ ಯಕ್ಷಗಾನ ಪ್ರದರ್ಶನ: ‘ಕೀಚಕೋತ್ಸಾಹ’ದ ಹಿಮ್ಮೇಳ: ಭಾಗವತರು: ಸತೀಶ ಹೆಗಡೆ ದಂಟಕಲ್, ಮದ್ದಳೆ: ನಾರಾಯಣ ಹೆಬ್ಬಾರ್ ಕಳಚೆ, ಚಂಡೆ, ನಾಗಭೂಷಣ ಕೇಡಲಸರ, ಮುಮ್ಮೇಳ: ವಿರಾಟ: ಸತ್ಯನಾರಾಯಣ ಭಟ್ಟ ಗಾಳಿ, ಸುದೇಷ್ಣೆ: ಸಾಯಿರಾಂ ಭಟ್ಟಿಪ್ರೋಲು, ಸೈರಂಧ್ರಿ: ರಾಧಾಕೃಷ್ಣ ಬೆಳಯೂರು, ‘ಕೀಚಕಾವಸಾನ’ದ ಹಿಮ್ಮೇಳ: ಭಾಗವತರು: ನಾಗರಾಜ ಮಗವಳ್ಳಿ, ಮದ್ದಳೆ: ರಾಜೇಶ ಸಾಗರ, ಚಂಡೆ: ಲಕ್ಷ್ಮೀನಾರಾಯಣ ಸಂಪ, ಮುಮ್ಮೇಳ: ಅಜಿತೇಶ ಹೆಗಡೆ ಸಾಗರ, ವಿಜಯ: ರವಿ ಐತುಮನೆ, ರಾಕ್ಷಸ: ಸತ್ಯನಾರಾಯಣ ಭಟ್ಟ ಗಾಳಿ, ವಲಲ: ಆದಿತ್ಯ ಭಟ್ಟ ಹಲ್ಕೋಡು, ಆಯೋಜನೆ: ಯಕ್ಷಗಾನ ತಪಸ್ಸಂಘ, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಮಧ್ಯಾಹ್ನ 3ರಿಂದ



‘ಕೀಚಕ ವಧೆ’ ಪೌರಾಣಿಕ ಯಕ್ಷಗಾನದ ದೃಶ್ಯ







1. ಮಂಗಳೂರಿನ ಇತಿಹಾಸ ಪ್ರಸಿದ್ಧ ಶ್ರೀ ವೆಂಕಟರಮಣ ದೇವಸ್ಥಾನದ ಶ್ರೀ ವೀರ ವೆಂಕಟೇಶ ದೇವರ ಬ್ರಹ್ಮರಥೋತ್ಸವ (ಮಂಗಳೂರು ರಥೋತ್ಸವ) ಕಾಶೀ ಮಠ ಸಂಸ್ಥಾನದ ಮಠಾಧೀಶ ಸಂಯಮೀಂದ್ರ ತೀರ್ಥ ಸ್ವಾಮೀಜಿ ಉಪಸ್ಥಿತಿಯಲ್ಲಿ ಶನಿವಾರ ವಿಜೃಂಭಣೆಯಿಂದ ಜರಗಿತು –ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್ 2. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ತಾವರಗೇರಾದಲ್ಲಿ ವೀರಭದ್ರೇಶ್ವರ ಜಾತ್ರೆಯ ರಥೋತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ/ಕೆ. ಶರಣಬಸವ ನವಲಹಳ್ಳಿ 3. ಗದಗ ತಾಲ್ಲೂಕಿನ ಬಳಗಾನೂರು ಗ್ರಾಮದ ಮೌನಯೋಗಿ ಚಿಕೇನಕೊಪ್ಪದ ಚನ್ನವೀರ ಶರಣರ 28ನೇ ಪುಣ್ಯಸ್ಮರಣೋತ್ಸವ ಹಾಗೂ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಮಹಾರಥೋತ್ಸವದಲ್ಲಿ ಸಾವಿರಾರು ಮಂದಿ ಭಕ್ತರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ/ ಬನೇಶ ಕುಲಕರ್ಣಿ

ಎಂ.ಕೆ.ಹುಬ್ಬಳ್ಳಿ: ಜನ ಸಂಕಲ್ಪ ಯಾತ್ರೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ

‘ರೈತರಿಗೆ ಶೀಘ್ರ ಮಹದಾಯಿ ನೀರು’

ಪ್ರಜಾವಾಣಿ ವಾರ್ತೆ

ಎಂ.ಕೆ.ಹುಬ್ಬಳ್ಳಿ (ಬೆಳಗಾವಿ ಜಿಲ್ಲೆ): ‘ಮಹದಾಯಿ ಜಲ ವಿವಾದವನ್ನು ಸಂಪೂರ್ಣ ಬಗೆಹರಿಸಿದ್ದೇವೆ. ಅತಿ ಶೀಘ್ರದಲ್ಲಿಯೇ ಕರ್ನಾಟಕದ ರೈತರಿಗೆ ಅವರ ಪಾಲಿನ ನೀರು ಸಿಗಲಿದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದರು.

ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಎಂ.ಕೆ.ಹುಬ್ಬಳ್ಳಿಯಲ್ಲಿ ಶನಿವಾರ ಬಿಜೆಪಿ ಗ್ರಾಮಾಂತರ ಜಿಲ್ಲಾ ಘಟಕ ಆಯೋಜಿಸಿದ್ದ ಜನಸಂಕಲ್ಪ ಯಾತ್ರೆ ಉದ್ಘಾಟಿಸಿ ಅವರು ಮಾತನಾಡಿದರು.

‘ಕಳಸಾ– ಬಂಡೂರಿ ನಾಲಾ ನೀರು ಸಂಬಂಧ ಕರ್ನಾಟಕ ಹಾಗೂ ಗೋವಾ ಸರ್ಕಾರಗಳ ಮಧ್ಯದ ಗೊಂದಲಗಳು ಬಗೆಹರಿದಿವೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತುಂಬ ಸೌಹಾರ್ದದಿಂದ ಈ ಸಮಸ್ಯೆಗೆ ಅಂತ್ಯ ಹಾಡಿದ್ದಾರೆ’ ಎಂದರು.

‘ಮಹದಾಯಿಯ ಒಂದು ಹನಿ ನೀರನ್ನೂ ಕರ್ನಾಟಕಕ್ಕೆ ಕೊಡಬೇಕಾಗಿಲ್ಲ’ ಎಂದು 2007ರ ಚುನಾವಣೆ ಪ್ರಚಾರ ಸಭೆಯಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹೇಳಿದ್ದರು. ಅವರು ಎಬ್ಬಿಸಿಹೋದ ವಿವಾದವನ್ನು ಬಿಜೆಪಿ ಮುಗಿಸಿದೆ’ ಎಂದು ಹೇಳಿದರು.

‘ವೀರ ಸಾವರ್ಕರ್ ಅವರ ಹೋರಾಟಕ್ಕೆ ಕರ್ನಾಟಕದ ಆಲೂರು ವೆಂಕಟರಾಯರು ಬೆನ್ನೆಲುಬಾಗಿದ್ದರು. ಸುವರ್ಣ ವಿಧಾನಸೌಧದಲ್ಲಿ ವೀರ ಸಾವರ್ಕರ್ ಭಾವಚಿತ್ರ ಅಳವಡಿಸಿ ಇಡೀ ಕರ್ನಾಟಕ ಅವರಿಗೆ ನಮನ ಸಲ್ಲಿಸಿದ್ದು ಖುಷಿ ತಂದಿದೆ’ ಎಂದರು.



ಕೆಎಲ್‌ಇ ಸಂಸ್ಥೆಯ ಬಿವಿಬಿಯ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಪ್ರಜಾವಾಣಿ ಚಿತ್ರ

ಪ್ರಜಾ ಮತ ಜನತಂತ್ರದ ಹಬ್ಬ ಕರ್ನಾಟಕ ವಿಧಾನಸಭಾ ಚುನಾವಣೆ - 2023

‘ಬಿಜೆಪಿ– ಕಾಂಗ್ರೆಸ್ ನೇರ ಸ್ಪರ್ಧೆ’

ಹುಬ್ಬಳ್ಳಿ: ನಾಲ್ಕೈದು ತಿಂಗಳಲ್ಲಿ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು, ಈ ಸಲ ತ್ರಿಕೋನ ಸ್ಪರ್ಧೆಯಿಲ್ಲ, ಬಿಜೆಪಿ- ಕಾಂಗ್ರೆಸ್ ನಡುವೆ ನೇರ ಸ್ಪರ್ಧೆ ನಡೆಯಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ ಶನಿವಾರ ಬಿಜೆಪಿ ಹಮ್ಮಿಕೊಂಡ ‘ವಿಜಯ ಸಂಕಲ್ಪ ಅಭಿಯಾನ’ ಅಂಗವಾಗಿ ರೋಡ್ ಶೋ ನಡೆಸಿದ ನಂತರ ಅವರು ಮಾತನಾಡಿದರು.

ರಾಜ್ಯದಲ್ಲಿ ತ್ರಿಕೋನ ಸ್ಪರ್ಧೆ ನಡೆಯಲಿದೆ ಎಂದು ಕೆಲವರು ಹೇಳುತ್ತಿದ್ದಾರೆ. ಕಾಂಗ್ರೆಸ್‌ಗೆ ಅಷ್ಟೆ ಅಲ್ಲ, ಜೆಡಿಎಸ್‌ಗೆ ಮತ ನೀಡಿದರೂ ಅದು ಕಾಂಗ್ರೆಸ್‌ಗೆ ಹೋದಂತೆ. ಚುನಾವಣೆ ಬಿಜೆಪಿ- ಕಾಂಗ್ರೆಸ್ ನಡುವೆ ನೇರಾನೇರವಾಗಿ ನಡೆಯಲಿದೆ ಎಂದರು.

25-30 ಸ್ಥಾನ ಗೆದ್ದು ಮುಖ್ಯಮಂತ್ರಿಯಾಗುವ ಕನಸನ್ನು ಜೆಡಿಎಸ್ ನವರು ಕಾಣುತ್ತಿದ್ದಾರೆ. ಇನ್ನು ಕೆಲವು ಕಾಂಗ್ರೆಸ್ಸಿಗರು, ಜೆಡಿಎಸ್- ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಕನಸು ಕಾಣುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಸಿದ್ದರಾಮಯ್ಯ ಸರ್ಕಾರ ಇದ್ದಾಗ, ಕಾಂಗ್ರೆಸ್ ಹೈಕಮಾಂಡ್‌ಗೆ ಪೇಟಿಎಂ ಆಗಿತ್ತು ಎಂದು ಟೀಕಿಸಿದ ಅವರು, ಕಾಂಗ್ರೆಸ್ ಗಾಂಧಿ ಕುಟುಂಬದ ಪಕ್ಷವಾಗಿದ್ದರೆ, ಜೆಡಿಎಸ್ ಪಕ್ಷವು ಅಪ್ಪ, ಮಕ್ಕಳು, ಮೊಮ್ಮಕ್ಕಳ ಪಕ್ಷವಾಗಿದೆ. ಅಲ್ಲಿ ಸಾಮಾನ್ಯ ಜನರಿಗೆ, ಯುವಕರಿಗೆ ಎಲ್ಲಿದೆ ಅವಕಾಶ ಎಂದು ಪ್ರಶ್ನಿಸಿದರು.

ಕಾಂಗ್ರೆಸ್, ಜೆಡಿಎಸ್ ಎರಡೂ ಪಕ್ಷಗಳು ಕುಟುಂಬ ರಾಜಕಾರಣ ಹಾಗೂ ಭ್ರಷ್ಟಾಚಾರದಲ್ಲಿ ಮುಳುಗಿವೆ. ಇದಕ್ಕೆ ಕೊನೆ ಹಾಡಲು ಬಿಜೆಪಿಗೆ ಮತ ನೀಡಿ ಎಂದು ಮನವಿ ಮಾಡಿಕೊಂಡರು.

ಬೋವಿ ನಿಗಮ: ಶಾಸಕರ ಸಮಿತಿಯಿಂದ ಆಯ್ಕೆ

ಬೆಂಗಳೂರು: ಬೋವಿ ಅಭಿವೃದ್ಧಿ ನಿಗಮದ ಸಂಪೂರ್ಣ ಅನುದಾನವನ್ನು ಆಯಾ ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯ ಸಮಿತಿಯಿಂದಲೇ ಶೇ 100ರಷ್ಟು ಅರ್ಹ ಫಲಾನುಭವಿಗಳನ್ನು ಗುರುತಿಸಿ ಅನುದಾನ ಮಂಜೂರು ಮಾಡಬೇಕು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ನಿಗಮದಲ್ಲಿದ್ದ ಸಮಾಜ ಕಲ್ಯಾಣ ಸಚಿವರ ವಿವೇಚನಾ ಕೋಟಾ ಶೇ 15, ಆಡಳಿತ ನಿರ್ದೇಶಕರ ಮಂಡಳಿಯ ಕೋಟಾ ಶೇ 5 ಸೇರಿ ಶೇ 20ರಷ್ಟು ಸಾಂಸ್ಥಿಕ ಕೋಟಾವನ್ನು ರದ್ದುಪಡಿಸಲಾಗಿದೆ. ಮುಖ್ಯಮಂತ್ರಿಯವರ ಸೂಚನೆಯಂತೆ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

‘ಸಾಂಸ್ಥಿಕ ಕೋಟಾದಲ್ಲಿ ಅನುದಾನ ದುರ್ಬಳಕೆಯಾಗುತ್ತಿದ್ದು, ಈ ಬಗ್ಗೆ ಲೋಕಾಯುಕ್ತದಲ್ಲಿ ತನಿಖೆ ನಡೆಯುತ್ತಿದೆ. ನಿಗಮದಲ್ಲಿ ಪಾರದರ್ಶಕತೆ ತರುವ ಜೊತೆಗೆ ಅನುದಾನವನ್ನು ಸಮರ್ಪಕವಾಗಿ ಹಂಚಿಕೆ ಮಾಡಲು ಸಾಂಸ್ಥಿಕ ಕೋಟಾವನ್ನು ತಕ್ಷಣ ರದ್ದುಪಡಿಸಬೇಕು’ ಎಂದು ಮುಖ್ಯಮಂತ್ರಿ ಸೂಚಿಸಿದ್ದರು.

2ಎ ಮೀಸಲಾತಿ: ಶಾ ಮಧ್ಯಸ್ಥಿಕೆಗೆ ಒತ್ತಾಯ

ಬೆಂಗಳೂರು: ‘ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಸಿಗುವ ತನಕ ಹೋರಾಟ ಕೈಬಿಡುವುದಿಲ್ಲ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಇದರ ಮಧ್ಯಸ್ಥಿಕೆ ವಹಿಸಬೇಕು’ ಎಂದು ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮನವಿ ಮಾಡಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ 15 ದಿನಗಳಿಂದ ಧರಣಿ ಸತ್ಯಾಗ್ರಹ ನಡೆಸುತ್ತಿರುವ ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘ಸಮುದಾಯಕ್ಕೆ 2ಎ ಮೀಸಲಾತಿ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ತಾಯಿ ಮೇಲೆ ಆಣೆ ಮಾಡಿದ್ದನ್ನು ಈಗ ಮರೆತಿದ್ದಾರೆ. ಆದ್ದರಿಂದ, ಅವರ ಮೇಲಿನ ವಿಶ್ವಾಸ ಸಂಪೂರ್ಣ ಹೋಗಿದೆ. ಜ.17ರಂದೇ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಪತ್ರ ಬರೆದಿದ್ದೇನೆ’ ಎಂದರು.

‘ಪತ್ರ ಬರೆದ ಬಳಿಕ, ರಾಜ್ಯಕ್ಕೆ ಅದರಲ್ಲೂ ಪಂಚಮಸಾಲಿ ಸಮುದಾಯದವರು ಹೆಚ್ಚಿರುವ ಭಾಗಗಳಿಗೇ ಅಮಿತ್ ಶಾ ಭೇಟಿ ನೀಡಿದ್ದಾರೆ. ಬೇಡಿಕೆ ಬಗ್ಗೆ ಮುಖ್ಯಮಂತ್ರಿ ಮತ್ತು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಸೂಚನೆ ನೀಡಬೇಕು’ ಎಂದು ಒತ್ತಾಯಿಸಿದರು.

‘ನಾವು ಬರೆದಿರುವ ಪತ್ರದ ಬಗ್ಗೆ ಈಗ ಕೇಂದ್ರಮಟ್ಟದಲ್ಲಿ ಚರ್ಚೆಗಳು ಶುರುವಾಗಿವೆ. ಬಿಜೆಪಿಗೆ ಈ ಸಮುದಾಯದ ಶೇ 80ರಷ್ಟು ಜನ ಬೆಂಬಲ ನೀಡಿದ್ದಾರೆ. ಹೋರಾಟದ ತೀವ್ರತೆ ಬಗ್ಗೆ ಕೇಂದ್ರಕ್ಕೆ ಮನವರಿಕೆ ಮಾಡಿಕೊಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಆದ್ದರಿಂದ ನಾನೇ ಪತ್ರ ಬರೆದು ಮನವರಿಕೆ ಮಾಡಿದ್ದೇನೆ. ನಿರ್ಲಕ್ಷ್ಯ ವಹಿಸಿದರೆ ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾಗುವ ಬಗ್ಗೆಯೂ ವಿವರಿಸಿದ್ದೇನೆ’ ಎಂದು ಹೇಳಿದರು.

‘2ಎ ಮೀಸಲಾತಿಯೇ ಬೇಕೆಂದಿಲ್ಲ. ಅದಕ್ಕೆ ಸರಿಸಮಾನವಾದ ಸೌಲಭ್ಯಗಳು ದೊರಕುವ ಯಾವುದೇ ವರ್ಗ ಒಪ್ಪಿಕೊಳ್ಳುತ್ತೇವೆ. ಆದರೆ, ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು. 2022ರ ಡಿಸೆಂಬರ್ 29ರಂದು ಸರ್ಕಾರ 2 ‘ಡಿ’ ಮೀಸಲಾತಿ ಬಗ್ಗೆ ಸಾಕಷ್ಟು ಗೊಂದಲಗಳಿವೆ. ಸ್ಪಷ್ಟಪಡಿಸುವ ಗೋಜಿಗೂ ಸರ್ಕಾರ ಹೋಗುತ್ತಿಲ್ಲ. ಆದ್ದರಿಂದ ಅಮಿತ್ ಶಾ ಅವರೇ ಮಧ್ಯಸ್ಥಿಕೆ ವಹಿಸಬೇಕು’ ಎಂದು ಕೋರಿದರು.

‘15 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರೂ ಸರ್ಕಾರದಿಂದ ಉತ್ತರ ಬಂದಿಲ್ಲ. ಮುಖ್ಯಮಂತ್ರಿ ಜತೆ ಮತ್ತೆ ಮಾತುಕತೆಗೆ ಹೋಗುವುದಿಲ್ಲ. ಮೀಸಲಾತಿ ಸಿಗುವ ತನಕ ಸತ್ಯಾಗ್ರಹ ನಿಲ್ಲಿಸುವುದಿಲ್ಲ. ಕೇಂದ್ರ ಸರ್ಕಾರ ಸ್ಪಂದಿಸುವ ವಿಶ್ವಾಸ ಇದೆ’ ಎಂದರು.

ನವೋದಯಕ್ಕೆ ಅರ್ಜಿ ಸಲ್ಲಿಸಲು ಪರದಾಟ

ಬೆಂಗಳೂರು: ರಾಜ್ಯದಲ್ಲಿನ ಜವಾಹರ್ ನವೋದಯ ವಿದ್ಯಾಲಯಗಳಲ್ಲಿ 6ನೇ ತರಗತಿಗೆ ಪ್ರವೇಶ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಸರ್ವರ್ ಸಮಸ್ಯೆಯಿಂದಾಗಿ ಅರ್ಜಿ ಸಲ್ಲಿಸಲು ಪೋಷಕರಿಗೆ ಸಾಧ್ಯವಾಗಿಲ್ಲ.

ಅರ್ಜಿ ಸಲ್ಲಿಸಲು ಇದೇ 31 ಕೊನೆಯ ದಿನ. ‘ಸರ್ವರ್ ಸಮಸ್ಯೆ ಇದೆ. ನಿತ್ಯವು ಸೈಬರ್ ಕೇಂದ್ರಕ್ಕೆ ಹೋಗಿ ಅರ್ಜಿ ಸಲ್ಲಿಸಲಾಗದೇ ಮರಳುತ್ತಿದ್ದೇವೆ. ಸಮಸ್ಯೆ ಬಗೆಹರಿಸಬೇಕು. ಇಲ್ಲವೇ ಅರ್ಜಿ ಸಲ್ಲಿಕೆ ಅವಧಿ ವಿಸ್ತರಿಸಬೇಕು’ ಎಂದು ಗದಗ ಜಿಲ್ಲೆಯ ರಾಮಚಂದ್ರ ಒತ್ತಾಯಿಸಿದ್ದಾರೆ.

ಪ್ರತಿ ಜಿಲ್ಲೆಯ ನವೋದಯ ಶಾಲೆಯಲ್ಲೂ ಆ ಜಿಲ್ಲೆಯ ವಿದ್ಯಾರ್ಥಿಗಳಿಗಷ್ಟೆ ಪ್ರವೇಶ ನೀಡಲಾಗುತ್ತದೆ. 2022–23ನೇ ಸಾಲಿನಲ್ಲಿ 5ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಆಯ್ಕೆ ಪರೀಕ್ಷೆಗಳು ಏ.29ರಂದು ನಡೆಯಲಿವೆ.

ತಾಯಿಯ ಬೆಂಬಲಕ್ಕೆ ನಿಂತ ಮಕ್ಕಳು

ಜೆಡಿಎಸ್ ಟಿಕೆಟ್‌ಗಾಗಿ ಭವಾನಿ ರೇವಣ್ಣ– ಸ್ವರೂಪ್ ಮಧ್ಯೆ ಹೆಚ್ಚಿದ ಪೈಪೋಟಿ

ಪ್ರಜಾವಾಣಿ ವಾರ್ತೆ

ಹಾಸನ: ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಲು ಭವಾನಿ ರೇವಣ್ಣ ಹಾಗೂ ಎಚ್.ಪಿ.ಸ್ವರೂಪ್ ಮಧ್ಯೆ ಪೈಪೋಟಿ ಜೋರಾಗಿದೆ.

ಭವಾನಿ ರೇವಣ್ಣ ಅವರಿಗೆ ಟಿಕೆಟ್ ನೀಡುವಂತೆ ಆಗ್ರಹಿಸಿ ಜೆಡಿಎಸ್ ಕಾರ್ಯಕರ್ತೆಯರು ನಗರದ ಸಂಸದರ ನಿವಾಸದ ಎದುರು ಶನಿವಾರ ಸೇರಿದ್ದರು. ಇದರ ಬೆನ್ನಲ್ಲೇ, ಎಚ್.ಪಿ.ಸ್ವರೂಪ್ ಮನೆಯ ಎದುರು ಅವರ ಬೆಂಬಲಿಗರು ಸಭೆ ನಡೆಸಿ ಟಿಕೆಟ್‌ಗಾಗಿ ಒತ್ತಾಯಿಸಿದರು.

‘ಭವಾನಿ ರೇವಣ್ಣ ಹಾಸನ ಕ್ಷೇತ್ರದಿಂದ ಸ್ಪರ್ಧಿಸುವ ಅನಿವಾರ್ಯತೆ ಇಲ್ಲ’ ಎಂಬ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಅರಕಲಗೂಡು ತಾಲ್ಲೂಕಿನ ಹರದೂರು ಗ್ರಾಮದಲ್ಲಿ ಪ್ರತಿಕ್ರಿಯಿಸಿದ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ, ‘ಅವರು ಪಕ್ಷದ ಹಿರಿಯರು. ನಾವು ಅವರ ಬಗ್ಗೆ ಮಾತನಾಡುವುದು ಸೂಕ್ತ ಅಲ್ಲ. ಅವರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಮಗೂ ಅದಕ್ಕೂ ಸಂಬಂಧವಿಲ್ಲ’ ಎಂದರು.

‘2018ರಲ್ಲಿ ಹಾಸನ ಕ್ಷೇತ್ರವನ್ನು ಕಳೆದುಕೊಂಡಿದ್ದೇವೆ. 2023ರಲ್ಲಿ ಮತ್ತೆ ಪಡೆದುಕೊಳ್ಳಬೇಕು ಎನ್ನುವುದೇ ನಮ್ಮ ಉದ್ದೇಶ. ಇತ್ತೀಚಿನ ಲೆಕ್ಕಾಚಾರವನ್ನು ಗಮನಿಸಿದರೆ ಭವಾನಿ ಅಭ್ಯರ್ಥಿಯಾದರೆ ಗೆಲುವು ಖಚಿತ. ಅವರು ಹಾಸನಕ್ಕೆ ಅನಿವಾರ್ಯವಲ್ಲ. ಆದರೆ, ಸೂಕ್ತ ಅಭ್ಯರ್ಥಿ’ ಎಂದು ಪ್ರತಿಪಾದಿಸಿದರು.

ಬಲ ಪ್ರದರ್ಶನ: ಎಚ್.ಪಿ.ಸ್ವರೂಪ್ ಹಾಗೂ ಭವಾನಿ ರೇವಣ್ಣ ಅವರಿಗೆ ಟಿಕೆಟ್ ನೀಡುವಂತೆ ಅವರ ಬೆಂಬಲಿಗರು ಪ್ರತ್ಯೇಕವಾಗಿ ಬಲ ಪ್ರದರ್ಶನ ಮಾಡಿದರು.

ನಿವಾಸದ ಎದುರು ಜಮಾಯಿಸಿದ್ದ ಕಾರ್ಯಕರ್ತೆಯರನ್ನು ಉದ್ದೇಶಿಸಿ ಮಾತನಾಡಿದ ಸಂಸದ ಪ್ರಜ್ವಲ್ ರೇವಣ್ಣ, ‘ಹಿಂದಿನ ಚುನಾವಣೆಯಲ್ಲಿ ದೇವೇಗೌಡರು ಸ್ಥಳೀಯ ಶಾಸಕರು ಹಾಗೂ ಮುಖಂಡರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಂಡಿದ್ದಾರೆ. ಈ ಬಾರಿಯೂ ಸೂಕ್ತ ನಿರ್ಧಾರ ಪ್ರಕಟಿಸಲಿದ್ದಾರೆ’ ಎಂದು ಹೇಳಿದರು.



ಭವಾನಿ ರೇವಣ್ಣ ಅವರಿಗೆ ಹಾಸನ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ನೀಡುವಂತೆ ಆಗ್ರಹಿಸಿ ಶನಿವಾರ ತಮ್ಮ ನಿವಾಸದ ಎದುರು ಜಮಾಯಿಸಿದ್ದ ಜೆಡಿಎಸ್ ಕಾರ್ಯಕರ್ತೆಯರೊಂದಿಗೆ ಸಂಸದ ಪ್ರಜ್ವಲ್ ರೇವಣ್ಣ ಮಾತುಕತೆ ನಡೆಸಿದರು

ಕಾಂಗ್ರೆಸ್ ಕ್ಷೇತ್ರ ವಶಕ್ಕೆ ಮತ್ತೆ ರೋಡ್ ಶೋ

ಒಂದನೇ ಪುಟದಿಂದ

ಕುಂದಗೋಳದ ರೋಡ್ ಶೋನಲ್ಲಿ ಕಾರ್ಯಕರ್ತರೆಲ್ಲ ಮನಬಂದಂತೆ ನರ್ತಿಸುತ್ತ ಮುಂದೆ ಸಾಗಿದರು. ರಸ್ತೆಯ ಎರಡೂ ಬದಿಗಳಲ್ಲಿ ನೆರೆದ ಜನರು ಅಮಿತ್ ಶಾ ಕಡೆಗೆ ಕೈ ಬೀಸಿ ತಮ್ಮ ಬೆಂಬಲ ವ್ಯಕ್ತಪಡಿಸಿದರು.

ತೆರೆದ ವಾಹನದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಸಿ.ಎಂ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಹಾಗೂ ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಜೊತೆಗೂಡಿ, ಸುಮಾರು ಒಂದೂವರೆ ಕಿ.ಮೀ ರೋಡ್‌ಶೋನಲ್ಲಿ ಪಾಲ್ಗೊಂಡರು.

ಬೆಳಿಗ್ಗೆ ಆಪ್ತರ ಸಭೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ, ಸಚಿವರಾದ ಗೋವಿಂದ ಕಾರಜೋಳ, ಮುರುಗೇಶ ನಿರಾಣಿ ಜೊತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಒಂದು ಗಂಟೆಗೂ ಹೆಚ್ಚು ಕಾಲ ಗಂಭೀರವಾಗಿ ಚರ್ಚಿಸಿದರು.

ಚುನಾವಣೆ ಪೂರ್ವ ತಯಾರಿ, ತೀವ್ರ ಪೈಪೋಟಿಯಿರುವ ಕ್ಷೇತ್ರಗಳ ಮಾಹಿತಿ ಪಡೆದಿರುವ ಶಾ, ಮನೆ–ಮನೆಗೆ ತೆರಳಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳನ್ನು ಜನರಿಗೆ ಮನವರಿಕೆ ಮಾಡಿಸಬೇಕು. ಚುನಾವಣೆ ಸಂದರ್ಭ ಎದುರಾಗುವ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಪರಿಹರಿಸಬೇಕು ಎಂದು ಮುಖಂಡರಿಗೆ ಸೂಚಿಸಿರುವುದಾಗಿ ಪಕ್ಷದ ಮೂಲಗಳು ತಿಳಿಸಿವೆ.

ಸಮಾರಂಭದಲ್ಲಿ ಹ್ಯಾಪ್ಪಿ ಬರ್ತ್‌ಡೇ ಹಾಡು

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಹುಟ್ಟುಹಬ್ಬಕ್ಕೆ ಶುಭಕೋರಿದ ತಕ್ಷಣ, ನೆರೆದ ಜನರಿಂದ ಗುಂಪುಗಾನದಲ್ಲಿ ಹ್ಯಾಪ್ಪಿ ಬರ್ತ್‌ಡೇ ಟು ಯು ಹಾಡುಹಾಡಿದರು.

ಸಿ.ಎಂ ಬಸವರಾಜ ಬೊಮ್ಮಾಯಿ ಮಾತನಾಡಲು ಆರಂಭಿಸುತ್ತಿದ್ದಂತೆಯೇ ಮತ್ತೊಮ್ಮೆ ಈ ಹಾಡು ಸಭೆಯಲ್ಲಿ ಅನುರಣಿಸಿತು. ಪಾರ್ಟಿ.. ಪಾರ್ಟಿ ಎಂದು ಹಲವಾರು ಸಲ ಕೂಗಿದಾಗ, ಬೊಮ್ಮಾಯಿ ಅವರು ಪಾರ್ಟಿ ಕೊಡುವ ಭರವಸೆ ನೀಡಿದರು.

‘ತಾಕತ್ತಿದ್ದರೆ ಸಿದ್ದರಾಮಯ್ಯ ಐದು ಸ್ಥಾನ ಗೆಲ್ಲಲಿ’

ಪ್ರಜಾವಾಣಿ ವಾರ್ತೆ



ಎಚ್‌.ಡಿ. ಕುಮಾರಸ್ವಾಮಿ

ರಾಯಚೂರು: ‘ಸಿದ್ದರಾಮಯ್ಯ ಅವರಿಗೆ ತಾಕತ್ತಿದ್ದರೆ ಸ್ವಂತ ಪಕ್ಷ ಕಟ್ಟಿ ಐದು ಸೀಟು ಗೆಲ್ಲಲಿ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಸವಾಲು ಹಾಕಿದರು.

ತಾಲ್ಲೂಕಿನ ಮಿಟ್ಟಿಮಲ್ಕಾಪುರದಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕಾಂಗ್ರೆಸ್ ಆರಂಭಿಸಿರುವ ಪ್ರಜಾಧ್ವನಿ ಯಾತ್ರೆಯಲ್ಲಿ ಬರೀ ಕುಮಾರಸ್ವಾಮಿ ಭಜನೆ ನಡೆದಿದೆ. ಜೆಡಿಎಸ್ 25 ಸ್ಥಾನಗಳನ್ನು ಮಾತ್ರ ಗೆಲ್ಲಲಿದೆ ಎಂದು ಸುಳ್ಳಿನರಾಮಯ್ಯ ಹೇಳಿದ್ದಾರೆ. ಆದರೆ, ಚುನಾವಣೆ ಬಳಿಕ ಜೆಡಿಎಸ್ ದೇಶದ ಗಮನ ಸೆಳೆಯಲಿದೆ’ ಎಂದರು.

> **ರಾಜ್ಯದಲ್ಲಿ ಬಿಜೆಪಿ ಬೆಳವಣಿಗೆಗೆ ಜೆಡಿಎಸ್ ಕಾರಣ. ಜೆಡಿಎಸ್ ರಾಜಕೀಯ ಪಕ್ಷವೇ ಅಲ್ಲ. ಅದಕ್ಕೆ ಯಾವ ಸಿದ್ಧಾಂತವೂ ಇಲ್ಲ**
> **ಸಿದ್ದರಾಮಯ್ಯ**
> ವಿಧಾನಸಭೆ ವಿರೋಧ ಪಕ್ಷದ ನಾಯಕ

‘ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕೆಎಲ್‌ಇ ಸೊಸೈಟಿ ಕಾರ್ಯಕ್ರಮಕ್ಕೆ ಬಂದಿದ್ದಾರೆ. ರಾಜ್ಯಕ್ಕೆ ಯಾವುದೇ ಕೊಡುಗೆ ತಂದಿಲ್ಲ. ಮಹದಾಯಿ ಯೋಜನೆ ಟೆಂಡರ್ ಕರೆಯುವುದಾಗಿ ಹೇಳಿದ್ದರು. ಈಗ ಏನಾಗಿದೆ?’ ಎಂದು ಅವರು ಪ್ರಶ್ನಿಸಿದರು.

ಶಂಕಿತ ಉಗ್ರನ ವಶಕ್ಕೆ ಪಡೆಯಲು ಎನ್‌ಐಎ ಸಿದ್ಧತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ನಡೆದಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿತ ಶಂಕಿತ ಉಗ್ರ ಶಾರೀಕ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಸಿದ್ಧತೆ ನಡೆಸಿದೆ.

ಕಳೆದ ನವೆಂಬರ್‌ನಲ್ಲಿ ಈ ಸ್ಫೋಟ ಪ್ರಕರಣ ನಡೆದಿತ್ತು. ಆಟೊದಲ್ಲಿ ಶಂಕಿತ ಉಗ್ರ ತೆರಳುತ್ತಿದ್ದಾಗ ಬಾಂಬ್ ಸ್ಫೋಟಗೊಂಡು ಆತ ಹಾಗೂ ಆಟೊ ಚಾಲಕ ಗಾಯಗೊಂಡಿದ್ದರು.

ಪ್ರಕರಣವು ಎನ್‌ಐಎಗೆ ಹಸ್ತಾಂತರಗೊಂಡ ಬಳಿಕ ಮಂಗಳೂರಿಗೆ ತೆರಳಿದ್ದ ಅಧಿಕಾರಿಗಳು ಘಟನೆ ನಡೆದ ಸ್ಥಳ ಪರಿಶೀಲನೆ ಹಾಗೂ ಅಲ್ಲಿನ ಪೊಲೀಸರಿಂದ ಮಾಹಿತಿ ಕಲೆ ಹಾಕಿದ್ದರು. ಆದರೆ, ಶಂಕಿತನ ವಿಚಾರಣೆ ಸಾಧ್ಯವಾಗಿರಲಿಲ್ಲ.

ಶೇ 40ರಷ್ಟು ಸುಟ್ಟ ಗಾಯಗೊಂಡಿದ್ದ ಶಾರೀಕ್‌ಗೆ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಲಾಗಿತ್ತು. ಅಲ್ಲಿಂದ ಎನ್‌ಐಎ ಅಧಿಕಾರಿಗಳು ಶಂಕಿತನನ್ನು ವಶಕ್ಕೆ ಪಡೆದು, ಬೆಂಗಳೂರಿಗೆ ಕರೆ ತಂದಿದ್ದರು. ಸಂಪೂರ್ಣ ಚೇತರಿಕೆ ಕಾಣದಿರುವ ಪರಿಣಾಮ ನಗರದ ವಿಕ್ಟೋರಿಯಾ ಆಸ್ಪತ್ರೆಯ ಸುಟ್ಟಗಾಯ ವಿಭಾಗಕ್ಕೆ ಶಂಕಿತನನ್ನು ದಾಖಲಿಸಲಾಗಿತ್ತು.

‘ಶಂಕಿತ ಉಗ್ರ ಚೇತರಿಸಿಕೊಂಡಿದ್ದಾನೆ. ಸದ್ಯದಲ್ಲೇ ಆಸ್ಪತ್ರೆಯಿಂದ ಬಿಡುಗಡೆಯಾಗಲಿದ್ದು, ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಶಾರೀಕ್ ಅಜ್ಜಿ ಮನೆಯಿದ್ದು, ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಅಲ್ಲಿ ಶೋಧ ನಡೆಸಿದ್ದರು. ಆಸ್ತಿ, ಆರ್ಥಿಕ ವಹಿವಾಟಿನ ದಾಖಲೆಗಳನ್ನೂ ಪರಿಶೀಲಿಸಿದ್ದರು. ಆ ಎಲ್ಲ ಮಾಹಿತಿಯನ್ನು ಎನ್‌ಐಎ ಪಡೆದುಕೊಂಡಿದೆ ಎಂದು ಮೂಲಗಳು ಹೇಳಿವೆ.

‘ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಲು ಬೆಂಬಲಿಸುವೆ’

ಪ್ರಜಾವಾಣಿ ವಾರ್ತೆ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ‘ನಾನೂ ಸಿದ್ದರಾಮಯ್ಯ ಅಭಿಮಾನಿ. ಅವರು ಮುಖ್ಯಮಂತ್ರಿಯಾಗುವ ಸಂದರ್ಭ ಬಂದರೆ ಬೆಂಬಲಿಸಲು ಸಿದ್ಧವಿದ್ದೇನೆ. ಇದನ್ನು ಕುರುಬ ಸಮಾಜದವರು ಮನಸ್ಸಿನಲ್ಲಿಟ್ಟುಕೊಳ್ಳಬೇಕು’ ಎಂದು ಜೆಡಿಎಸ್ ಶಾಸಕ ಕೆ.ಮಹದೇವ್ ಹೇಳಿದರು.

ತಾಲ್ಲೂಕಿನ ಇಟಗಳ್ಳಿಯಲ್ಲಿ ರಸ್ತೆ ಕಾಮಗಾರಿಗೆ ಶನಿವಾರ ಚಾಲನೆ ನೀಡಿ ಮಾತನಾಡಿದ ಅವರು, ‘ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಅನುದಾನ ತಂದು ತಾಲ್ಲೂಕನ್ನು ಅಭಿವೃದ್ಧಿಪಡಿಸುವ ಸುವರ್ಣಾವಕಾಶವನ್ನು ಆಗಿನ ಶಾಸಕ ಕೆ.ವೆಂಕಟೇಶ್ ಕೈಚೆಲ್ಲಿದರು. ತಮ್ಮ ವಿಲಾಸಿ ಜೀವನಶೈಲಿಯಿಂದ ತಾಲ್ಲೂಕನ್ನು ಹಿಂದುಳಿಯುವಂತೆ ಮಾಡಿದ್ದಾರೆ’ ಎಂದು ಆರೋಪಿಸಿದರು.

ಸಿರಿಗೆರೆ ಉಜ್ಜಯಿನಿ ಪೀಠದ ಭಕ್ತರ ನಡುವೆ ಜಗಳ

ಕಾನ್‌ಸ್ಟೆಬಲ್ ಸೇರಿ 20 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಕೊಟ್ಟೂರು (ವಿಜಯನಗರ ಜಿಲ್ಲೆ): ತಾಲ್ಲೂಕಿನ ಕಾಳಾಪುರದಲ್ಲಿ ಉಜ್ಜಯಿನಿ ಪೀಠದ ಭಕ್ತರು ಹಾಗೂ ಸಿರಿಗೆರೆ ತರಳಬಾಳು ಪೀಠದ ಭಕ್ತರ ನಡುವೆ ಮಾರಾಮಾರಿ ನಡೆದಿದ್ದು, 20 ಜನರು ಶನಿವಾರ ಗಾಯಗೊಂಡಿದ್ದಾರೆ.

ಮುಂಜಾಗ್ರತಾ ಕ್ರಮವಾಗಿ ತಹಶೀಲ್ದಾರ್ ಎಂ. ಕುಮಾರಸ್ವಾಮಿ ಅವರು ಕೊಟ್ಟೂರು, ಉಜ್ಜಯಿನಿ ಸೇರಿದಂತೆ ಒಂಬತ್ತು ಗ್ರಾಮಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ಘಟನೆಯಲ್ಲಿ ಕಾನ್‌ಸ್ಟೆಬಲ್ ಲಿಂಗಯ್ಯ ಎಂಬುವರು ಗಾಯಗೊಂಡಿದ್ದಾರೆ. ಮನೆಯಲ್ಲಿದ್ದವರನ್ನು ಬಂದು ಹೊಡೆದಿದ್ದಾರೆ ಎಂದು ಗಾಯಾಳುಗಳು ಆರೋಪಿಸಿದ್ದಾರೆ.

ಕೊಟ್ಟೂರು ಪಟ್ಟಣದಲ್ಲಿ ಹಮ್ಮಿಕೊಂಡಿರುವ ತರಳಬಾಳು ಹುಣ್ಣಿಮೆ ಮಹೋತ್ಸವ ಅಂಗವಾಗಿ ಸಿರಿಗೆರೆ ಮಠದ ಭಕ್ತರು ಸಿರಿಗೆರೆಯಿಂದ ಕೊಟ್ಟೂರು ವರೆಗೆ ಬೈಕ್ ರ‍್ಯಾಲಿ ಹಮ್ಮಿಕೊಂಡಿದ್ದರು. ರ‍್ಯಾಲಿ ಕಾಳಾಪುರ ಪ್ರವೇಶಿಸಿದಾಗ ಬೈಕ್ ಸವಾರರು ಹಾಗೂ ಕಾಳಾಪುರ ಗ್ರಾಮಸ್ಥರ ನಡುವೆ ವಾಗ್ವಾದ ನಡೆದಿದೆ. ಬಳಿಕ ರ‍್ಯಾಲಿಯಲ್ಲಿ ಬಂದವರು ದಾಳಿ ನಡೆಸಿ, ಮನೆ ಮುಂದೆ ನಿಲ್ಲಿಸಿದ ಬೈಕ್‌ಗಳಿಗೆ ಜಖಂಗೊಳಿಸಿದ್ದಾರೆ. ಮನೆಯ ಬಾಗಿಲು, ಕಿಟಕಿ ಮುರಿದು ಹಾಕಿದ್ದಾರೆ.

‘ಜ.28ರಿಂದ ಫೆ.5ರವರೆಗೆ ಉಜ್ಜಯಿನಿ ಮಠದ ವ್ಯಾಪ್ತಿಯ 9 ಗ್ರಾಮಗಳಲ್ಲಿ ಜನರು ಮೆರವಣಿಗೆ ಮಾಡುವುದು, ಬಹಿರಂಗ ಘೋಷಣೆ, ವಾದ್ಯ ಬಾರಿಸುವುದನ್ನು ನಿಷೇಧಿಸಲಾಗಿದೆ. ಮಾರಕಾಸ್ತ್ರಗಳ ಸಾಗಾಟ, ಸ್ಫೋಟಕ ವಸ್ತುಗಳ ಬಳಕೆಯನ್ನು ನಿಷೇಧಿಸಲಾಗಿದೆ’ ಎಂದು ತಹಶೀಲ್ದಾರ್ ಆದೇಶದಲ್ಲಿ ತಿಳಿಸಿದ್ದಾರೆ.

ಘಟನೆಗೆ ಕಾರಣವೇನು?:

ಉಜ್ಜಯಿನಿಯ ಮರುಳಸಿದ್ದೇಶ್ವರ ದೇವಸ್ಥಾನ ಸಾಧು ಸದ್ಧರ್ಮ ಜನಾಂಗದ ಆರಾಧ್ಯ ದೈವವಾಗಿದೆ. ಉಜ್ಜಯಿನಿಯಲ್ಲಿರುವ ದೇವಸ್ಥಾನ ಸಾಧು ಸದ್ಧರ್ಮ ಜನಾಂಗಕ್ಕೆ ಸೇರಬೇಕು ಎಂಬ ಹೋರಾಟ ಅನೇಕ ವರ್ಷಗಳಿಂದ ನಡೆಯುತ್ತಿದೆ. ಈಗ ಕೊಟ್ಟೂರಿನಲ್ಲಿಯೇ ತರಳಬಾಳು ಹುಣ್ಣಿಮೆ ಮಹೋತ್ಸವ ಹಮ್ಮಿಕೊಂಡಿರುವುದರಿಂದ ಈ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ.

ಕಾಳಾಪುರದಲ್ಲಿ ಮರುಳ ಸಿದ್ದೇಶ್ವರ ದೇವಸ್ಥಾನಕ್ಕೆ ಸಂಬಂಧಿಸಿದ ಒಂಬತ್ತು ಪಾದುಕೆಗಳಿವೆ. ಭರತ ಹುಣ್ಣಿಮೆ ವೇಳೆ ನಡೆಯುವ ಧಾರ್ಮಿಕ ಕಾರ್ಯಕ್ರಮದ ಭಾಗವಾಗಿ ಇಲ್ಲಿ ಪೂಜಾ ವಿಧಿ ವಿಧಾನ ನಡೆಯುತ್ತಿವೆ. ಇದೇ ಕಾರಣಕ್ಕೆ ಕೆಲವರು ದಾಳಿ ಮಾಡಿದ್ದಾರೆ ಎಂದು ಗೊತ್ತಾಗಿದೆ.

ಹೊಸದಾಗಿ 7 ಬೆಳೆ ಸೇರ್ಪಡೆ; ಪರಿಹಾರ ನಿಗದಿ

ಕಾಡುಪ್ರಾಣಿ ದಾಳಿ: ಬೆಳೆ ನಾಶದ ಪರಿಹಾರ ಹೆಚ್ಚಳ

● ಬಿ.ಜೆ. ಧನ್ಯಪ್ರಸಾದ್

ಪ್ರಜಾವಾಣಿ ವಿಶೇಷ

ಚಿಕ್ಕಮಗಳೂರು: ವನ್ಯಜೀವಿಗಳಿಂದ ಉಂಟಾಗುವ ಬೆಳೆ ನಾಶ ಪ್ರಕರಣಗಳಿಗೆ ನೀಡುವ ಪರಿಹಾರವನ್ನು ಈಗಿರುವ ಮೊತ್ತದ ದುಪ್ಪಟ್ಟಿಗೆ ಹೆಚ್ಚಿಸಲಾಗಿದೆ.

ಅರಣ್ಯ ಮತ್ತು ಪರಿಸರ ಇಲಾಖೆ ಇದೇ 18ರಂದು ಆದೇಶ ಹೊರಡಿಸಿದೆ. ಬೆಳೆ ಪಟ್ಟಿಗೆ ಹೊಸದಾಗಿ ಮಾವು, ಸಪೋಟ, ಸೀಬೆ, ಹಲಸು, ದಾಳಿಂಬೆ, ಸೀತಾಫಲ, ಹಿಪ್ಪುನೇರಳೆಯನ್ನು ಸೇರಿಸಲಾಗಿದೆ.

ಪಟ್ಟಿಯಲ್ಲಿ ಭತ್ತ, ಜೋಳ, ವಿವಿಧ ತರಕಾರಿ, ಕಾಫಿ, ಕಿತ್ತಳೆ, ತೆಂಗು, ಅಡಿಕೆ, ಬಾಳೆ, ಸೇವಂತಿ ಸಹಿತ ಒಟ್ಟು 64 ಬೆಳೆಗಳು ಇವೆ. ಭತ್ತದ ಪರಿಹಾರ ಮೊತ್ತ ಕ್ವಿಂಟಲ್ ₹ 1,320 ಇದ್ದದ್ದು ₹ 2,640ಕ್ಕೆ ಹೆಚ್ಚಳವಾಗಿದೆ.

ಮಾವು 5 ವರ್ಷಕ್ಕಿಂತ ಕಡಿಮೆಯ ಗಿಡಕ್ಕೆ ₹ 750, 6ರಿಂದ 10 ವರ್ಷವರೆಗಿನ ಗಿಡಕ್ಕೆ ₹ 1,200 ಹಾಗೂ 10 ವರ್ಷ ದಾಟಿದ ಮರಕ್ಕೆ ₹ 1,800, ಸಪೋಟ 5 ವರ್ಷಕ್ಕಿಂತ ಕಡಿಮೆಯ ಗಿಡಕ್ಕೆ ₹ 500 ಹಾಗೂ 5 ವರ್ಷ ದಾಟಿದ ಮರಕ್ಕೆ ₹ 800, ಸೀಬೆ 5 ವರ್ಷಕ್ಕಿಂತ ಕಡಿಮೆಯ ಗಿಡಕ್ಕೆ ₹ 350 ಮತ್ತು 5 ವರ್ಷ ದಾಟಿದ ಮರಕ್ಕೆ ₹ 600, ಹಲಸು– 5 ವರ್ಷಕ್ಕಿಂತ ಕಡಿಮೆಯ ಗಿಡಕ್ಕೆ ₹ 350 ಹಾಗೂ 5 ವರ್ಷ ದಾಟಿದ ಮರಕ್ಕೆ ₹ 800 ನಿಗದಿಪಡಿಸಲಾಗಿದೆ. ದಾಳಿಂಬೆ ಗಿಡಕ್ಕೆ ₹ 300, ಸೀತಾಫಲ ₹ 250 ಹಾಗೂ ಹಿಪ್ಪುನೇರಳೆ ಗುಂಟೆಗೆ ₹ 100 ನಿಗದಿಪಡಿಸಲಾಗಿದೆ.

ಕಾಫಿ: ಅರೇಬಿಕಾ ಗಿಡಕ್ಕೆ (1ರಿಂದ 4 ವರ್ಷ) ₹ 600 ಹಾಗೂ ನಾಲ್ಕು ವರ್ಷ ದಾಟಿದ ಗಿಡಕ್ಕೆ ₹ 1,200 ಹಾಗೂ ರೊಬೊಸ್ಟಾ ಗಿಡಕ್ಕೆ ₹1,500 (1ರಿಂದ 6 ವರ್ಷ) ಹಾಗೂ 6 ವರ್ಷ ದಾಟಿದ ಗಿಡಕ್ಕೆ ₹ 3 ಸಾವಿರಕ್ಕೆ ಪರಿಷ್ಕರಿಸಲಾಗಿದೆ.

ಒತ್ತುವರಿ ಮಾಡಿದ ಅರಣ್ಯ ಪ್ರದೇಶದಲ್ಲಿ ಬೆಳೆದ ಪೈರಿನ ಹಾನಿಗೆ ಪರಿಹಾರ ಲಭಿಸಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

> **ಕಾಡು ಪ್ರಾಣಿಗಳಿಂದ ಬೆಳೆ ಹಾನಿಗೆ ನೀಡುವ ಪರಿಹಾರ ಮೊತ್ತವನ್ನು ಸರ್ಕಾರ ಹೆಚ್ಚಿಸಿ ರೈತರಿಗೆ ಅನುಕೂಲ ಕಲ್ಪಿಸಿದೆ**
> **ಎನ್.ಇ.ಕ್ರಾಂತಿ**
> ಡಿಎಫ್‌ಒ ಚಿಕ್ಕಮಗಳೂರು

> **ಬೆಳೆ ಹಾನಿ ಪರಿಹಾರ ದುಪ್ಪಟ್ಟು ಮಾಡಿದೆ. ವೈಜ್ಞಾನಿಕವಾಗಿ ಪರಿಹಾರ ಧನವನ್ನು ನಿಗದಿಪಡಿಸಿಲ್ಲ. ಇನ್ನೂ ಹೆಚ್ಚಳ ಮಾಡಬೇಕಿತ್ತು.**
> **ಎಚ್.ಟಿ.ಮೋಹನಕುಮಾರ್,**
> ಕರ್ನಾಟಕ ಬೆಳೆಗಾರರ ಒಕ್ಕೂಟದ ಅಧ್ಯಕ್ಷ

ಆರೋಗ್ಯ ಸೇವೆಗೆ ಅಲೆದಾಟ

ಒಂದನೇ ಪುಟದಿಂದ...

ಯಶಸ್ವಿನಿ ಯೋಜನೆಯಡಿ ಸದಸ್ಯತ್ವ ನೋಂದಣಿ ನಡೆಯುತ್ತಿದೆ. ಗ್ರಾಮೀಣ ಸಹಕಾರ ಸಂಘಗಳ, ಸ್ವ ಸಹಾಯ ಗುಂಪುಗಳ ಗರಿಷ್ಠ ನಾಲ್ವರು ಸದಸ್ಯರ ಕುಟುಂಬ ವಾರ್ಷಿಕ ₹ 500 ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರಿದ್ದರೆ ಹೆಚ್ಚುವರಿ ಸದಸ್ಯರಿಗೆ ತಲಾ ₹ 100 ಪಾವತಿಸಬೇಕು. ನಗರ ಸಹಕಾರ ಸಂಘಗಳ ಗರಿಷ್ಠ ನಾಲ್ವರು ಸದಸ್ಯರ ಕುಟುಂಬಕ್ಕೆ ವಾರ್ಷಿಕ ₹ 1,000, ಹೆಚ್ಚುವರಿ ಸದಸ್ಯರಿಗೆ ತಲಾ ₹ 200 ಪಾವತಿಸಬೇಕು. ಈ ಹಿಂದೆ ಯೋಜನೆಯಡಿ ಗ್ರಾಮೀಣ ಭಾಗದಲ್ಲಿ ಒಬ್ಬ ಸದಸ್ಯನಿಗೆ ₹ 250, ನಗರ ಭಾಗದಲ್ಲಿ ಒಬ್ಬ ಸದಸ್ಯನಿಗೆ ₹ 750 ವಂತಿಗೆ ನಿಗದಿ ಮಾಡಲಾಗಿತ್ತು. ವಂತಿಗೆ ದರವನ್ನು ಪರಿಷ್ಕರಿಸಿರುವ ಸರ್ಕಾರ, 2010ರಲ್ಲಿ ಯಶಸ್ವಿನಿ ಟ್ರಸ್ಟ್ ನಿಗದಿಪಡಿಸಿದ್ದ ಪ್ಯಾಕೇಜ್ ದರದಲ್ಲಿಯೇ ಯೋಜನೆಯನ್ನು ಮರುಪ್ರಾರಂಭ ಮಾಡಿದೆ.

ಅಂಡವಾಯು (ಹರ್ನಿಯಾ) ಶಸ್ತ್ರಚಿಕಿತ್ಸೆ ಸೇರಿ ಕೆಲ ಶಸ್ತ್ರಚಿಕಿತ್ಸೆಗಳಿಗೆ ಖಾಸಗಿ ಆಸ್ಪತ್ರೆಗಳಿಗೆ ₹ 10 ಸಾವಿರ ನಿಗದಿ ಮಾಡಲಾಗಿದೆ. ಇಷ್ಟು ಮೊತ್ತದಲ್ಲಿ ಶಸ್ತ್ರಚಿಕಿತ್ಸೆ ಅಸಾಧ್ಯವೆಂದು ಅಸಮಾಧಾನ ವ್ಯಕ್ತಪಡಿಸಿರುವ ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರು, 'ಸರ್ಕಾರವೇ ಅರಿವಳಿಕೆ ತಜ್ಞರಿಗೆ ₹ 2,500 ನಿಗದಿ ಮಾಡಿದೆ. ಉಳಿದ ₹ 7,500ರಲ್ಲಿ ಒ.ಟಿ ಶುಲ್ಕ, ಸಿಬ್ಬಂದಿ ವೇತನ, ಹಾಸಿಗೆ ಶುಲ್ಕ, ಔಷಧ, ಪ್ರಯೋಗಾಲಯ ವೆಚ್ಚ, ಶಸ್ತ್ರಚಿಕಿತ್ಸಕರ ಸೇವಾ ಶುಲ್ಕವನ್ನು ಹೇಗೆ ಸರಿದೂಗಿಸುವುದು' ಎಂದು ಪ್ರಶ್ನಿಸುತ್ತಾರೆ.

ಆರೋಗ್ಯ ಯೋಜನೆಗಳಡಿ ದರ ನಿಗದಿ ಮಾಡುವಾಗ ಸರ್ಕಾರ ಕರ್ನಾಟಕ ಖಾಸಗಿ ವೈದ್ಯರ ಸಂಘ, ಭಾರತೀಯ ವೈದ್ಯಕೀಯ ಸಂಘ ಸೇರಿ ವಿವಿಧ ವೈದ್ಯಕೀಯ ಸಂಘ–ಸಂಸ್ಥೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂಬ ಆರೋಪವೂ ವೈದ್ಯಕೀಯ ವಲಯದಲ್ಲಿದೆ.

ಖಾಸಗಿ ಆಸ್ಪತ್ರೆಗಳ ನಿರಾಸಕ್ತಿ: ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿ ರಾಜ್ಯದಲ್ಲಿ 3,482 ಆಸ್ಪತ್ರೆಗಳು ವೈದ್ಯಕೀಯ ಸೇವೆ ನೀಡುತ್ತಿವೆ. ಇವುಗಳಲ್ಲಿ 2 ಸಾವಿರಕ್ಕೂ ಅಧಿಕ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳೇ ಆಗಿವೆ. ಯೋಜನೆಯಡಿ 575 ಖಾಸಗಿ ಆಸ್ಪತ್ರೆಗಳು ಮಾತ್ರ ನೋಂದಾಯಿಸಲ್ಪಟ್ಟಿವೆ. ಈ ಆಸ್ಪತ್ರೆಗಳು ಕೂಡ ಹೃದಯ, ಮೂತ್ರಪಿಂಡ, ಯಕೃತ್ತು ಸೇರಿ ವಿವಿಧ ಅಂಗಾಂಗಗಳ ಸಮಸ್ಯೆಗಳಿಗೆ ಸಂಬಂಧಿಸಿದ ನಿರ್ದಿಷ್ಟ ಚಿಕಿತ್ಸೆಗಳಿಗೆ ನೋಂದಾಯಿಸಲ್ಪಟ್ಟಿವೆ. ಇದರಿಂದಾಗಿ ಯೋಜನೆಯಡಿ ನೋಂದಾಯಿಸಲ್ಪಟ್ಟಿದ್ದರೂ ಆಸ್ಪತ್ರೆಗಳಲ್ಲಿ ಎಲ್ಲ ಚಿಕಿತ್ಸೆಗಳು ಯೋಜನೆಯಡಿ ದೊರೆಯುತ್ತಿಲ್ಲ. ಶಿಫಾರಸು ಆಧಾರದಲ್ಲಿ ದಾಖಲಾದರೂ ಆಸ್ಪತ್ರೆಯು ನಿಗದಿತ ಕಾಯಿಲೆಯ ಚಿಕಿತ್ಸೆಗೆ ನೋಂದಾಯಿಸದಿದ್ದರೆ ರೋಗಿಯೇ ಹಣ ಪಾವತಿಸಬೇಕಾಗುತ್ತದೆ. ಇದು ಗೊಂದಲಕ್ಕೆ ಎಡೆ ಮಾಡಿಕೊಡುತ್ತಿದೆ.

'ಸರ್ಕಾರ ನಿಗದಿಪಡಿಸಿದ ದರ ಹಾಗೂ ನಾವು ಸದ್ಯ ಚಿಕಿತ್ಸೆ ಒದಗಿಸುತ್ತಿರುವ ದರದಲ್ಲಿ ಭಾರೀ ವ್ಯತ್ಯಾಸವಿದೆ. ಶೇ 60 ರಿಂದ ಶೇ 70 ರಷ್ಟು ಮೊತ್ತವನ್ನು ನಿಗದಿಪಡಿಸಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಆಸ್ಪತ್ರೆಗಳು ನೋಂದಾಯಿಸಲ್ಪಡುತ್ತಿದ್ದವು. ಪ್ಯಾಕೇಜ್ ದರವನ್ನು ಪರಿಷ್ಕರಿಸಬೇಕು. ಹಾಲಿ ಪ್ಯಾಕೇಜ್ ಮೊತ್ತದ ಪಾವತಿಯೂ ವಿಳಂಬ ಆಗುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸುತ್ತಾರೆ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ನಿಕಟಪೂರ್ವ ಅಧ್ಯಕ್ಷ ಡಾ.ಎಚ್.ಎಂ. ಪ್ರಸನ್ನ.

ಇಡೀ ಕುಟುಂಬಕ್ಕೆ ₹ 5 ಲಕ್ಷ: ರಾಜ್ಯದಲ್ಲಿ 62.09 ಲಕ್ಷ ಕುಟುಂಬಗಳು 'ಆಯುಷ್ಮಾನ್ ಭಾರತ್' ಯೋಜನೆ ಅಡಿ ಬರಲಿವೆ. ಉಳಿದ ಕುಟುಂಬಗಳನ್ನು 'ಆರೋಗ್ಯ ಕರ್ನಾಟಕ' ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ. ಬಿಪಿಎಲ್ ಕುಟುಂಬದ ಸದಸ್ಯರಿಗೆ ಯೋಜನೆಯಡಿ ಸಂಕೀರ್ಣ ಚಿಕಿತ್ಸೆಗಳನ್ನೂ ಉಚಿತವಾಗಿ ಒದಗಿಸಲು ಅವಕಾಶವಿದೆ. ಎಪಿಎಲ್ ಕುಟುಂಬದ ಸದಸ್ಯರಿಗೆ ಗರಿಷ್ಠ ₹ 1.50 ಲಕ್ಷ ಚಿಕಿತ್ಸಾ ವೆಚ್ಚ ನಿಗದಿ ಮಾಡಿದ್ದು, ಶೇ 30 ರಷ್ಟು ಹಣವನ್ನು ಪಾವತಿಸಲಾಗುತ್ತದೆ. ಈ ವಿಮಾ ಮೊತ್ತ ಇಡೀ ಕುಟುಂಬಕ್ಕೆ ಒಳಪಡಲಿದೆ. ಕುಟುಂಬದ ವ್ಯಕ್ತಿಯೊಬ್ಬರ ಚಿಕಿತ್ಸಾ ವೆಚ್ಚ ನಿಗದಿತ ಮೊತ್ತ ತಲುಪಿದಲ್ಲಿ, ಯೋಜನೆಯಡಿ ಕುಟುಂಬದ ಇನ್ನೊಬ್ಬ ಸದಸ್ಯ ಚಿಕಿತ್ಸೆ ಪಡೆದುಕೊಳ್ಳಲು ಅವಕಾಶ ಇರುವುದಿಲ್ಲ. ಆದ್ದರಿಂದ ಈ ನಿಯಮ ಸಡಿಲಿಸಬೇಕೆಂಬ ಆಗ್ರಹವೂ ಫಲಾನುಭವಿಗಳಲ್ಲಿದೆ.

ಕಿಮೋಥೆರಪಿ ಸೇರಿ ವಿವಿಧ ಚಿಕಿತ್ಸೆ ಪಡೆದುಕೊಳ್ಳುತ್ತಿರುವ ವ್ಯಕ್ತಿ, ಚಿಕಿತ್ಸಾ ಮೊತ್ತ ₹ 5 ಲಕ್ಷ ದಾಟಿದರೆ ಇನ್ನುಳಿದ ವೆಚ್ಚವನ್ನು ಆತನೇ ಭರಿಸಬೇಕಾಗುತ್ತದೆ.

ತೃತೀಯ ಹಂತದ ಚಿಕಿತ್ಸೆ ಸವಾಲು: ದ್ವಿತೀಯ ಹಂತದ ಕ್ಲಿಷ್ಟಕರ ಚಿಕಿತ್ಸೆಗಳು ಮತ್ತು ತೃತೀಯ ಹಂತದ ಚಿಕಿತ್ಸೆಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ವ್ಯವಸ್ಥೆ ಇರದಿದ್ದರೆ ಮಾತ್ರ ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸು ಮಾಡಬೇಕೆಂಬ ನಿಯಮವಿದೆ.

ಈ ಹಂತದ ಚಿಕಿತ್ಸೆಗಳಿಗೆ ಯೋಜನೆ ಪ್ರಾರಂಭವಾದಾಗಿನಿಂದ ಕಳೆದ ವರ್ಷದ ಅಂತ್ಯಕ್ಕೆ ಕ್ರಮವಾಗಿ 3.10 ಲಕ್ಷ ಹಾಗೂ 6.24 ಲಕ್ಷ ಮಂದಿ ಮಾತ್ರ ಆರೋಗ್ಯ ಸೇವೆಗಳನ್ನು ಪಡೆದುಕೊಂಡಿದ್ದಾರೆ. ತಜ್ಞ ವೈದ್ಯರು, ಹಾಸಿಗೆ ಹಾಗೂ ಮೂಲಸೌಕರ್ಯದ ಕೊರತೆಯಿಂದ ಸರ್ಕಾರಿ ಸಂಸ್ಥೆಗಳಲ್ಲಿ ಸಂಕೀರ್ಣ ಶಸ್ತ್ರಚಿಕಿತ್ಸೆಗಳಿಗೆ ರೋಗಿಗಳು ಕಾಯಬೇಕಾದ ಪರಿಸ್ಥಿತಿಯಿದೆ.

'ತಜ್ಞ ವೈದ್ಯರು ಹಾಗೂ ಮೂಲಸೌಕರ್ಯದ ಕೊರತೆಯಿಂದ ಆರೋಗ್ಯ ಯೋಜನೆಗಳಡಿ ಸಂಕೀರ್ಣ ಹಾಗೂ ದುಬಾರಿ ವೆಚ್ಚದ ಚಿಕಿತ್ಸೆಗಳನ್ನು ರೋಗಿಗಳಿಗೆ ಒದಗಿಸುವುದು ಸವಾಲಾಗಿದೆ. ಸದ್ಯ ಜಾರಿಯಲ್ಲಿರುವ ವೈದ್ಯಕೀಯ ಕಾಯ್ದೆಗಳೂ ಚಿಕಿತ್ಸೆಗೆ ತೊಡಕಾಗಿವೆ. ತೃತೀಯ ಹಂತದ ಕಾಯಿಲೆಗಳಿಗೆ ದುಬಾರಿ ಚಿಕಿತ್ಸೆ ಒದಗಿಸಲು ಕೆಲವು ಅಡೆತಡೆಗಳಿವೆ' ಎಂದು ಬೆಂಗಳೂರಿನ ಸರ್ಕಾರಿ ವೈದ್ಯಕೀಯ ಸಂಸ್ಥೆಯೊಂದರ ಮುಖ್ಯಸ್ಥರು ಹೇಳುತ್ತಾರೆ.

ಪೂರಕ ಮಾಹಿತಿ: ಮನೋಜಕುಮಾರ್ ಗುದ್ದಿ



'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯಡಿ ಚಿಕಿತ್ಸೆಗೆ ಕಲಬುರಗಿಯ ಜಿಲ್ಲಾ ಆಸ್ಪತ್ರೆಯಲ್ಲಿ ಫಲಾನುಭವಿಗಳು ದಾಖಲಾತಿಗಳೊಂದಿಗೆ ಸರದಿಯಲ್ಲಿ ಕಾಯುತ್ತಿರುವುದು –ಪ್ರಜಾವಾಣಿ ಚಿತ್ರ

ಎಬಿ–ಎಆರ್‌ಕೆ ಯೋಜನೆಯಡಿ ಬರುವ ಆಸ್ಪತ್ರೆಗಳು

24 ಜಿಲ್ಲಾ ಆಸ್ಪತ್ರೆಗಳು	20 ವೈದ್ಯಕೀಯ ಕಾಲೇಜು ಆಸ್ಪತ್ರೆಗಳು	16 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು	148 ತಾಲ್ಲೂಕು ಆಸ್ಪತ್ರೆಗಳು	211 ಸಮುದಾಯ ಆರೋಗ್ಯ ಕೇಂದ್ರಗಳು	2,440 ಪ್ರಾಥಮಿಕ ಆರೋಗ್ಯ ಕೇಂದ್ರಗಳು	44 ಹೆರಿಗೆ ಆಸ್ಪತ್ರೆಗಳು	575 ಖಾಸಗಿ ಆಸ್ಪತ್ರೆಗಳು

ಎಬಿ–ಎಆರ್‌ಕೆಯಡಿ ವಿಧಾನವಾರು ಚಿಕಿತ್ಸೆ

ಚಿಕಿತ್ಸೆ	ವಿಧಾನ	ಚಿಕಿತ್ಸೆ ಪಡೆದವರು
ಸಾಮಾನ್ಯ ಚಿಕಿತ್ಸೆ	40	8.91 ಲಕ್ಷ
ದ್ವಿತೀಯ ಹಂತದ ಚಿಕಿತ್ಸೆ	254	20.46 ಲಕ್ಷ
ಸಂಕೀರ್ಣ ದ್ವಿತೀಯ ಹಂತದ ಚಿಕಿತ್ಸೆ	251	3.10 ಲಕ್ಷ
ತೃತೀಯ ಹಂತದ ಚಿಕಿತ್ಸೆ	934	6.24 ಲಕ್ಷ
ತುರ್ತು ಚಿಕಿತ್ಸೆ	171	3.58 ಲಕ್ಷ

ಎಬಿ–ಎಆರ್‌ಕೆ ಯೋಜನೆಯಡಿ ಚಿಕಿತ್ಸೆಯ ವಿವರ

ವ್ಯವಸ್ಥೆ	2018-19	2019-20	2020-21	2021-22	2022-23 (ಕಳೆದ ವರ್ಷಾಂತ್ಯಕ್ಕೆ)
ಸರ್ಕಾರಿ	44,034	4.95 ಲಕ್ಷ	6.45 ಲಕ್ಷ	11.31 ಲಕ್ಷ	13.16 ಲಕ್ಷ
ಖಾಸಗಿ	24,337	1.01 ಲಕ್ಷ	1.83 ಲಕ್ಷ	1.85 ಲಕ್ಷ	1.07 ಲಕ್ಷ

ದಾಖಲೆಗಳ ಅಗತ್ಯವಿಲ್ಲ

ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯ ಫಲಾನುಭವಿಗಳು ಆರೋಗ್ಯ ಕಾರ್ಡ್ ಹೊಂದಿದ್ದಲ್ಲಿ ಚಿಕಿತ್ಸೆಗೆ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸುವ ಅಗತ್ಯವಿಲ್ಲ. ಈ ಕಾರ್ಡ್ ಹೊಂದಿರುವವರಿಗೆ ಪೂರಕ ದಾಖಲಾತಿ ಒದಗಿಸುವಂತೆ ಸೂಚಿಸಿದಲ್ಲಿ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ. ಆದರೂ, ಕೆಲವೆಡೆ ದಾಖಲೆಗಳು ಇಲ್ಲ ಎಂಬ ಕಾರಣಕ್ಕೆ ಚಿಕಿತ್ಸೆಗೆ ನಿರಾಕರಿಸಲಾಗುತ್ತಿದೆ. ಕಳೆದ ವರ್ಷ ಚನ್ನಪಟ್ಟಣದಲ್ಲಿ ಏಳು ತಿಂಗಳ ಹೆಣ್ಣು ಮಗುವಿಗೆ ಚಿಕಿತ್ಸೆ ಕೊಡಿಸಲು ಪಾಲಕರು ಹಲವು ಆಸ್ಪತ್ರೆಗಳಿಗೆ ಅಲೆದಿದ್ದರು. ಎಲ್ಲಿಯೂ ಚಿಕಿತ್ಸೆ ದೊರೆಯದೆ ಮಗು ಮೃತಪಟ್ಟಿತ್ತು. ಅದೇ ರೀತಿ, ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನಿರಾಕರಿಸಿದ್ದರಿಂದ ತಾಯಿ ಮತ್ತು ಅವಳಿ ಮಕ್ಕಳು ಮೃತಪಟ್ಟಿದ್ದರು.

'ಯಶಸ್ವಿನಿ' ಯೋಜನೆಯಡಿ ಫಲಾನುಭವಿ ನೋಂದಾಯಿತ ಆಸ್ಪತ್ರೆಗೆ ನೇರವಾಗಿ ತೆರಳಿ, ದಾಖಲಾಗಬಹುದು. ಎಬಿ–ಎಆರ್‌ಕೆ ಯೋಜನೆಯಡಿ ತುರ್ತು ಚಿಕಿತ್ಸೆ ವೇಳೆ ಈ ಅವಕಾಶ ನೀಡಲಾಗಿದೆ. ಆದರೆ, ತುರ್ತು ಸಂದರ್ಭದಲ್ಲಿ ನೇರವಾಗಿ ಬಂದವರನ್ನು ದಾಖಲಿಸಿ, ಯೋಜನೆಯಡಿ ಚಿಕಿತ್ಸೆ ಒದಗಿಸಲು ಖಾಸಗಿ ಆಸ್ಪತ್ರೆಗಳು ನಿರಾಕರಿಸುತ್ತಿವೆ. ರೋಗಿಯನ್ನು ಬೇರೊಂದು ಆಸ್ಪತ್ರೆಗೆ ಶಿಫಾರಸು ಮಾಡಲಾಗುತ್ತಿದೆ. ಇದರಿಂದಾಗಿ ಆರೋಗ್ಯ ಕಾರ್ಡ್ ಹೊಂದಿದ್ದರೂ ಸ್ವಂತ ವೆಚ್ಚದಲ್ಲಿಯೇ ಚಿಕಿತ್ಸೆ ಪಡೆಯುವ ಪರಿಸ್ಥಿತಿ ಇದೆ.

'ದರ ಪರಿಷ್ಕರಣೆ ಅನಿವಾರ್ಯ'



ಆರೋಗ್ಯ ಯೋಜನೆಗಳಿಗೆ ನಿಗದಿಪಡಿಸಿರುವುದು ಹಳೆಯ ದರವಾಗಿದೆ. ದರವನ್ನು ಪರಿಷ್ಕರಣೆ ಮಾಡಬೇಕು. ಶಸ್ತ್ರಚಿಕಿತ್ಸೆಗಳ ಸಲಕರಣೆ, ಔಷಧ ಸೇರಿ ವಿವಿಧ ವಸ್ತುಗಳ ದರ ಹೆಚ್ಚಳವಾಗಿದೆ. ಆಸ್ಪತ್ರೆಗಳ ನಿರ್ವಹಣೆ ವೆಚ್ಚವೂ ಅಧಿಕವಾಗಿದೆ. ಆದ್ದರಿಂದ ವೈಜ್ಞಾನಿಕವಾಗಿ ದರ ನಿಗದಿ ಮಾಡಬೇಕಾದ ಅಗತ್ಯವಿದೆ.

ಡಾ.ಸಿ.ಎನ್. ಮಂಜುನಾಥ್, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ

'ಸಂಕೀರ್ಣ ಶಸ್ತ್ರಚಿಕಿತ್ಸೆ ಕಷ್ಟ'



ಆರೋಗ್ಯ ಯೋಜನೆಗಳ ಚಿಕಿತ್ಸಾ ಪ್ಯಾಕೇಜ್ ದರ ಹೆಚ್ಚಿಸಬೇಕು. ಗರಿಷ್ಠ ಮಿತಿ 5 ಲಕ್ಷ ನಿಗದಿ ಮಾಡಿರುವುದರಿಂದ ಅತ್ಯಾಧುನಿಕ ತಂತ್ರಜ್ಞಾನಗಳ ನೆರವಿನಿಂದ ಸಂಕೀರ್ಣ ಶಸ್ತ್ರಚಿಕಿತ್ಸೆ ನಡೆಸುವುದು ಕಷ್ಟ. ಇತ್ತೀಚೆಗೆ ನಡೆದ 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯ ಸಾಧನೆ ಪರಿಶೀಲನೆ ಸಭೆಯಲ್ಲಿ ದರ ಪರಿಷ್ಕರಣೆ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಅದಕ್ಕೆ ಸ್ಪಂದನೆಯೂ ವ್ಯಕ್ತವಾಗಿತ್ತು. ಆರೋಗ್ಯ ಯೋಜನೆಗಳಡಿ ಸುಲಭವಾಗಿ ಚಿಕಿತ್ಸೆ ಒದಗಿಸಲು ವಿಮೆ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವುದು ಉತ್ತಮ.

ಡಾ.ಸಿ. ರಾಮಚಂದ್ರ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿಕಟಪೂರ್ವ ನಿರ್ದೇಶಕ

'ಇನ್ನಷ್ಟು ಚಿಕಿತ್ಸೆ ಸೇರ್ಪಡೆಗೊಳಿಸಲಿ'



ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿ ಮಕ್ಕಳಿಗೆ ಸಂಬಂಧಿಸಿದಂತೆ ಇನ್ನಷ್ಟು ಚಿಕಿತ್ಸಾ ವಿಧಾನವನ್ನು ಸೇರ್ಪಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೆಲ ಚಿಕಿತ್ಸೆಗಳ ದರ ಪರಿಷ್ಕರಣೆ ಪ್ರಕ್ರಿಯೆ ನಡೆಯುತ್ತಿದೆ. ಯೋಜನೆಯಡಿ ಯಾವೆಲ್ಲ ಖಾಸಗಿ ಆಸ್ಪತ್ರೆಗಳು ನೋಂದಾಯಿಸಲ್ಪಟ್ಟಿವೆ ಎಂಬ ಮಾಹಿತಿ ಜನರಿಗೆ ಇರುವುದಿಲ್ಲ. ಈ ಬಗ್ಗೆ ಮಾಹಿತಿ ಒದಗಿಸಿದರೆ ಉತ್ತಮ. ಸರ್ಕಾರಿ ವ್ಯವಸ್ಥೆಯಲ್ಲಿ ನಿಗದಿಪಡಿಸಲಾದ ಪ್ಯಾಕೇಜ್ ದರದಲ್ಲಿ ಚಿಕಿತ್ಸೆ ಸಾಧ್ಯವಾಗುತ್ತಿದೆ.

ಡಾ. ಸಂಜಯ್ ಕೆ.ಎಸ್., ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ

'ಸರ್ಕಾರಿ ಸಂಸ್ಥೆಗಳಿಗೆ ಸಮಸ್ಯೆಯಾಗದು'

ಮೂತ್ರಪಿಂಡಕ್ಕೆ ಸಂಬಂಧಿಸಿದ ಕಾಯಿಲೆಗಳಿಗೆ ಅಗತ್ಯ ಚಿಕಿತ್ಸೆಗಳನ್ನು ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿ ಒದಗಿಸಲಾಗುತ್ತಿದೆ. ಖಾಸಗಿ ಆಸ್ಪತ್ರೆಗಳು ತಮ್ಮಲ್ಲಿನ ಸೌಕರ್ಯದ ಅನುಸಾರ ದರವನ್ನು ಕೇಳುತ್ತಿವೆ. ಯೋಜನೆಯಿಂದಲೇ ಆಸ್ಪತ್ರೆ ನಡೆಸುತ್ತೇವೆ ಎನ್ನುವುದು ಸರಿಯಲ್ಲ. ಬಡವರಿಗೆ ಅನುಕೂಲ ಆಗಲಿ ಎಂಬ ಕಾರಣಕ್ಕೆ ಯೋಜನೆ ಪ್ರಾರಂಭಿಸಲಾಗಿದೆ.

ಡಾ.ಆರ್.ಕೇಶವಮೂರ್ತಿ, ನೆಫ್ರೋ–ಯುರಾಲಜಿ ಸಂಸ್ಥೆ ನಿರ್ದೇಶಕ

ಕೋವಿಡ್ ಚಿಕಿತ್ಸೆಗೆ ಅಲೆದಾಡಿದ್ದ ಸೋಂಕಿತರು

ರಾಜ್ಯದಲ್ಲಿ 2020ರ ಮಾರ್ಚ್‌ನಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಈ ಕಾಯಿಲೆ ಚಿಕಿತ್ಸೆಗೆ ದರ ನಿಗದಿಪಡಿಸಿ, ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಗೆ ಅಳವಡಿಸಲಾಯಿತು. ಯೋಜನೆಯಡಿ ಸರ್ಕಾರಿ ಆಸ್ಪತ್ರೆಗಳಲ್ಲಿ 2020–21ನೇ ಸಾಲಿನಲ್ಲಿ 66,185 ಮಂದಿ ಹಾಗೂ 2021–22ನೇ ಸಾಲಿನಲ್ಲಿ 82,916 ಮಂದಿಗೆ ಚಿಕಿತ್ಸೆ ನೀಡಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಶಿಫಾರಸು ಆಧಾರದಲ್ಲಿ ಕ್ರಮವಾಗಿ 75,064 ಹಾಗೂ 63,389 ಮಂದಿಗೆ ಚಿಕಿತ್ಸೆ ನೀಡಲಾಗಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ವೆಂಟಿಲೇಟರ್ ಸಂಪರ್ಕ ಹೊಂದಿದ ಹಾಗೂ ಐಸಿಯು ಹಾಸಿಗೆಗಳ ಕೊರತೆ, ವೈದ್ಯಕೀಯ ಆಮ್ಲಜನಕ ಸಮಸ್ಯೆಯಿಂದ ಕೋವಿಡ್ ಮೊದಲೆರಡು ಅಲೆಯಲ್ಲಿ ಸೋಂಕಿತರು ಚಿಕಿತ್ಸೆಗೆ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಿದ್ದರು. ಕೋವಿಡ್ ಮೊದಲ ಅಲೆಯಲ್ಲಿ 12 ಸಾವಿರಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದರು. ಎರಡನೇ ಅಲೆಯಲ್ಲಿ 25 ಸಾವಿರಕ್ಕೂ ಅಧಿಕ ಮಂದಿ ಮೃತಪಟ್ಟಿದ್ದರು.

ಎಬಿ–ಎಆರ್‌ಕೆ: ಶಿಫಾರಸು ಪ್ರಕ್ರಿಯೆ ಹೇಗೆ?

- ದಾಖಲಾದ ಸರ್ಕಾರಿ ಆಸ್ಪತ್ರೆಯ ತಜ್ಞ ವೈದ್ಯರು ರೋಗಿಯನ್ನು ತಪಾಸಣೆಗೆ ಒಳಪಡಿಸಿ, ರೋಗ ನಿರ್ಣಯ ಮಾಡುತ್ತಾರೆ. ಹೆಚ್ಚಿನ ವೈದ್ಯಕೀಯ ಸೌಲಭ್ಯ ಅಗತ್ಯವಿದ್ದು, ದಾಖಲಾದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಲಭ್ಯವಿರದಿದ್ದಲ್ಲಿ ಶಿಫಾರಸು ಮಾಡುತ್ತಾರೆ.
- ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಗುರುತಿನ ಸಂಖ್ಯೆ ಹಾಗೂ ಶಿಫಾರಸು ಮಾಹಿತಿಯನ್ನು ಯೋಜನೆಯ ಪೋರ್ಟಲ್‌ನಲ್ಲಿ ನಮೂದಿಸಲಾಗುತ್ತದೆ.
- ಶಿಫಾರಸು ಪ್ರಕ್ರಿಯೆಗೆ ಅನುಮೋದಿಸುವ ಅಥವಾ ತಿರಸ್ಕರಿಸುವ ಅಧಿಕಾರ ನೋಡಲ್ ಅಧಿಕಾರಿಗೆ ಇರಲಿದೆ.
- ನೋಡಲ್ ಅಧಿಕಾರಿಯಿಂದ ಅನುಮೋದನೆ ದೊರೆತಲ್ಲಿ ಶಿಫಾರಸು ಕಾರ್ಡ್ ದೊರೆಯಲಿದೆ.
- ಶಿಫಾರಸು ಕಾರ್ಡ್‌ನ್ನು ರೋಗಿಗೆ ಹಸ್ತಾಂತರಿಸಲಾಗುತ್ತದೆ.
- ಶಿಫಾರಸು ಕಾರ್ಡ್ ಹೊಂದಿದ ರೋಗಿ ಚಿಕಿತ್ಸೆಯ ಲಭ್ಯತೆಯನ್ನು ಖಚಿತಪಡಿಸಿಕೊಂಡು, ನೋಂದಾಯಿತ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗೆ ದಾಖಲಾಗಬಹುದಾಗಿದೆ.

ಆಸ್ಪತ್ರೆಗಳಿಗೆ ನೋಟಿಸ್

ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಸೇರಿ ವಿವಿಧ ಸರ್ಕಾರಿ ಯೋಜನೆಗಳಡಿ ಆಸ್ಪತ್ರೆಗಳು ಚಿಕಿತ್ಸೆಗೆ ನಿರಾಕರಿಸಿದಲ್ಲಿ ಕರ್ನಾಟಕ ಖಾಸಗಿ ಆಸ್ಪತ್ರೆಗಳ ನಿಯಂತ್ರಣ ಕಾಯ್ದೆಯಡಿ (ಕೆಪಿಎಂಇ) ಕಾನೂನು ಕ್ರಮಕ್ಕೆ ಅವಕಾಶವಿದೆ. ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯು ಹಲವು ಖಾಸಗಿ ಆಸ್ಪತ್ರೆಗಳಿಗೆ ನೋಟಿಸ್ ನೀಡಿದೆ. ಕೋವಿಡ್ ಚಿಕಿತ್ಸೆಗೆ ರೋಗಿಗಳಿಂದಲೂ ಹಣ ವಸೂಲಿ ನಡೆಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಇಲಾಖೆಯು 577 ಖಾಸಗಿ ಆಸ್ಪತ್ರೆಗಳಿಗೆ ನೋಟಿಸ್ ಜಾರಿ ಮಾಡಿತ್ತು. ದೂರು ನೀಡಿದ ಬಹುತೇಕರಿಗೆ ಆಸ್ಪತ್ರೆಯಿಂದಲೇ ಹಣವನ್ನು ಮರಳಿಸಲಾಗಿದೆ. ಕೋವಿಡೇತರ ಚಿಕಿತ್ಸೆಗೆ ಸಂಬಂಧಿಸಿದಂತೆ ಯೋಜನೆಯಡಿ ನೀಡಲಾದ ನೋಟಿಸ್ ಬಗ್ಗೆ ಇಲಾಖೆಯ ಬಳಿಯೂ ನಿಖರ ಮಾಹಿತಿಯಿಲ್ಲ.



ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 29-1-1998

● ರಾಜೀವ್ ಗಾಂಧಿ ಹತ್ಯೆ ಪ್ರಕರಣ: 26 ಆರೋಪಿಗಳಿಗೆ ಗಲ್ಲು

ಚೆನ್ನೈ, ಜ. 28– ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ವಿಚಾರಣೆಗೊಳಗಾದ ಎಲ್ಲಾ 26 ಜನರಿಗೆ ನಿಯೋಜಿತ ನ್ಯಾಯಾಲಯ ಮರಣದಂಡನೆಯನ್ನು ವಿಧಿಸಿದೆ.

ನ್ಯಾಯಮೂರ್ತಿ ವಿ. ನವನೀತಂ ಅವರು ಇಂದು ಬಿಗಿ ಭದ್ರತೆಯಲ್ಲಿ ಪೂನಮಲಿ ನ್ಯಾಯಾಲಯ ಸಮುಚ್ಚಯದಲ್ಲಿ ತೀರ್ಪನ್ನು ಪ್ರಕಟಿಸಿದರು.

ಆಪಾದಿತರೆಲ್ಲರಿಗೂ ನೇಣು ಹಾಕುವ ಮೂಲಕ ಮರಣದಂಡನೆ ಶಿಕ್ಷೆ ವಿಧಿಸಬೇಕೆಂದು ನ್ಯಾಯಮೂರ್ತಿ ಹೇಳಿದರೆಂದು ಸಿಬಿಐ ವಿಶೇಷ ಪ್ರಾಸಿಕ್ಯೂಟರ್ ಜಾಕಬ್ ಡೇನಿಯಲ್ ಅವರು ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 29-1-1973

● ಶೀಘ್ರದಲ್ಲೇ ತೆಲಂಗಾಣ– ಆಂಧ್ರ ಎಂ.ಪಿ.ಗಳ ಸಭೆ

ಹೈದರಾಬಾದ್, ಜ. 28– ಆಂಧ್ರ ವಿಭಾಗದ ಇಬ್ಬರು ಪ್ರತ್ಯೇಕವಾದಿ ಸಂಸತ್ ಸದಸ್ಯರು ಶನಿವಾರ ರಾತ್ರಿ ತೆಲಂಗಾಣ ನಾಯಕ ಡಾ. ಎಂ. ಚೆನ್ನಾರೆಡ್ಡಿ ಅವರನ್ನು ಭೇಟಿ ಮಾಡಿ ರಾಜ್ಯ ವಿಭಜನೆಗೆ ಸಂಬಂಧಿಸಿದಂತೆ ಚರ್ಚಿಸಲು ಆಂಧ್ರ ಮತ್ತು ತೆಲಂಗಾಣ ವಿಭಾಗಗಳ ಸಂಸತ್ ಸದಸ್ಯರ ಸಂಯುಕ್ತ ಸಭೆ ಏರ್ಪಡಿಸುವ ಬಗ್ಗೆ ಮಾತುಕತೆ ನಡೆಸಿದರೆಂದು ತಿಳಿದುಬಂದಿದೆ.

ಚೆನ್ನಾರೆಡ್ಡಿಯವರು ಅಧ್ಯಕ್ಷರಾಗಿರುವ ಪ್ರತ್ಯೇಕ ತೆಲಂಗಾಣ ಕಾಂಗ್ರೆಸ್ ವೇದಿಕೆ ಫೆಬ್ರುವರಿ 1ರಂದು ಸಭೆ ಸೇರಿ ಈ ಸಲಹೆಯನ್ನು ಚರ್ಚಿಸಲಿದೆಯೆಂದು ಗೊತ್ತಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಜನವರಿ 29, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ಅಷ್ಟಮಿ ಗಂ. 09-06 ನಕ್ಷತ್ರ: ಭರಣಿ ಗಂ. 20-21 ಯೋಗ: ಶುಭ ಗಂ. 11-04, ಕರಣ: ಬವ ಗಂ. 09-06, ಮಕರ ಮಾಸದ 15 ನೇ ದಿನ.
ರಾಹುಕಾಲ : ಸಾಯಂಕಾಲ 04-30 –06-00
ಸೂರ್ಯೋದಯ : 07-01 ಸೂರ್ಯಾಸ್ತ : 06-25
ಮುಸ್ಲಿಂ ದಿನಾಂಕ : 06 ರಜಬ್
ಅದೃಷ್ಟ ಸಂಖ್ಯೆ : 1, 3

ಮೇಷ: ಮನೆಯಲ್ಲಿ ಆನಂದದ ವಾತಾವರಣ ಉದಯವಾಗುತ್ತದೆ. ಹಣದ ವಿಚಾರದಲ್ಲಿ ಖರ್ಚು-ವೆಚ್ಚಗಳ ವಿಷಯದಲ್ಲಿ ಜಾಗ್ರತೆ ಇರಲಿ. ಮನೆಗೆ ಬಂಧುಗಳ ಆಗಮನ. ಬರಹಗಾರರಿಗೆ ಉತ್ತೇಜನದ ಕೊರತೆ ಕಾಣಲಿದೆ.

ವೃಷಭ: ಯಾವುದೇ ರೀತಿಯ ವಾದ ವಿವಾದ, ಅಸಮಾಧಾನ ನಿಮ್ಮ ಕಾರ್ಯಕ್ಕೆ ಅಡ್ಡಿಯಾಗದಂತೆ ಗಮನಹರಿಸಿ. ಸಮಾಜದಲ್ಲಿನ ನಿಮ್ಮ ಮುಂದಾಳತ್ವವನ್ನು ಜನರು ಮೆಚ್ಚಿ, ದೊಡ್ಡ ದೊಡ್ಡ ವಿಚಾರಗಳಿಗೆ ನಿಮ್ಮ ಸಲಹೆ ಕೇಳುವಂತಾಗಲಿದೆ.

ಮಿಥುನ: ಆಭರಣ ಮಾರಾಟಗಾರರಿಗೆ ಒದಗುವ ಅವಕಾಶಗಳ ಹೆಚ್ಚಳದಿಂದ ಕೆಲಸವಿರುವುದು. ಶತ್ರುಗಳ ಬಲೆಗೆ ಬೀಳದಂತೆ ಈ ದಿನ ನೀವು ಎಚ್ಚರವಹಿಸಬೇಕು. ಹೊಸದಾಗಿ ಹಣ ಹೂಡಿಕೆ ಮಾಡಬೇಕಾದರೆ ಪರಿಶೀಲನೆ ಅಗತ್ಯ.

ಕರ್ಕಾಟಕ: ಕುಟುಂಬ ವರ್ಗದಲ್ಲಿ ನಿಮ್ಮ ನಿರ್ಣಯಗಳಿಗೆ ಸಕಾರಾತ್ಮಕ ಬೆಂಬಲ ದೊರೆಯಲಿದೆ. ಸಜ್ಜನರ ಒಡನಾಟದಿಂದ ಮನಸ್ಸಿಗೆ ನೆಮ್ಮದಿ ಇರುವುದು. ಪಾಲುದಾರರೊಂದಿಗೆ ಸೇರಿ ಮಾಡುವ ಕೆಲಸದಿಂದ ಯಶಸ್ಸು ಸಿಗುತ್ತದೆ.

ಸಿಂಹ: ವ್ಯಾಪಾರ ವ್ಯವಹಾರದಲ್ಲಿ ನಿರೀಕ್ಷಿಸಿದ ಲಾಭ ಪಡೆಯಲು ಪರಿಶ್ರಮದ ಜೊತೆ ಬುದ್ಧಿವಂತಿಕೆಯೂ ಬಹುಮುಖ್ಯವೆಂದು ತಿಳಿಯುವುದು. ಉದ್ಯಮಿ ಹಾಗೂ ಅಧಿಕಾರಿಗಳಿಗೆ ಎಲ್ಲವೂ ಅವರ ನಿಯಂತ್ರಣದಲ್ಲಿ ಇರುವುದು.

ಕನ್ಯಾ: ಕೆಲಸ ಕಾರ್ಯಗಳಲ್ಲಿ ಕಷ್ಟ-ನಷ್ಟಗಳು ಎದುರಾಗಬಹುದು, ಕರ್ತವ್ಯವನ್ನು ನಿರ್ಲಕ್ಷಿಸಬೇಡಿ. ಹಿಮ್ಮುಖ ಚಲನೆ ಸರಿಯಲ್ಲ. ಸಹೋದ್ಯೋಗಿಗಳು ಸಹಕಾರ ನೀಡಿದರೂ ಸ್ವಾರ್ಥ ಮನೋಭಾವ ಹೊಂದಿರುತ್ತಾರೆ.

ತುಲಾ: ಮಹಿಳೆಯರಿಗೆ ತಮ್ಮ ತವರು ಮನೆಯಲ್ಲಿ ನಡೆದ ದುರ್ಘಟನೆ ಭಾವುಕರನ್ನಾಗಿ ಮಾಡಲಿದೆ. ಅವಿವೇಕಿಗಳೊಂದಿಗೆ ವಾದಿಸಲು ಹೋಗಬೇಡಿ. ಯಾರೋ ಮಾಡಿದ ತಪ್ಪಿಗೆ ನೀವು ಹೆಗಲುಕೊಡಬೇಕಾಗಬಹುದು.

ವೃಶ್ಚಿಕ: ವೃತ್ತಿ ಜೀವನಕ್ಕೆ ಸಂಬಂಧಿಸಿದ ಗುರಿಗಳನ್ನು ಈಡೇರಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಆರಂಭಿಸಿರುವ ಕೆಲಸವು ಬೆಳವಣಿಗೆಯ ಹಾದಿಯಲ್ಲಿರುತ್ತದೆ. ಕುಟುಂಬದ ಆರೋಗ್ಯ ಉತ್ತಮವಾಗಿ ಇರುವುದು.

ಧನು: ಧನಾಗಮನಕ್ಕೆ ಹಲವು ರೀತಿಯ ಅವಕಾಶಗಳು ಇದ್ದರೂ, ನಿಮ್ಮ ಕಠಿಣ ಪರಿಶ್ರಮ ಮತ್ತು ಬುದ್ಧಿವಂತಿಕೆ, ಆತ್ಮವಿಶ್ವಾಸ ಕೂಡ ಅಷ್ಟೇ ಅಗತ್ಯವಿರುತ್ತದೆ. ರಾಜಕೀಯ ವ್ಯಕ್ತಿಗಳಿಗೆ ದುರಹಂಕಾರಿ ಎನ್ನುವ ಪಟ್ಟ ಸಿಗುವ ಲಕ್ಷಣಗಳಿವೆ.

ಮಕರ: ವೈದ್ಯರ ಸಲಹೆಯಂತೆ ಉತ್ತಮ ಆರೋಗ್ಯಕ್ಕಾಗಿ ಆಹಾರ ಸೇವನೆಯಲ್ಲಿ ಕೆಲವು ನಿರ್ಬಂಧಗಳನ್ನು, ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಬಹುದು. ಸ್ವಂತ ಉದ್ಯೋಗ ಮಾಡುವವರು ಪ್ರಗತಿ ಕಾಣಲಿದ್ದೀರಿ.

ಕುಂಭ: ನಿಮ್ಮ ಯೋಜಿತ ಕೆಲಸಗಳು ವಿಳಂಬವಾಗಬಹುದು. ಸ್ತ್ರೀಯರಿಗೆ ಉದ್ಯೋಗದಲ್ಲಿ ಅಭಿವೃದ್ಧಿ. ಸಾಲದ ರೂಪದಲ್ಲಿ ಸ್ನೇಹಿತರಿಗೆ ನೀಡಿದ ನಿಮ್ಮ ಹಣವು ಇನ್ನೊಬ್ಬ ಸ್ನೇಹಿತನ ನೆರವಿನಿಂದ ನಿಮಗೆ ಹಿಂದಿರುಗಲಿದೆ.

ಮೀನ: ಈ ದಿನದ ಸಕ್ರಿಯತೆ ಹಾಗೂ ಕಾರ್ಯಮಗ್ನತೆಯಿಂದ ಯೋಜನೆಗಳು ಮುಕ್ತಾಯ ಹಂತಕ್ಕೆ ತಲುಪುವುವು. ರಿಯಲ್ ಎಸ್ಟೇಟ್ ಏಜೆಂಟ್‌ಗಳಿಗೆ ಹೆಚ್ಚಿನ ಲಾಭ ಇರಲಿದೆ. ಓದಿನಲ್ಲಿ ಅತೀವ ಆಸಕ್ತಿ ಇರುವುದು.

ಪದಬಂಧ 5214

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈತ ಆಜ್ಞೆ ಮಾಡುವವನು (4)
3.ಜರೂರಾಗಿ ಮಾಡಿರುವ ಪಂಚನಾಮೆ (4)
5.ಇದು ತುಂಬಾ ಹೊಸತು (3)
6.ಪುಷ್ಪದ ಮೇಲೆ ಬಿದ್ದಿರುವ ಸೂರ್ಯನ ಕಾವು (4)
8.ನಂಜಿನಿಂದ ಕೂಡಿರುವ ಸಂಗತಿ (3)
10.ಕೇಳಲು ಇಂಪಾಗಿರುವುದು (3)
12.ದ್ರವರೂಪದ ಲೋಹ (4)
15.ಒಳ್ಳೆಯ ವಂಶ (3)
16.ತನ್ನ ಬಗೆಗೆ ಇರುವ ಗೌರವ (4)
17.ಕನ್ನಡಿಗನ ಚಾಳೀಸು (4)

ಮೇಲಿಂದ ಕೆಳಕ್ಕೆ

1. ಪುಷ್ಪಗಳನ್ನಿಡುವ ಕರಂಡಕವು ಉಲ್ಟಾ ಆಗಿಬಿಟ್ಟಿದೆ (3)
2.ನಕಲು ನೋಡಿ ಈ ರೀತಿ ಕೋಪಗೊಳ್ಳು (3)
3.ಮನದಿಂದ ಮಾಡಿಕೊಂಡ ಅರಿಕೆ (3)
4.ರುಜುವಾತು ಪಡಿಸುವಾಗ ಹಾಕಿದ ಸಹಿ (2)
7.ಹೀಗೆ ಕಷ್ಟದ ಅನುಭವ ಮಾಡಿಸು (5)
9.ನರಕಾಧಿಪತಿಯ ಸೇವಕನಿವನು (5)
11.ವ್ಯವಸಾಯಗಾರನ ಅಳಲು (3)
12.ಕಾಪಾಡುವವನು ಇಲ್ಲಿದ್ದಾನೆ (3)
13.ಈತ ಸರಿಸಮಾನನಾದವನು (3)
14.ದೀರ್ಘವಲ್ಲದ ಅಕ್ಷರ ಕೊನೆಗೆ ದೀರ್ಘವಾಗಿದೆ! (2)

1			2	■	3			4
	■	■	5			■	■	
6	7			■	8		9	■
■		■	■	■	■	■		■
■		■	■	■	■	■		■
■		■	■	■	■	■		■
■	10		11	■	12			13
14	■	■	15			■	■	
16				■	17			

5213ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಲ್ಪನೆ 3.ಪ್ರಧಾನ
5.ನರಭಕ್ಷಕ 6.ಲಿಪಿ
8.ಸಂತ 9.ತೂತು
10.ಕತೋ 11.ನಾರಿ
12.ಷರಾ 16.ಧರ್ಮಬಾಹಿರ
17.ಕುಗ್ರಾಮ 18.ಸತ್ಕಾರ

ಮೇಲಿಂದ ಕೆಳಕ್ಕೆ:
1.ಕಡುಗಲಿ 2.ನೆನಪು
3.ಪ್ರಕಟ 4.ನವಜಾತ
7.ಪಿತೂರಿ 8.ಸಂತೋಷ
11.ನಾಮಹಾಕು 13.ರಾಯಭಾರ
14.ಅಧಮ 15.ಅರಸ

ಸುಡೊಕು 5600

	4		2		9	6		1
		1		8		2	7	
	7		1		4			8
		4				1		
2	8		6	9	1			
		7					6	5
	5			1				7
	1	6	8		2	5		
4	2			5				6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5599 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗುಂಡಿನ ದಾಳಿ: ಏಳು ಸಾವು

ಜೆರುಸಲೇಂ (ಪಿಟಿಐ): ಜೆರುಸಲೇಂ ನೆವೆ ಯಾಕೊವ್‌ನಲ್ಲಿ ಪ್ರಾರ್ಥನಾ ಸ್ಥಳದ ಬಳಿ ಶುಕ್ರವಾರ ಬಂದೂಕುಧಾರಿ ನಡೆಸಿದ ಗುಂಡಿನ ದಾಳಿಯಲ್ಲಿ ಏಳು ಮಂದಿ ಮೃತಪಟ್ಟಿದ್ದು, ಮೂವರು ಗಾಯಗೊಂಡರು.

21 ವರ್ಷದ ಬಂದೂಕುದಾರಿ, ಕಾರಿನಲ್ಲಿ ಬಂದಿದ್ದು ಕೃತ್ಯ ಎಸಗಿದ್ದಾನೆ. ಪೊಲೀಸರು ಪ್ರತಿಯಾಗಿ ಗುಂಡು ಹಾರಿಸಿ ಆತನನ್ನು ಹತ್ಯೆ ಮಾಡಿದ್ದು, ದಾಳಿಗೆ ಬಳಸಿದ್ದ ಗನ್ ವಶಪಡಿಸಿಕೊಂಡಿದ್ದಾರೆ. 'ಗಂಭೀರ ಸ್ವರೂಪದ ದಾಳಿ ಇದಾಗಿದೆ. ಸಚಿವ ಸಂಪುಟದ ತುರ್ತು ಸಭೆ ಕರೆದಿದ್ದು, ಪರಿಹಾರಕ್ರಮ ಕೈಗೊಳ್ಳಲಾಗುವುದು' ಎಂದು ಇಸ್ರೇಲ್‌ನ ಪ್ರಧಾನಿ ಬೆಂಜಮಿನ್ ನೇತನ್ಯಾಹು ತಿಳಿಸಿದ್ದಾರೆ.

ಇಸ್ರೇಲ್‌ಗೆ ನೆರವು, ಬೈಡನ್ ಭರವಸೆ

ವಾಷಿಂಗ್ಟನ್ (ಪಿಟಿಐ): ಜೆರುಸಲೇಂನಲ್ಲಿ ನಡೆದ ದಾಳಿಯನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಖಂಡಿಸಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರ ಜೊತೆಗೆ ಚರ್ಚಿಸಿರುವ ಬೈಡನ್, 'ಇದು, ನಾಗರಿಕ ಸಮಾಜದ ಮೇಲಿನ ದಾಳಿ. ಇಸ್ರೇಲ್ ಸರ್ಕಾರ ಮತ್ತು ಜನರ ಜೊತೆಗೆ ಅಮೆರಿಕ ಇರಲಿದೆ' ಎಂದು ಹೇಳಿದರು.

ಉಕ್ರೇನ್‌ಗೆ ಯುದ್ಧ ವಿಮಾನ, ಕ್ಷಿಪಣಿ ನೆರವಿಗೆ ಚರ್ಚೆ

ಕೀವ್ (ಎ.ಪಿ): ಉಕ್ರೇನ್‌ಗೆ ಯುದ್ಧ ವಿಮಾನ, ಕ್ಷಿಪಣಿಗಳ ನೆರವು ಪಡೆಯಲು ಮೈತ್ರಿ ದೇಶಗಳ ಜೊತೆಗೆ ಚರ್ಚೆ ನಡೆದಿದೆ ಎಂದು ಉಕ್ರೇನ್‌ನ ಅಧ್ಯಕ್ಷರ ಸಲಹೆಗಾರ ಮೈಖೈಲೊ ಪೊಡೊಲ್ಯಾಕ್ ತಿಳಿಸಿದ್ದಾರೆ. ಅಮೆರಿಕ, ಜರ್ಮನಿ ಮಾಸಾರಂಭದಲ್ಲಿ ಯುದ್ಧ ವಿಮಾನ ಒದಗಿಸುವ ವಾಗ್ದಾನ ಮಾಡಿದ್ದವು ಎಂದು ತಿಳಿಸಿದ್ದಾರೆ.

ಔಷಧ ಕ್ಷೇತ್ರಕ್ಕೆ ಪ್ರತ್ಯೇಕ ನೀತಿ: ಕೇಂದ್ರಕ್ಕೆ ಮನವಿ

ವಾಷಿಂಗ್ಟನ್ (ಪಿಟಿಐ): ಔಷಧ ಉತ್ಪಾದನಾ ವಲಯಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರವು ಸಂಶೋಧನಾ ಮತ್ತು ಅಭಿವೃದ್ಧಿ ನೀತಿಯನ್ನು ರೂಪಿಸಬೇಕು ಎಂದು ಅಮೆರಿಕದ ಔಷಧ ಉತ್ಪಾದಕ ಸಂಸ್ಥೆಗಳು ಬಯಸಿವೆ.

ಕೇಂದ್ರ ವಿತ್ತ ಸಚಿವ ನಿರ್ಮಲಾ ಸೀತಾರಾಮನ್ ಅವರು 2023– 24ನೇ ಸಾಲಿನ ಬಜೆಟ್ ಮಂಡನೆಗೆ ಸಿದ್ಧತೆ ನಡೆಸಿರುವಂತೆಯೇ ಈ ಕುರಿತ ಬೇಡಿಕೆ ಹೊರಬಿದ್ದಿದೆ.

ಅಮೆರಿಕ –ಭಾರತ ವಾಣಿಜ್ಯ ಸಂಸ್ಥೆಗಳ ಒಕ್ಕೂಟದ (ಯುಎಸ್‌ಎಐಸಿ) ಅಧ್ಯಕ್ಷ ಕರುಣ್ ರಿಷಿ ಈ ಕುರಿತು ಹೇಳಿಕೆ ನೀಡಿದ್ದಾರೆ.

ಬಯೊಫಾರ್ಮಾ ವಲಯಕ್ಕೆ ಅನ್ವಯಿಸಿ ಬಜೆಟ್ ಸಂಶೋಧನೆ ಮತ್ತು ಅಭಿವೃದ್ಧಿ ಆಧಾರಿತ ಬೆಳವಣಿಗೆಗೆ ಒತ್ತು ನೀಡಬೇಕು. ಎಂದು ಕರುಣ್ ರಿಷಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಹರ್ಮೀತ್ ಧಿಲ್ಲೋನ್ ಪರಾಭವ

ವಾಷಿಂಗ್ಟನ್ (ಪಿಟಿಐ):ರಿಪಬ್ಲಿಕನ್ ಪಕ್ಷದ ರಾಷ್ಟ್ರೀಯ ಸಮಿತಿ (ಆರ್‌ಎನ್‌ಸಿ) ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಭಾರತ ಮೂಲದ ಸಂಸದೆ, 54 ವರ್ಷದ ಹರ್ಮೀತ್ ಧಿಲ್ಲೋನ್ ಪರಾಭವಗೊಂಡಿದ್ದಾರೆ.

ತೀವ್ರ ಸ್ಪರ್ಧೆಕಂಡ ಚುನಾವಣೆಯಲ್ಲಿ 49 ವರ್ಷದ ರೊನ್ನಾ ಮೆಕ್‌ಡೇನಿಯಲ್ ಮರು ಆಯ್ಕೆಗೊಂಡರು. ಇದರೊಂದಿಗೆ ಈ ಸ್ಥಾನಕ್ಕೆ ಅವರು ನಾಲ್ಕನೇ ಬಾರಿ ಆಯ್ಕೆಯಾದಂತಾಗಿದೆ.

ಗೌಪ್ಯ ಮತದಾನ ನಡೆದಿದ್ದು, ಮೆಕ್‌ಡೇನಿಯಲ್ ಅವರು 111 ಮತ ಪಡೆದರೆ, ಹರ್ಮೀತ್ ಧಿಲ್ಲೋನ್ ಅವರು 51 ಮತ ಪಡೆಯಲಷ್ಟೇ ಶಕ್ತರಾದರು. ಇನ್ನೊಬ್ಬ ಸ್ಪರ್ಧಿ ಮೈಕ್ ಲಿಂಡೆಲ್ ನಾಲ್ಕು ಮತ ಪಡೆದರು.

ಆರ್‌ಎನ್‌ಸಿಯು ಡೊನಾಲ್ಡ್ ಟ್ರಂಪ್ ನೇತೃತ್ವದ ರಿಪಬ್ಲಿಕನ್ ಪಕ್ಷದ ಉನ್ನಾಧಿಕಾರ ಆಡಳಿತ ಸಮಿತಿಯಾಗಿದೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟಾಂಡರ್ಡ್ ಚಿನ್ನ 10ಗ್ರಾಂ	₹59,030
ಒಡವೆ ಚಿನ್ನ 1ಗ್ರಾಂ	₹5,430
ಬೆಳ್ಳಿ ಕೆ.ಜಿಗೆ	₹70,200

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹495
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹495

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1590)
ಸೋಯಾ (ರಿಫೈನ್ಡ್)	₹1170 (1160)
ಸೂರ್ಯಕಾಂತಿ (ರಿಫೈನ್ಡ್)	₹1180 (1180)
ಪಾಮೋಲಿನ್	₹925 (915)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹389-678
ದ್ವಿತಳಿ (ಬಿ.ವಿ)	₹333-781

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹140
ಆರ್‌ಎಸ್‌ಎಸ್-5	₹135
ಗುಡ್ ಲಾಟ್	₹130

ಅವಧಿ ವಿಸ್ತರಣೆ ವರದಿ ನಿರಾಕರಿಸಿದ ಅದಾನಿ ಸಮೂಹದ ವಕ್ತಾರ

‘ಅದಾನಿ ಎಫ್‌ಪಿಒ: ಬದಲಿಲ್ಲ’

ಮುಂಬೈ (ರಾಯಿಟರ್ಸ್/ಪಿಟಿಐ): ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಷೇರು ಮಾರಾಟವು (ಎಫ್‌ಪಿಒ) ಪೂರ್ವ ನಿಗದಿಯಂತೆಯೇ ನಡೆಯಲಿದೆ. ಇದರಲ್ಲಿ ಯಾವುದೇ ರೀತಿಯ ಬದಲಾವಣೆ ಇಲ್ಲ ಎಂದು ಅದಾನಿ ಸಮೂಹದ ವಕ್ತಾರರೊಬ್ಬರು ಶನಿವಾರ ಸ್ಪಷ್ಟಪಡಿಸಿದ್ದಾರೆ.

ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ರಿಸರ್ಚ್‌ನ ವರದಿ ಪ್ರಕಟವಾದ ನಂತರ ಅದಾನಿ ಸಮೂಹದ ಕಂಪನಿಗಳ ಷೇರು ಮೌಲ್ಯದಲ್ಲಿ ತೀವ್ರ ಕುಸಿತ ಕಾಣುತ್ತಿದೆ. ಹೀಗಾಗಿ, ಬ್ಯಾಂಕ್‌ಗಳು ಎಫ್‌ಪಿಒ ಅವಧಿಯನ್ನು ನಾಲ್ಕು ದಿನಗಳವರೆಗೆ ವಿಸ್ತರಿಸುವ ಅಥವಾ ಷೇರಿನ ನೀಡಿಕೆ ದರವನ್ನು ಶೇ 10ರಷ್ಟು ಕಡಿಮೆ ಮಾಡುವ ಕುರಿತು ಪರಿಶೀಲನೆ ನಡೆಸುತ್ತಿವೆ ಎಂದು ಮೂಲಗಳು ಹೇಳಿವೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಸಮೂಹದ ವಕ್ತಾರ, ‘ಅವಧಿ ವಿಸ್ತರಿಸುವ ಅಥವಾ ಷೇರಿನ ನೀಡಿಕೆ ದರ ಕಡಿಮೆ ಮಾಡುವ ಪ್ರಶ್ನೆಯೇ ಇಲ್ಲ. ಈ ವರದಿಯು ಎಫ್‌ಪಿಒ ಪ್ರಕ್ರಿಯೆಯನ್ನು ಹಾಳುಮಾಡುವ ದುರುದ್ದೇಶದಿಂದ ಕೂಡಿದ್ದಾಗಿದೆ’ ಎಂದು ಹೇಳಿದ್ದಾರೆ.

ಎಫ್‌ಪಿಒ ಜನವರಿ 27ರಂದು ಆರಂಭ ಆಗಿದ್ದು 31ರವರೆಗೆ ಇರಲಿದೆ. ‘ಬ್ಯಾಂಕ್‌ಗಳು ಮತ್ತು ಹೂಡಿಕೆದಾರರನ್ನು ಒಳಗೊಂಡು ನಮ್ಮ ಎಲ್ಲಾ ಪಾಲುದಾರರು ಎಫ್‌ಪಿಒದಲ್ಲಿ ಸಂಪೂರ್ಣ ನಂಬಿಕೆ ಹೊಂದಿದ್ದಾರೆ. ಎಫ್‌ಪಿಒ ಯಶಸ್ವಿಯಾಗಲಿದೆ ಎನ್ನುವ ಆತ್ಮವಿಶ್ವಾಸ ನಮಗಿದೆ’ ಎಂದು ಅವರು ತಿಳಿಸಿದ್ದಾರೆ.

ಅದಾನಿ ಸಮೂಹವು ಪ್ರತಿ ಷೇರಿಗೆ ₹3,112 ರಿಂದ ₹3,276 ಬೆಲೆ ನಿಗದಿ ಮಾಡಿದೆ. ಆದರೆ ಶುಕ್ರವಾರದ ವಹಿವಾಟಿನ ಅಂತ್ಯದ ವೇಳೆಗೆ ಅದಾನಿ ಎಂಟರ್‌ಪ್ರೈಸಸ್‌ನ ಒಂದು ಷೇರಿನ ಬೆಲೆ ₹2,761.45ಕ್ಕೆ ಇಳಿಕೆ ಕಂಡಿದೆ.

ಎಫ್‌ಪಿಒದ ಮೊದಲ ದಿನ ಶುಕ್ರವಾರ ಶೇ 1ರಷ್ಟು ಷೇರುಗಳಿಗೆ ಮಾತ್ರವೇ ಬಿಡ್ ಸಲ್ಲಿಕೆ ಆಗಿದೆ. ರಿಟೇಲ್ ಹೂಡಿಕೆದಾರರು ತಮಗೆ ಮೀಸಲಿಟ್ಟದ್ದ 2.29 ಕೋಟಿ ಷೇರುಗಳಲ್ಲಿ 4.70 ಲಕ್ಷ ಷೇರುಗಳಿಗೆ ಬಿಡ್ ಸಲ್ಲಿಸಿದ್ದಾರೆ.

ಎಫ್‌ಪಿಒದಲ್ಲಿ ಬದಲಾವಣೆ ಮಾಡುವ ಕುರಿತು ಷೇರು ಮಾರಾಟ ಪ್ರಕ್ರಿಯೆಯನ್ನು ನಿರ್ವಹಿಸುತ್ತಿರುವ ಜೆಫ್ರೀಸ್, ಎಸ್‌ಬಿಐ ಕ್ಯಾಪಿಟಲ್ ಮಾರ್ಕೆಟ್ಸ್ ಮತ್ತು ಐಸಿಐಸಿಐ ಸೆಕ್ಯುರಿಟೀಸ್ ಪ್ರತಿಕ್ರಿಯೆ ನೀಡಿಲ್ಲ.

ಎಲ್‌ಐಸಿ, ಎಸ್‌ಬಿಐಗೆ ₹78 ಸಾವಿರ ಕೋಟಿ ನಷ್ಟ: ಸುರ್ಜೇವಾಲಾ

ನವದೆಹಲಿ (ಪಿಟಿಐ): ‘ಅದಾನಿ ಸಮೂಹದ ಕಂಪನಿಗಳ ಷೇರು ಮೌಲ್ಯದಲ್ಲಿ ಕುಸಿತ ಉಂಟಾಗಿರುವುದರಿಂದ ಎಲ್‌ಐಸಿ ಹಾಗೂ ಎಸ್‌ಬಿಐಗೆ ₹78 ಸಾವಿರ ಕೋಟಿಗೂ ಅಧಿಕ ಮೊತ್ತ ನಷ್ಟವಾಗಿದೆ. ಇಷ್ಟಾದರೂ ಹಣಕಾಸು ಸಚಿವರು ಹಾಗೂ ತನಿಖಾ ಸಂಸ್ಥೆಗಳು ಮೌನಕ್ಕೆ ಶರಣಾಗಿರುವುದು ಏಕೆ’ ಎಂದು ಕಾಂಗ್ರೆಸ್ ಶನಿವಾರ ಪ್ರಶ್ನಿಸಿದೆ.

‘ಅದಾನಿ ಸಮೂಹವು ಷೇರು ಬೆಲೆಯ ಮೇಲೆ ಕೃತಕವಾಗಿ ಪರಿಣಾಮ ಬೀರುವ ಕೆಲಸದಲ್ಲಿ ಹಾಗೂ ಲೆಕ್ಕಪತ್ರಗಳ ವಂಚನೆಯಲ್ಲಿ ತೊಡಗಿದೆ ಎಂದು ಅಮೆರಿಕದ ಹೂಡಿಕೆ ಸಂಶೋಧನಾ ಸಂಸ್ಥೆ ‘ಹಿಂಡನ್‌ಬರ್ಗ್ ರಿಸರ್ಚ್’ ಆರೋಪಿಸಿದೆ. ಹೀಗಿದ್ದರೂ ಎಲ್‌ಐಸಿ ಹಾಗೂ ಎಸ್‌ಬಿಐ, ಅದಾನಿ ಸಮೂಹದಲ್ಲಿ ಹೂಡಿಕೆ ಮುಂದುವರಿಸಿವೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಆರೋಪಿಸಿದ್ದಾರೆ.

ಜನರ ಸಂಶಯ ಬಗೆಹರಿಸಲಿ (ಲಖನೌ ವರದಿ): ಅದಾನಿ ಸಮೂಹವು ಹಣಕಾಸು ಅಕ್ರಮ ಎಸಗಿದೆ ಎಂದು ‘ಹಿಂಡನ್‌ಬರ್ಗ್ ರಿಸರ್ಚ್’ ಮಾಡಿರುವ ಆರೋಪಗಳ ಕುರಿತ ಸಂಶಯಗಳನ್ನು ಕೇಂದ್ರ ಸರ್ಕಾರವು ಬಗೆಹರಿಸಬೇಕು ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಶನಿವಾರ ಆಗ್ರಹಿಸಿದ್ದಾರೆ.

ರಿಲಯನ್ಸ್ ಪವರ್ ನಷ್ಟ ₹291 ಕೋಟಿಗೆ ಏರಿಕೆ

ನವದೆಹಲಿ (ಪಿಟಿಐ): ರಿಲಯನ್ಸ್ ಪವರ್ ಕಂಪನಿಯ ನಿವ್ವಳ ನಷ್ಟವು 2022ರ ಡಿಸೆಂಬರ್ ತ್ರೈಮಾಸಿಕದಲ್ಲಿ ₹291.54 ಕೋಟಿಗೆ ಏರಿಕೆ ಆಗಿದೆ.

2021ರ ಡಿಸೆಂಬರ್ ತ್ರೈಮಾಸಿಕದಲ್ಲಿ ನಿವ್ವಳ ನಷ್ಟ ₹97.22 ಕೋಟಿಯಷ್ಟು ಇತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಂಪನಿಯ ಒಟ್ಟು ವೆಚ್ಚವು ₹1,900 ಕೋಟಿಯಿಂದ ₹2,126 ಕೋಟಿಗೆ ಏರಿಕೆ ಆಗಿದೆ. ಒಟ್ಟು ವರಮಾನ ₹1,858 ಕೋಟಿಯಿಂದ ₹1,936 ಕೋಟಿಗೆ ಏರಿಕೆ ಆಗಿದೆ ಎಂದು ತಿಳಿಸಿದೆ. ಶನಿವಾರ ನಡೆದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಅಶೋಕ್ ಕುಮಾರ್ ಪಾಲ್ ಅವರನ್ನು ಜನವರಿ 29ರಿಂದ ಜಾರಿಗೆ ಬರುವಂತೆ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ಆಗಿ ನೇಮಕ ಮಾಡಲಾಗಿದೆ.

ಬಿಇಎಲ್ ವಹಿವಾಟು ಶೇ 24ರಷ್ಟು ಏರಿಕೆ

ಬೆಂಗಳೂರು: ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) 2022–23ನೇ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹11,005 ಕೋಟಿ ಮೊತ್ತದ ವಹಿವಾಟು ನಡೆಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹8,843 ಕೋಟಿ ಮೊತ್ತದ ವಹಿವಾಟು ನಡೆದಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ವಹಿವಾಟು ಮೊತ್ತವು ಶೇ 24ರಷ್ಟು ಹೆಚ್ಚಾಗಿದೆ ಎಂದು ತಿಳಿಸಿದೆ.

ತೆರಿಗೆ ನಂತರದ ಲಾಭವು (ಪಿಎಟಿ) ₹583 ಕೋಟಿಯಿಂದ ₹598 ಕೋಟಿಗೆ ಏರಿಕೆ ಆಗಿದೆ. ₹1ರ ಮುಖಬೆಲೆಯ ಪ್ರತಿ ಷೇರಿಗೆ ₹0.60 ಮಧ್ಯಂತರ ಲಾಭಾಂಶ ನೀಡಲು ಕಂಪನಿಯ ಆಡಳಿತ ಮಂಡಳಿ ನಿರ್ದೇಶಕರು ಶಿಫಾರಸು ಮಾಡಿದ್ದಾರೆ.

ಎಫ್‌ಐಐ: ₹29,232 ಕೋಟಿ ಮೌಲ್ಯದ ಷೇರು ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಭಾರತದ ಷೇರುಪೇಟೆಗಳಲ್ಲಿ ಲಾಭ ಗಳಿಕೆಗೆ ಹೆಚ್ಚು ಗಮನ ಹರಿಸಿದ್ದಾರೆ. ಹೀಗಾಗಿ ಬಂಡವಾಳ ಹೊರಹರಿವು ಹೆಚ್ಚಾಗುತ್ತಲೇ ಇದೆ.


ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ ಇರುವ ಮಾಹಿತಿಯ ಪ್ರಕಾರ, ಜನವರಿ 2 ರಿಂದ 27ರವರೆಗಿನ ಅವಧಿಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹29,232 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

‘ಮಾರುಕಟ್ಟೆ ಮೌಲ್ಯ ಕಡಿಮೆ ಇರುವ ಚೀನಾ, ಹಾಂಗ್‌ಕಾಂಗ್, ದಕ್ಷಿಣ ಕೊರಿಯಾ ಮತ್ತು ಥಾಯ್ಲೆಂಡ್ ಷೇರುಪೇಟೆಗಳಲ್ಲಿ ಬಂಡವಾಳ ಹೂಡಿಕೆ ಮಾಡುವುದನ್ನು ವಿದೇಶಿ ಹೂಡಿಕೆದಾರರು ಮುಂದುವರಿಸಿದ್ದಾರೆ. ಅದಾನಿ ಸಮೂಹದ ವಿರುದ್ಧದ ವರದಿಯು ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಗುತ್ತಿದೆ. ಇದರಿಂದಾಗಿ ಜನವರಿ 27ರಂದು ಒಂದೇ ದಿನ ₹5,977 ಕೋಟಿಗೂ ಅಧಿಕ ಮೊತ್ತದ ಷೇರುಗಳನ್ನು ಅವರು ಮಾರಾಟ ಮಾಡಿದ್ದಾರೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ನಿರಂತರವಾಗಿ ಷೇರುಗಳನ್ನು ಖರೀದಿಸುತ್ತಿದ್ದು, ಷೇರುಪೇಟೆಯನ್ನು ಹೆಚ್ಚಿನ ಕುಸಿತ ಕಾಣದಂತೆ ತಡೆಯುತ್ತಿದ್ದಾರೆ.

ಜನವರಿ 2 ರಿಂದ 27ರವರೆಗಿನ ವಹಿವಾಟು ಅವಧಿಯಲ್ಲಿ ₹23,390 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ.

ಎಫ್‌ಐಐ ಹೊರಹರಿವು (₹ ಕೋಟಿಗಳಲ್ಲಿ)



* ಗಣರಾಜ್ಯೋತ್ಸವದ ಪ್ರಯುಕ್ತ ಜ.26ರಂದು ಷೇರುಪೇಟೆ ವಹಿವಾಟಿಗೆ ರಜೆ ಇತ್ತು.

ಜೀನ್ಸ್ ಧರಿಸಿದ ವಕೀಲನನ್ನು ‘ಡಿಕೋರ್ಟ್’ ಮಾಡಿದ ಹೈಕೋರ್ಟ್

ಗುವಾಹಟಿ (ಪಿಟಿಐ): ಪ್ರಕರಣವೊಂದರ ವಾದ ಮಂಡಿಸಲು ನ್ಯಾಯಾಲಯಕ್ಕೆ ಜೀನ್ಸ್ ಪ್ಯಾಂಟ್ ಧರಿಸಿ ಬಂದಿದ್ದ ಹಿರಿಯ ವಕೀಲರೊಬ್ಬರನ್ನು ಗುವಾಹಟಿಯ ಹೈಕೋರ್ಟ್ ಶುಕ್ರವಾರ ‘ಡಿಕೋರ್ಟ್’ (ನ್ಯಾಯಾಲಯದಿಂದ ಹೊರಗೆ ಕಳಿಸುವುದು) ಮಾಡಿದ್ದು, ವಿಚಾರಣೆಯನ್ನು ಒಂದು ವಾರ ಕಾಲ ಮುಂದೂಡಿದೆ.

ಪೊಲೀಸರನ್ನು ನ್ಯಾಯಾಲಯಕ್ಕೆ ಕರೆಸಿದ ನ್ಯಾಯಮೂರ್ತಿ ಕಲ್ಯಾಣ್ ರೈ ಸುರಾನಾ ಅವರು ಜೀನ್ಸ್ ಧರಿಸಿದ್ದ ವಕೀಲ ಬಿ.ಕೆ. ಮಹಾಜನ್ ಅವರನ್ನು ಕೋರ್ಟ್‌ನಿಂದ ಹೊರಗೆ ಕರೆದುಕೊಂಡು ಹೋಗುವಂತೆ ಸೂಚಿಸಿದರು.

‘ಈ ಆದೇಶವನ್ನು ಮುಖ್ಯ ನ್ಯಾಯಮೂರ್ತಿ, ರಿಜಿಸ್ಟ್ರಾರ್ ಜನರಲ್ ಹಾಗೂ ಅಸ್ಸಾಂ, ನಾಗಾಲ್ಯಾಂಡ್, ಮಿಜೋರಾಂ ಮತ್ತು ಅರುಣಾಚಲ ಪ್ರದೇಶದ ಬಾರ್ ಕೌನ್ಸಿಲ್‌ಗಳ ಗಮನಕ್ಕೆ ತರಲಾಗುವುದು’ ಎಂದೂ ನ್ಯಾಯಮೂರ್ತಿ ಸುರಾನಾ ಹೇಳಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	350-400
ನಡುಗೋಲು	480-500
ರಾಶಿ	550-600
ರಾಶಿ ಉತ್ತಮ	650-700
ಜರಡಿ	700-750
ಹೆರಕಿದ್ದು	1150-1200
ಹಸಿರು ಸಾಧಾರಣ	700-750
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1350-1450
ಕಾಳು ಮೆಣಸು	500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟೇಷನ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14500	14100	14400	159.85 ಸೆಂಟ್ಸ್
ಎಸಿ	7140	6850	6200	
ಆರ್‌ಪಿ	9000	8600	8900	ಲಂಡನ್
ಆರ್‌ಸಿ	4740	168 on OT	4500	1943 ಡಾಲರ್ಸ್

‘ದಾಖಲೆ ಸಂಖ್ಯೆಯ ವೀಸಾ ಪ್ರಕ್ರಿಯೆ ನಡೆಸಲು ಯೋಜನೆ’

ನವದೆಹಲಿ (ಪಿಟಿಐ): ‘ಅಮೆರಿಕ ರಾಯಭಾರ ಕಚೇರಿ ಹಾಗೂ ಭಾರತದಲ್ಲಿರುವ ಅದರ ಕಾನ್ಸುಲೇಟ್‌ಗಳು ಈ ವರ್ಷ ಭಾರತೀಯರಿಗೆ ಸಂಬಂಧಿಸಿದ ವೀಸಾ ಪ್ರಕ್ರಿಯೆಯನ್ನು ದಾಖಲೆ ಸಂಖ್ಯೆಯಲ್ಲಿ ನಡೆಸಲು ಯೋಜನೆ ಹೊಂದಿವೆ’ ಎಂದು ಮುಂಬೈ ಕಾನ್ಸುಲರ್ ಮುಖ್ಯಸ್ಥ ಜಾನ್ ಬಲ್ಲಾರ್ಡ್ ಶನಿವಾರ ಹೇಳಿದ್ದಾರೆ.

‘ಕಳೆದ ವರ್ಷ ರಾಯಭಾರ ಕಚೇರಿಯು ಭಾರತದ 1.25 ಲಕ್ಷ ಮಂದಿಗೆ ವಿದ್ಯಾರ್ಥಿ ವೀಸಾ ಮಂಜೂರು ಮಾಡಿತ್ತು. ಈ ಬಾರಿ ಇದಕ್ಕಿಂತಲೂ ಹೆಚ್ಚು ಮಂದಿ ವಿದ್ಯಾರ್ಥಿ ವೀಸಾಕ್ಕಾಗಿ ಅರ್ಜಿ ಸಲ್ಲಿಸುವ ನಿರೀಕ್ಷೆ ಇದೆ. ಕಳೆದ ವರ್ಷ ಒಟ್ಟು 8 ಲಕ್ಷಕ್ಕೂ ಅಧಿಕ ವೀಸಾ ವಿತರಿಸಲಾಗಿದೆ. ಕೋವಿಡ್ ಪೂರ್ವದಲ್ಲಿದ್ದ ಪರಿಸ್ಥಿತಿಗೆ ನಾವು ಮರಳುತ್ತಿದ್ದೇವೆ’ ಎಂದಿದ್ದಾರೆ.

‘ವೀಸಾ ನವೀಕರಣಕ್ಕಾಗಿ ಇನ್ನು ಮುಂದೆ ಅಭ್ಯರ್ಥಿಗಳು ಇ-ಮೇಲ್ ಮೂಲಕವೂ ಅರ್ಜಿ ಸಲ್ಲಿಸಬಹುದು. ವೀಸಾಗಾಗಿ ಕಾಯುವ ಅವಧಿಯನ್ನು ತಗ್ಗಿಸಲು ನಾವು ಅಗತ್ಯ ಕ್ರಮ ಕೈಗೊಂಡಿದ್ದೇವೆ’ ಎಂದೂ ತಿಳಿಸಿದ್ದಾರೆ.

ಎನ್‌ಟಿಪಿಸಿ ಲಾಭ ಶೇ 5ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮದ (ಎನ್‌ಟಿಪಿಸಿ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹4,854 ಕೋಟಿಯಷ್ಟು ಆಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹4,626 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇ 5ರಷ್ಟು ಏರಿಕೆ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ವರಮಾನ ಹೆಚ್ಚಾಗಿರುವುದೇ ಲಾಭದಲ್ಲಿನ ಏರಿಕೆಗೆ ಮುಖ್ಯ ಕಾರಣ ಎಂದು ಅದು ತಿಳಿಸಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ವರಮಾನವು ₹33,783 ಕೋಟಿಯಿಂದ ₹44,989 ಕೋಟಿಗೆ ಏರಿಕೆ ಆಗಿದೆ.

ಕಂಪನಿಯ ಆಡಳಿತ ಮಂಡಳಿ ನಿರ್ದೇಶಕರು 2022–23ನೇ ಹಣಕಾಸು ವರ್ಷಕ್ಕೆ ₹10ರ ಮುಖಬೆಲೆಯ ಪ್ರತಿ ಷೇರಿಗೆ ₹4.25 ರಷ್ಟು ಮಧ್ಯಂತರ ಲಾಭಾಂಶ ನೀಡಲು ನಿರ್ಧರಿಸಿದ್ದಾರೆ.

ಡಿಸಿಬಿ ಬ್ಯಾಂಕ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಖಾಸಗಿ ವಲಯದ ಡಿಸಿಬಿ ಬ್ಯಾಂಕ್‌ನ ಲಾಭವು 2022ರ ಡಿಸೆಂಬರ್ ತ್ರೈಮಾಸಿಕದಲ್ಲಿ ₹114 ಕೋಟಿ ಆಗಿದೆ. 2021ರ ಇದೇ ಅವಧಿಯಲ್ಲಿ ಲಾಭವು ₹75 ಕೋಟಿ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇ 52ರಷ್ಟು ಹೆಚ್ಚಳ ಕಂಡುಬಂದಿದೆ.

ಒಟ್ಟು ವರಮಾನ ₹463 ಕೋಟಿಯಿಂದ ₹541 ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ವಸೂಲಾಗದ ಸಾಲದ ಸರಾಸರಿ (ಎನ್‌ಪಿಎ) ಪ್ರಮಾಣ ಶೇ 4.78ರಿಂದ ಶೇ 3.62ಕ್ಕೆ ಇಳಿಕೆ ಆಗಿದೆ. ನಿವ್ವಳ ಎನ್‌ಪಿಎ ಶೇ 2.55 ರಿಂದ ಶೇ 1.37ಕ್ಕೆ ಇಳಿಕೆ ಕಂಡಿದೆ.

ಬಂಡವಾಳ ಲಭ್ಯತೆ ಪ್ರಮಾಣವು ಶೇ 16.26ರಷ್ಟು ಇದೆ ಎಂದು ಬ್ಯಾಂಕ್ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

28–1–2023

ಜಾವಾ 70/80(ಹೊಸ)	12050-12100
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	10400-10450
ದಪ್ಪ ಗುಜರಾತ್(ಹೊಸ)	11500-11550

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1600)
ಒಂದು ವಾರದ ಡೆಲಿವರಿ	1605 (1595)
ಸೋಯಾ ಕಚ್ಚಾ	1100 (1090)
ಪಾಮ್ ವಾರದ ಡೆಲಿವರಿ	923 (913)
ಸೂರ್ಯಕಾಂತಿ ಎಣ್ಣೆ ಕಚ್ಚಾ	1080 (1070)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
57,000 (57,050)
ಬೆಳ್ಳಿ ಕೆ.ಜಿ 68,100 (68,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪುಣ್ಯಸ್ಮರಣೆ



ಶ್ರೀಯುತ ಎಂ.ಸಿ. ನಾರಾಯಣ ಗೌಡ IPS (Rtd)
05/11/1953 - 29/01/2022
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ನಿರ್ದೇಶಕರು
ಹರ್ಷ ಸಮೂಹ ಸಂಸ್ಥೆಗಳು, ನೆಲಮಂಗಲ
ತಮ್ಮ ನೆನಪು ನಮ್ಮ ಹೃದಯದಲ್ಲಿ ಹಸಿರಾಗಿದೆ.
ತಮ್ಮ ಆಶೀರ್ವಾದ ಸದಾ ನಮ್ಮ ಮೇಲಿರಲಿ ಎಂದು ಬಯಸುತ್ತೇವೆ.
HARSHA INSTITUTIONS
ಶ್ರೀಮತಿ ಚಂದ್ರಮತಿ, ಎಂ.ಎನ್, ಅಭಿಷೇಕ್. ಎಂ.ಎನ್, ಅನುಚೇತ್ IPS.
ಎಸ್. ಶಿವಕುಮಾರ್, ಗಿರಿಜಾ ಶಿವಕುಮಾರ್, ಹರ್ಷ, ಯಶಸ್ ಮತ್ತು
ಕುಟುಂಬ ವರ್ಗ, ಆಡಳಿತ ವರ್ಗ ಹಾಗೂ ಸಿಬ್ಬಂದಿ ವರ್ಗ

ರಾಷ್ಟ್ರಪತಿ ಭವನದಿಂದ ಅಧಿಕೃತ ಪ್ರಕಟಣೆ • ಜ. 31ರಿಂದ ಉದ್ಯಾನ ಭೇಟಿಗೆ ಅವಕಾಶ

‘ಮೊಘಲ್’ ಇನ್ಮುಂದೆ ‘ಅಮೃತ್ ಉದ್ಯಾನ’

ನವದೆಹಲಿ (ಪಿಟಿಐ): ರಾಷ್ಟ್ರಪತಿ ಭವನದ ಪ್ರಸಿದ್ಧ ‘ಮೊಘಲ್ ಉದ್ಯಾನ’ವನ್ನು ಇನ್ನು ಮುಂದೆ ‘ಅಮೃತ್ ಉದ್ಯಾನ’ ಎಂದು ಕರೆಯಲಾಗುವುದು ಎಂದು ಅಧಿಕೃತ ಪ್ರಕಟಣೆ ಶನಿವಾರ ತಿಳಿಸಿದೆ.

ಆಕರ್ಷಕ ಉದ್ಯಾನ ವರ್ಷಕ್ಕೊಮ್ಮೆ ಸಾರ್ವಜನಿಕರಿಗೆ ತೆರೆದಿರುತ್ತವೆ. ಈ ಬಾರಿ ಜನರು ಜ. 31 ರಿಂದ ಭೇಟಿ ನೀಡಬಹುದು. ಮಾರ್ಚ್ 26ರ ವರೆಗೂ ತೆರೆದಿರುತ್ತದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾನುವಾರ ರಾಷ್ಟ್ರಪತಿ ಭವನದ ಉದ್ಯಾನ ಮತ್ತು ಉದ್ಯಾನ ಉತ್ಸವ 2023 ಉದ್ಘಾಟಿಸಲಿದ್ದಾರೆ.

‘ಆಜಾದಿ ಕಾ ಅಮೃತ ಮಹೋತ್ಸವ’ ಆಚರಿಸುವ ಸಂದರ್ಭದಲ್ಲಿ ರಾಷ್ಟ್ರಪತಿ ಭವನದ ಉದ್ಯಾನಗಳಿಗೆ ‘ಅಮೃತ ಉದ್ಯಾನ’ ಎಂದು ಸಾಮಾನ್ಯ ಹೆಸರು ನೀಡಲು ಅವರು ಸಂತೋಷಪಡುತ್ತಾರೆ’ ಎಂದು ರಾಷ್ಟ್ರಪತಿ ಅವರ ಪತ್ರಿಕಾ ಉಪ ಕಾರ್ಯದರ್ಶಿ ನಾವಿಕಾ ಗುಪ್ತಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.



‘ಅಮೃತ್ ಉದ್ಯಾನ’ ಎಂದು ಮರುನಾಮಕರಣಗೊಂಡಿರುವ ರಾಷ್ಟ್ರಪತಿ ಭವನದ ಪ್ರಸಿದ್ಧ ಮೊಘಲ್ ಉದ್ಯಾನ –ಪಿಟಿಐ ಚಿತ್ರ

ಕಳೆದವರ್ಷ ಕೇಂದ್ರವು ದೆಹಲಿಯ ರಾಜಪಥವನ್ನು ‘ಕರ್ತವ್ಯ ಪಥ’ ಎಂದು ಮರುನಾಮಕರಣ ಮಾಡಿತ್ತು.

ವಿಸ್ತಾರವಾದ ರಸ್ತೆಗಳು ಹಾಗೂ ಇತರ ಸಂಸ್ಥೆಗಳು ವಸಾಹತುಶಾಹಿಯ ಗುರುತನ್ನು ಹೊಂದಿರಬಾರದು ಎಂಬ ಕಾರಣಕ್ಕೆ ಕೇಂದ್ರ ಸರ್ಕಾರ ಅವುಗಳ ಮರುನಾಮಕರಣ ಮಾಡುತ್ತಿದ್ದು, ‘ಕರ್ತವ್ಯ ಪಥ’ ಅಂತಹ ಪ್ರಯತ್ನಗಳಲ್ಲಿ ಒಂದಾಗಿತ್ತು. ಡಾ.ಎಪಿಜೆ ಅಬ್ದುಲ್ ಕಲಾಂ ಮತ್ತು ರಾಮನಾಥ ಕೋವಿಂದ ಅವರ ಅಧಿಕಾರಾವಧಿಯಲ್ಲಿ, ಹರ್ಬಲ್ -1, ಹರ್ಬಲ್ -2, ಸ್ಪರ್ಶ ಉದ್ಯಾನ, ಬೋನ್ಸಾಯ್ ಗಾರ್ಡನ್ ಮತ್ತು ಆರೋಗ್ಯ ವನಂ ಎಂಬ ಉದ್ಯಾನ ಅಭಿವೃದ್ಧಿಪಡಿಸಲಾಗಿದೆ ಎಂದು ಹೇಳಿಕೆ ತಿಳಿಸಿದೆ.

ರಾಷ್ಟ್ರಪತಿ ಭವನ ಶ್ರೀಮಂತ ವೈವಿಧ್ಯಮಯ ಉದ್ಯಾನಗಳಿಗೆ ನೆಲೆಯಾಗಿದೆ. ಈಸ್ಟ್ ಲಾನ್, ಸೆಂಟ್ರಲ್ ಲಾನ್, ಲಾಂಗ್ ಗಾರ್ಡನ್ ಮತ್ತು ಸರ್ಕುಲರ್ ಗಾರ್ಡನ್‌ಗಳ ಮೂಲಕ ಈ ಉದ್ಯಾನ ಜನಾಕರ್ಷಣೆಯಾಗಿದೆ.

ಪ್ರತಿಪಕ್ಷಗಳ ವಿರೋಧ

ಮೊಘಲ್ ಗಾರ್ಡನ್ ಮರುನಾಮಕರಣ ನಿರ್ಧಾರವನ್ನು ವಿರೋಧ ಪಕ್ಷಗಳು ಟೀಕಿಸಿವೆ.

‘ಮುಂದೊಂದು ದಿನ ಕೋಲ್ಕತ್ತದ ಈಡನ್ ಗಾರ್ಡನ್ಸ್‌ಗೆ ಮೋದಿ ಗಾರ್ಡನ್ಸ್ ಎಂದು ಮರುನಾಮಕರಣ ಮಾಡಬಹುದು. ಬಿಜೆಪಿಯವರು ಹೆಸರು ಬದಲಾವಣೆ ಕಾರ್ಯವನ್ನು ಕೈಬಿಟ್ಟು ಉದ್ಯೋಗ ಸೃಷ್ಟಿಯತ್ತ ಚಿತ್ತ ಹರಿಸಲಿ’ ಎಂದು ಟಿಎಂಸಿ ರಾಜ್ಯಸಭಾ ಸದಸ್ಯ ಡೆರೆಕ್ ಒಬ್ರಿಯಾನ್ ಹೇಳಿದ್ದಾರೆ.

ಕೇಂದ್ರ ಸಚಿವರಾದ ಧರ್ಮೇಂದ್ರ ಪ್ರಧಾನ್ ಮತ್ತು ಕಿರಣ್ ರಿಜಿಜು ಅವರು ಮರುನಾಮಕರಣದ ನಿಲುವನ್ನು ಸ್ವಾಗತಿಸಿದ್ದಾರೆ.

‘ಸೂಕ್ತವಯಸ್ಸಿನಲ್ಲಿ ತಾಯ್ತನ ಹೊಂದಲಿ’

ಬಾಲ್ಯವಿವಾಹ– ಪುರುಷರಿಗೆ ಜೈಲು ನಿಶ್ಚಿತ: ಹಿಮಂತ

ಗುವಾಹಟಿ (ಪಿಟಿಐ): ‘ಮಹಿಳೆಯರು ಸೂಕ್ತ ವಯಸ್ಸಿನಲ್ಲಿ ಅಂದರೆ, 22ರಿಂದ 30 ವರ್ಷ ವಯಸ್ಸಿನೊಳಗೆ ತಾಯ್ತನವನ್ನು ಹೊಂದಬೇಕು. ಇಲ್ಲದಿದ್ದರೆ ವೈದ್ಯಕೀಯವಾಗಿ ತೊಡಕುಗಳಾಗುವ ಸಾಧ್ಯತೆ ಇರುತ್ತದೆ’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಶನಿವಾರ ಹೇಳಿದ್ದಾರೆ.

ಇಲ್ಲಿ ಶನಿವಾರ ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ಭಾಗ ವಹಿಸಿ ಮಾತನಾಡಿದ ಅವರು, ‘ಹೆಣ್ಣುಮಕ್ಕಳು ಅಪ್ರಾಪ್ತ ವಯಸ್ಸಿನಲ್ಲಿ ವಿವಾಹವಾಗುವುದು ಹಾಗೂ ತಾಯಿಯಾಗುವುದನ್ನು ತಡೆಗಟ್ಟುವ ಕುರಿತು ಕಾರ್ಯನಿರ್ವಹಿಸಲು ನಮ್ಮ ಸರ್ಕಾರವು ಬದ್ಧವಾಗಿದೆ’ ಎಂದು ಹೇಳಿದರು.

ಹೆಣ್ಣುಮಕ್ಕಳನ್ನು ಬಾಲ್ಯವಿವಾಹ ಮತ್ತು ಅಪ್ರಾಪ್ತ ವಯಸ್ಸಿನ ತಾಯಿಯಾಗುವುದರಿಂದ ರಕ್ಷಿಸಲು ಅಸ್ಸಾಂ ಸರ್ಕಾರವು ಕಠಿಣ ಕಾನೂನುಗಳು ಮತ್ತು ಲೈಂಗಿಕ



ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯನ್ನು ಜಾರಿಗೊಳಿಸಲು ಕಠಿಣ ಕಾನೂನನ್ನು ತರಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಹಿಮಂತ ಬಿಸ್ವಾ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

‘ಕಾನೂನುಬದ್ಧವಾಗಿ ವಿವಾಹ ವಾಗಿದ್ದರೂ ಗಂಡನಾದವನು, 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯೊಂದಿಗೆ ಲೈಂಗಿಕ ಸಂಬಂಧ ಹೊಂದುವುದು ಅಪರಾಧ. ಹಾಗಾಗಿ, ಮುಂದಿನ ಐದು– ಆರು ತಿಂಗಳಲ್ಲಿ ಸಾವಿರಾರು ಗಂಡಂದಿರನ್ನು ಬಂಧಿಸಲಾಗುವುದು. ಅವರಲ್ಲಿ ಅನೇಕರು ಜೀವಾವಧಿ ಶಿಕ್ಷೆಯನ್ನು ಅನುಭವಿಸಬೇಕಾದೀತು ’ ಎಂದೂ ಅವರು ಎಚ್ಚರಿಸಿದರು.

‘ಮಹಿಳೆಯರು ಹೆಚ್ಚು ಸಮಯ ಕಾಯಬಾರದು. 22ರಿಂದ 30 ವರ್ಷದ ನಡುವಿನ ವಯಸ್ಸು ತಾಯ್ತನಕ್ಕೆ ಸೂಕ್ತವಾದದ್ದು. ಇನ್ನೂ ಮದುವೆಯಾಗದ ಮಹಿಳೆಯರು ಬೇಗ ಮದುವೆಯಾಗಬೇಕು’ ಎಂದು ನಗುತ್ತಾ ಹೇಳಿದ ಶರ್ಮಾ ಅವರು, ‘ನಾವು ಅಪ್ರಾಪ್ತ ವಯಸ್ಸಿನಲ್ಲಿ ತಾಯ್ತನ ಹೊಂದುವ ಕುರಿತು ಮಾತನಾಡುತ್ತಿದ್ದೇವೆ. ಆದರೆ, ಬಹಳ ಸಮಯ ಕಾಯದೇ ಮಹಿಳೆಯರು ಸೂಕ್ತ ವಯಸ್ಸಿನಲ್ಲಿ ತಾಯಿಯಾಗುವುದರ ಕಡೆಗೂ ಗಮನ ನೀಡಬೇಕು. ಎಲ್ಲದಕ್ಕೂ ಸೂಕ್ತವಾದ ವಯಸ್ಸು ಇರುವ ರೀತಿಯಲ್ಲಿ ದೇವರು ನಮ್ಮ ದೇಹವನ್ನು ಸೃಷ್ಟಿಸಿದ್ದಾನೆ’ ಎಂದು ಹೇಳಿದರು.

14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗಿಯರನ್ನು ಮದುವೆಯಾಗುವ ಪುರುಷರ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲು ಅಸ್ಸಾಂ ಸಚಿವ ಸಂಪುಟವು ಸೋಮವಾರವಷ್ಟೇ ನಿರ್ಣಯ ಕೈಗೊಂಡಿತ್ತು.

ಕೊಲಿಜಿಯಂ ಕಡೆಗಣನೆ– ಪ್ರಜಾಪ್ರಭುತ್ವಕ್ಕೆ ಮಾರಕ: ನರಿಮನ್

ಮುಂಬೈ (ಪಿಟಿಐ): ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದಂತೆ ಕೊಲಿಜಿಯಂ ವ್ಯವಸ್ಥೆ ವಿರುದ್ಧ ವಾಗ್ದಾಳಿ ನಡೆಸಿರುವ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರನ್ನು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ಎಫ್.ನರಿಮನ್ ತರಾಟೆಗೆ ತೆಗೆದುಕೊಂಡಿದ್ದಾರೆ.

‘ಕೊಲಿಜಿಯಂ ಶಿಫಾರಸು ಮಾಡಿದ್ದ ನ್ಯಾಯಮೂರ್ತಿಗಳನ್ನು ಸರ್ಕಾರ ನೇಮಿಸದೇ ಇರುವುದು ಪ್ರಜಾಪ್ರಭುತ್ವಕ್ಕೆ ಮಾರಕವಾಗಿ ಪರಿಣಮಿಸುತ್ತದೆ’ ಎಂದು ಅವರು ಮುಂಬೈ ವಿಶ್ವವಿದ್ಯಾಲಯದಲ್ಲಿ ನಡೆದ ಮುಖ್ಯ ನ್ಯಾಯಮೂರ್ತಿ ಎಂ.ಸಿ.ಚಾಗ್ಲಾ ಸ್ಮಾರಕ ಉಪನ್ಯಾಸದಲ್ಲಿ ಹೇಳಿದರು.

ಸ್ವತಂತ್ರ ನ್ಯಾಯಾಂಗದ ಕೊನೆಯ ಭದ್ರಕೋಟೆ ಪತನವಾದರೆ, ದೇಶವು ‘ಹೊಸ ಕರಾಳ ಯುಗದ ಪ್ರಪಾತಕ್ಕೆ’ ಬೀಳುತ್ತದೆ ಎಂದು ಅವರು ಎಚ್ಚರಿಸಿದರು.

ಸ್ವತಂತ್ರ, ನಿರ್ಭೀತ ನ್ಯಾಯಮೂರ್ತಿಗಳನ್ನು ನೇಮಿಸದಿದ್ದರೆ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ ಏನಾಗಬಹುದು ಎಂದು ಅವರು ಕಳವಳ ವ್ಯಕ್ತಪಡಿಸಿದರು. ‘ಈ ಸಂಬಂಧ ಐವರು ವಿಶೇಷ ನ್ಯಾಯಮೂರ್ತಿಗಳ ಪೀಠವನ್ನು ರಚಿಸಬೇಕು. ಕೊಲಿಜಿಯಂ ಸರ್ಕಾರಕ್ಕೆ ಹೆಸರುಗಳನ್ನು ಕಳುಹಿಸಿದ 30 ದಿನಗಳ ಅವಧಿಯೊಳಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಸರ್ಕಾರ ಹೇಳುವುದು ಏನೂ ಇಲ್ಲವೆಂದು ಭಾವಿಸಬೇಕಾಗುತ್ತದೆ ಎಂದು ಪೀಠ ತೀರ್ಪು ನೀಡಬೇಕು’ ಎಂದು ಸಲಹೆ ನೀಡಿದರು.

‘ಕೊಲಿಜಿಯಂ ಶಿಫಾರಸನ್ನು ಕಡೆಗಣಿಸುವುದು ದೇಶದ ಪ್ರಜಾಪ್ರಭುತ್ವಕ್ಕೆ ಮಾರಕವಾಗುತ್ತದೆ. ನಿರ್ದಿಷ್ಟ ಕೊಲಿಜಿಯಂಗಾಗಿ ಕಾಯುವುದು ಮತ್ತು ಮುಂದಿನ ಕೊಲಿಜಿಯಂ ತನ್ನ ಮನಸ್ಸನ್ನು ಬದಲಿಸುತ್ತದೆ ಎಂದು ನಿರೀಕ್ಷಿಸುವುದೂ ಸರಿಯಲ್ಲ. ನ್ಯಾಯಮೂರ್ತಿಗಳ ನೇಮಕಾತಿಯು ನಿಗದಿತ ಅವಧಿಯೊಳಗೆ ನಡೆಯಬೇಕು’ ಎಂದರು.

ನರಿಮನ್ ಅವರು 2021ರ ಆಗಸ್ಟ್‌ವರೆಗೆ ಸುಪ್ರೀಂ ಕೋರ್ಟ್‌ನ ಕೊಲಿಜಿಯಂನ ಭಾಗವಾಗಿದ್ದರು.

ಪುಲ್ವಾಮಾ ದಾಳಿಯ ಹುತಾತ್ಮರಿಗೆ ನಮನ ಸಲ್ಲಿಸಿದ ರಾಹುಲ್ ಗಾಂಧಿ

ಅಂತಿಮ ಹಂತದಲ್ಲಿ ಭಾರತ್ ಜೋಡೊ ಯಾತ್ರೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಂಗ್ರೆಸ್‌ನ ‘ಭಾರತ್ ಜೋಡೊ ಯಾತ್ರೆ’ಯು ಅಂತಿಮ ಹಂತ ತಲುಪುತ್ತಿದ್ದು, ಇದೇ 30ರಂದು ಶ್ರೀನಗರದಲ್ಲಿ ಕೊನೆಗೊಳ್ಳಲಿದೆ.

ತಮಿಳುನಾಡಿನ ಕನ್ಯಾಕುಮಾರಿಯಲ್ಲಿ ಸೆಪ್ಟೆಂಬರ್ 7ರಂದು ಆರಂಭವಾದ ಯಾತ್ರೆಯು 12 ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಾಗಿದ್ದು, ಇದೇ 30ರಂದು ಶ್ರೀನಗರದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುವುದರೊಂದಿಗೆ ಅಂತ್ಯಗೊಳ್ಳಲಿದೆ.

2019ರ ಆಗಸ್ಟ್‌ನಲ್ಲಿ 370ನೇ ವಿಧಿಯನ್ನು ರದ್ದುಗೊಳಿಸಿದ ಬಳಿಕ ಕಾಶ್ಮೀರದಲ್ಲಿ ಯಾವುದೇ ಅಡೆತಡೆಯಿಲ್ಲದೆ ನಡೆಯುತ್ತಿರುವ ಮೊದಲ ರಾಜಕೀಯ ರ್‍ಯಾಲಿ ಇದಾಗಿದೆ.

ಭದ್ರತಾ ಲೋಪದ ಕಾರಣಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶುಕ್ರವಾರ ಮೊಟಕುಗೊಳಿಸಿದ್ದ ಯಾತ್ರೆಯು ಶನಿವಾರ ದಕ್ಷಿಣ ಕಾಶ್ಮೀರದ ಆವಂತಿಪುರದಿಂದ ಪುನರಾರಂಭವಾಯಿತು. ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಹಾಗೂ ಕಾಂಗ್ರೆಸ್‌ನ ಇತರ ನಾಯಕರು ಯಾತ್ರೆಯಲ್ಲಿ ರಾಹುಲ್ ಜತೆ ಹೆಜ್ಜೆ ಹಾಕಿದರು.

ಶ್ರೀನಗರ– ಜಮ್ಮು ರಾಷ್ಟ್ರೀಯ ಹೆದ್ದಾರಿ ಸಾಗುವ ಚುರ್ಸು ಎಂಬಲ್ಲಿ ಮೆಹಬೂಬಾ, ತನ್ನ ಮಗಳಾದ ಇಲ್ತಿಜಾ ಮುಫ್ತಿ ಹಾಗೂ ಇತರ ಮಹಿಳೆಯರೊಂದಿಗೆ ಯಾತ್ರೆಯಲ್ಲಿ ಪಾಲ್ಗೊಂಡರು.


ಕಾಶ್ಮೀರದ ಅನಂತನಾಗ್‌ನಲ್ಲಿ ಶನಿವಾರ ರಾಹುಲ್ ಗಾಂಧಿ ಅವರು ಪ್ರಿಯಾಂಕಾ ಗಾಂಧಿ ಜತೆಗೆ ಭಾರತ್ ಜೋಡೊ ಯಾತ್ರೆ ನಡೆಸಿದರು –ಎಎಫ್‌ಪಿ ಚಿತ್ರ

‘ರಾಹುಲ್ ಗಾಂಧಿ ಅವರ ಈ ಯಾತ್ರೆಯು ಕಾಶ್ಮೀರದಲ್ಲಿ ಶುದ್ಧ ಗಾಳಿ ಬೀಸುವಂತೆ ಮಾಡಿದೆ. 2019ರ ಬಳಿಕ ಕಾಶ್ಮೀರಿಗಳು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಮನೆಗಳಿಂದ ಹೊರಬಂದಿದ್ದು ಇದೇ ಮೊದಲು’ ಎಂದು ಮುಫ್ತಿ ಅವರು ಟ್ವೀಟ್ ಮಾಡಿದ್ದಾರೆ.

ಯಾತ್ರೆ ವಿರಾಮಕ್ಕೂ ಮುನ್ನ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸಹೋದರ ರಾಹುಲ್ ಜತೆ ಸೇರಿ ಹೆಜ್ಜೆ ಹಾಕಿದರು.

ಪುಲ್ವಾಮಾ ದಾಳಿಯ ಹುತಾತ್ಮರಿಗೆ ನಮನ: ಪುಲ್ವಾಮಾದ ಲೆಥ್‌ಪೋರಾದಲ್ಲಿ 2019ರ ಫೆಬ್ರುವರಿ 14ರಂದು ನಡೆದಿದ್ದ ಭಯೋತ್ಪದನಾ ದಾಳಿಯಲ್ಲಿ ಹುತಾತ್ಮರಾದ ಸಿಆರ್‌ಪಿಎಫ್‌ನ 40 ಯೋಧರಿಗೆ, ರಾಹುಲ್ ಗಾಂಧಿ ಇದೇ ವೇಳೆ ಪುಷ್ಪ ಗುಚ್ಛ ಅರ್ಪಿಸಿ ಗೌರವ ನಮನ ಸಲ್ಲಿಸಿದರು.

ಯಾತ್ರೆಯು ಭಾನುವಾರ ಪಂಥಾ ಚೌಕ್‌ನಿಂದ ಪುನರಾರಂಭ ಆಗಲಿದ್ದು, ದಾಲ್ ಸರೋವರದ ದಡದ ನೆಹರೂ ಪಾರ್ಕ್‌ವರೆಗೆ ಸಾಗಲಿದೆ. ಅಲ್ಲಿ ರಾಹುಲ್ ಅವರು ಸುದ್ದಿಗೋಷ್ಠಿ ನಡೆಸಲಿದ್ದಾರೆ.

ಸೂಕ್ತ ಭದ್ರತೆ; ಅಮಿತ್ ಶಾಗೆ ಖರ್ಗೆ ಪತ್ರ

ನವದೆಹಲಿ (ಪಿಟಿಐ): ರಾಹುಲ್ ಗಾಂಧಿ ನೇತೃತ್ವದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಸಾಗುತ್ತಿರುವ ಭಾರತ್ ಜೋಡೊ ಯಾತ್ರೆಗೆ ಸೂಕ್ತ ಭದ್ರತೆಯನ್ನು ನೀಡುವಂತೆ ಕೋರಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದಾರೆ.

‘ಮುಂದಿನ ಎರಡು ದಿನಗಳ ಯಾತ್ರೆ ಹಾಗೂ ಜನವರಿ 30ರಂದು ಶ್ರೀನಗರದಲ್ಲಿ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಭಾರಿ ಜನಸಂದಣಿಯನ್ನು ನಿರೀಕ್ಷಿಸುತ್ತಿದ್ದೇವೆ. ಕಾಂಗ್ರೆಸ್ ಮತ್ತು ಇತರೆ ರಾಜಕೀಯ ಪಕ್ಷಗಳ ಪ್ರಮುಖ ಮುಖಂಡರು ಇದರಲ್ಲಿ ಭಾಗವಹಿಸುತ್ತಿದ್ದಾರೆ’ ಎಂದು ಖರ್ಗೆ ಉಲ್ಲೇಖಿಸಿದ್ದಾರೆ.

‘ಈ ವಿಷಯದಲ್ಲಿ ತಾವು (ಅಮಿತ್ ಶಾ) ವೈಯಕ್ತಿಕವಾಗಿ ಮಧ್ಯ ಪ್ರವೇಶಿಸಿ ಭಾರತ್ ಜೋಡೊ ಯಾತ್ರೆಯ ಸಮಾರೋಪ ಸಮಾರಂಭಕ್ಕೆ ಸೂಕ್ತ ಭದ್ರತೆ ಒದಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಬೇಕು’ ಎಂದು ಖರ್ಗೆ ಮನವಿ ಮಾಡಿದ್ದಾರೆ.

ಕಾಂಗ್ರೆಸ್ ಮಹತ್ವದ ಪಾತ್ರ: ಜೈರಾಮ್ ರಮೇಶ್

2024ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ವಿರೋಧ ಪಕ್ಷಗಳ ಯಾವುದೇ ಮೈತ್ರಿಕೂಟ ರಚನೆಯಾದರೂ ಅಲ್ಲಿ ಕಾಂಗ್ರೆಸ್ ಮಹತ್ವದ ಪಾತ್ರವಹಿಸುತ್ತದೆ. ಏಕೆಂದರೆ ಬಿಜೆಪಿಗೆ ಎದುರಾಗಿ ದೇಶದಾದ್ಯಂತ ರಾಜಕೀಯ ಶಕ್ತಿ ಹೊಂದಿರುವ ಏಕೈಕ ಪಕ್ಷ ಕಾಂಗ್ರೆಸ್ ಆಗಿದೆ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಶನಿವಾರ ಪ್ರತಿಕ್ರಿಯಿಸಿದರು.

2029ರ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರತಿ ರಾಜ್ಯದಲ್ಲೂ ಸ್ವಂತವಾಗಿ ಹೋರಾಡಲು ಕಾಂಗ್ರೆಸ್ ತಯಾರಿ ನಡೆಸಬೇಕು ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

‘ಈ ವರ್ಷ ಗುಜರಾತಿನ ಪೋರಬಂದರ್‌ನಿಂದ ಅರುಣಾಚಲ ಪ್ರದೇಶದವರೆಗೆ ಮತ್ತೊಂದು ಯಾತ್ರೆ ಆರಂಭಿಸುವ ಕುರಿತು ಚರ್ಚೆ ನಡೆದರೆ ನಾನು ಅದನ್ನು ಬೆಂಬಲಿಸುತ್ತೇನೆ. ಆದರೆ ಈ ವಿಚಾರದಲ್ಲಿ ಪಕ್ಷ ಅಂತಿಮವಾಗಿ ನಿರ್ಧಾರ ತೆಗೆದುಕೊಳ್ಳುತ್ತದೆ’ ಎಂದು ಹೇಳಿದರು.

ಪಕ್ಷದ ಮಾಜಿ ನಾಯಕ ಗುಲಾಂ ನಬಿ ಆಜಾದ್ ‘ಮೀರ್ ಜಾಫರ್’ ಆಗುತ್ತಾರೆ ಎಂಬುದಾಗಿ ನಾನು ಎಂದಿಗೂ ಭಾವಿಸಿರಲಿಲ್ಲ ಎಂದು ಜೈರಾಮ್ ರಮೇಶ್ ದೂರಿದರು. ಜಮ್ಮು ಮತ್ತು ಕಾಶ್ಮೀರದಲ್ಲಿ ಕಾಂಗ್ರೆಸ್ ಮತಗಳನ್ನು ವಿಭಜಿಸಲು ಬಿಜೆಪಿಯು ಅವರನ್ನು ಬೆಂಬಲಿಸಿದೆ ಎಂದು ಅವರು ಆರೋಪಿಸಿದರು.

ಉಕ್ರೇನ್‌ನಿಂದ 14 ಮಂದಿ ಹತ್ಯೆ: ರಷ್ಯಾ ಆರೋಪ

ಕೀವ್ (ರಾಯಿಟರ್ಸ್): ‘ನಮ್ಮ ಹಿಡಿತದಲ್ಲಿರುವ ಪೂರ್ವ ಉಕ್ರೇನ್ ಪ್ರದೇಶದಲ್ಲಿನ ಆಸ್ಪತ್ರೆಯೊಂದರ ಮೇಲೆ ಉಕ್ರೇನ್‌ನ ಸೈನಿಕರು ಉದ್ದೇಶಪೂರ್ವಕವಾಗಿ ದಾಳಿ ನಡೆಸಿ 14 ಮಂದಿಯನ್ನು ಹತ್ಯೆ ಮಾಡಿದ್ದಾರೆ. ಘಟನೆಯಲ್ಲಿ ರೋಗಿಗಳು ಹಾಗೂ ವೈದ್ಯಕೀಯ ಸಿಬ್ಬಂದಿ ಸೇರಿದಂತೆ ಒಟ್ಟು 24 ಮಂದಿ ಗಾಯಗೊಂಡಿದ್ದಾರೆ’ ಎಂದು ರಷ್ಯಾ ಶನಿವಾರ ಆರೋಪಿಸಿದೆ.

‘ನೊವಾಯ್ದರ್‌ನಲ್ಲಿರುವ ಆಸ್ಪತ್ರೆ ಮೇಲೆ ಉಕ್ರೇನ್ ಯೋಧರು ಕ್ಷಿಪಣಿ ದಾಳಿ ನಡೆಸಿದ್ದಾರೆ. ಇದು ಅತ್ಯಂತ ಗಂಭೀರವಾದ ಯುದ್ಧ ಅಪರಾಧ ಎಂಬುದರಲ್ಲಿ ಅನುಮಾನವೇ ಇಲ್ಲ’ ಎಂದು ರಷ್ಯಾದ ರಕ್ಷಣಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

‘ಈ ಕೃತ್ಯಕ್ಕಾಗಿ ಯೋಜನೆ ರೂಪಿಸಿರುವವರು ಹಾಗೂ ಇದನ್ನು ಕಾರ್ಯಗತಗೊಳಿಸುವ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದವರನ್ನು ಪತ್ತೆಹಚ್ಚಲಾಗುತ್ತದೆ. ಅವರಿಗೆ ತಕ್ಕ ಶಿಕ್ಷೆ ಆಗಲಿದೆ’ ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆ ಹೇಳಿದೆ.

ರಷ್ಯಾದ ಆರೋಪದ ಕುರಿತು ಉಕ್ರೇನ್ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಸುಖೋಯ್, ಮಿರಾಜ್ ಪತನ

ಒಂದನೇ ಪುಟದಿಂದ...

ಎರಡೂ ಯುದ್ಧವಿಮಾನಗಳ ಅವಶೇಷಗಳು ಮಧ್ಯಪ್ರದೇಶದ ಮೊರೆನಾ ಜಿಲ್ಲೆಯ ಪಹಾರ್‌ಗಢ ಪ್ರದೇಶದಲ್ಲಿ, ಇನ್ನೂ ಕೆಲವು ಅವಶೇಷಗಳು ರಾಜಸ್ಥಾನದ ಭರತ್‌ಪುರ ಪ್ರದೇಶದಲ್ಲಿ ಪತ್ತೆಯಾಗಿವೆ ಎಂದು ಮೊರೆನಾ ಜಿಲ್ಲಾಧಿಕಾರಿ ಅಂಕಿತ್ ಆಸ್ಥಾನಾ ಹೇಳಿದ್ದಾರೆ.

ಐಎಎಫ್‌ನ ಗ್ವಾಲಿಯರ್ ವಾಯುನೆಲೆಯಲ್ಲಿ ಸುಖೋಯ್ ಹಾಗೂ ಮಿರಾಜ್ ಯುದ್ಧವಿಮಾನಗಳ ತಂಡಗಳಿವೆ. ಇಲ್ಲಿಂದ ಎರಡೂ ಯುದ್ಧ ವಿಮಾನಗಳು ಹಾರಾಟ ತರಬೇತಿಗೆ ತೆರಳಿದ್ದವು. ಎರಡೂ ವಿಮಾನಗಳ ದತ್ತಾಂಶ ದಾಖಲೆಗಳು, ಅಪಘಾತಕ್ಕೆ ಕಾರಣವಾಗಿರುವ ಅಂಶಗಳ ಮೇಲೆ ಬೆಳಕು ಚೆಲ್ಲಲಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಆಗಸದಲ್ಲಿ ಡಿಕ್ಕಿ ನಡೆದಿದೆಯೇ ಎಂಬ ಆಯಾಮದಲ್ಲಿಯೂ ತನಿಖೆ ನಡೆಯುವ ಸಾಧ್ಯತೆಯಿದೆ. ಮೊರೆನಾ ಸಮೀಪ ಮಿರಾಜ್ ವಿಮಾನ ಪತನವಾಗಿದ್ದು, ಸುಖೋಯ್ ವಿಮಾನವು ಬಹುಶಃ, ಕೆಲವು ನಿಮಿಷದ ಹಾರಾಟದ ಬಳಿಕ ಭರತ್‌ಪುರ ಸಮೀಪ ಪತನವಾಗಿರಬಹುದು ಎನ್ನಲಾಗಿದೆ.

ವಿಂಗ್ ಕಮಾಂಡರ್ ಹನುಮಂತರಾವ್ ಸಾರಥಿ ಅವರ ಸಾವಿನಿಂದ ಆಘಾತವಾಗಿದೆ. ಅವರ ಕುಟುಂಬದ ಜೊತೆ ನಾವಿದ್ದೇವೆ
ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಹಾರಾಟದ ವೇಳೆ ವಿಮಾನಗಳ ನಡುವೆ ಡಿಕ್ಕಿ ಸಂಭವಿಸುವುದು ಹೊಸತಲ್ಲ. 70 ವರ್ಷಗಳಲ್ಲಿ 64 ವಿಮಾನಗಳು ಪತನವಾಗಿ, 39 ಪೈಲಟ್‌ಗಳು ಮೃತಪಟ್ಟಿದ್ದಾರೆ
ಅಂಚಿತ್ ಗುಪ್ತಾ, ವೈಮಾನಿಕ ತಜ್ಞ

ಫ್ರಾನ್ಸ್‌ನ ಡಾಸೋ ಏವಿಯೇಷನ್ ಸಂಸ್ಥೆಯ ಮಿರಾಜ್ ಒಂದು ಸೀಟಿನ ಯುದ್ಧವಿಮಾನವಾಗಿದ್ದು, ರಷ್ಯಾ ನಿರ್ಮಿತ ಸುಖೋಯ್ ಎರಡು ಸೀಟರ್‌ನ ಯುದ್ಧ ವಿಮಾನವಾಗಿದೆ.

ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಅವರು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಘಟನೆಯ ಮಾಹಿತಿ ನೀಡಿದರು. ಹನುಮಂತರಾವ್ ಸಾರಥಿ ನಿಧನಕ್ಕೆ ರಾಜನಾಥ್ ಸಿಂಗ್ ಹಾಗೂ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

ವಿಮಾನ, ಹೆಲಿಕಾಪ್ಟರ್ ಪತನ: ನಿಲ್ಲದ ಸರಣಿ

- ಕಳೆದ ಜುಲೈನಲ್ಲಿ ರಾಜಸ್ಥಾನದ ಬಾಡ್‌ಮೇರ್‌ನಲ್ಲಿ ಮಿಗ್–21 ತರಬೇತಿ ವಿಮಾನ ಪತನವಾಗಿ ಇಬ್ಬರು ಪೈಲಟ್‌ಗಳು ಮೃತಪಟ್ಟಿದ್ದರು
- ಸೇನಾಪಡೆಯ ಸುಧಾರಿತ ಲಘು ಹೆಲಿಕಾಪ್ಟರ್ (ಎಎಲ್‌ಎಚ್) ಅರುಣಾಚಲ ಪ್ರದೇಶದ ಟುಟಿಂಗ್ ಎಂಬಲ್ಲಿ ಕಳೆದ ಅಕ್ಟೋಬರ್‌ನಲ್ಲಿ ಪತನವಾಗಿತ್ತು
- 2021ರ ಡಿ.8ರಂದು ತಮಿಳುನಾಡಿನಲ್ಲಿ ಹೆಲಿಕಾಪ್ಟರ್ ಅಪಘಾತದಲ್ಲಿ ಅಂದಿನ ಸಿಡಿಎಸ್ ಬಿಪಿನ್ ರಾವತ್, ಅವರ ಪತ್ನಿ ಮಧುಲಿಕಾ ಸೇರಿ 14 ಜನ ಮೃತಪಟ್ಟಿದ್ದರು
- 2021ರ ಆ.3ರಂದು ಪಠಾಣ್‌ಕೋಟ್‌ನ ರಂಜಿತ್ ಸಾಗರ್ ಜಲಾಶಯದಲ್ಲಿ ಸುಧಾರಿತ ಲಘು ಹೆಲಿಕಾಪ್ಟರ್ ಪತನವಾಗಿತ್ತು
- 2019ರ ಅಕ್ಟೋಬರ್‌ನಲ್ಲಿ, ಉತ್ತರ ಕಮಾಂಡ್‌ನ ಅಂದಿನ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ರಣಬೀರ್ ಸಿಂಗ್ ಹಾಗೂ ಹಿರಿಯ ಅಧಿಕಾರಿಗಳು ಸಂಚರಿಸುತ್ತಿದ್ದ ಧ್ರುವ್ ಹೆಲಿಕಾಪ್ಟರ್ ಜಮ್ಮು ಕಾಶ್ಮೀರದ ಪೂಂಚ್‌ನಲ್ಲಿ ತುರ್ತು ಭೂಸ್ಪರ್ಶದ ವೇಳೆ ಅಪಘಾತಕ್ಕೀಡಾಗಿತ್ತು
- 2017ರಿಂದ 2021ರ ಅವಧಿಯಲ್ಲಿ 15 ಸೇನಾ ಹೆಲಿಕಾಪ್ಟರ್‌ಗಳು ಪತನವಾಗಿ 31 ಮಂದಿ ಮೃಪಟ್ಟಿದ್ದಾರೆ.
- ಅಪಘಾತ ಪ್ರಕರಣಗಳು ಕ್ರಮೇಣ ಕಡಿಮೆಯಾಗಿವೆ ಎಂದು ರಕ್ಷಣಾ ಇಲಾಖೆಯ ದತ್ತಾಂಶಗಳು ಹೇಳುತ್ತವೆ. 2021–22ರಲ್ಲಿ 50 ವರ್ಷಗಳಲ್ಲೇ ಕಡಿಮೆ ಅವಘಡಗಳು ವರದಿಯಾಗಿವೆ
- ಕಳೆದ ಐದು ವರ್ಷಗಳಲ್ಲಿ ಹೆಲಿಕಾಪ್ಟರ್ ಮತ್ತು ವಿಮಾನ ಅವಘಡಗಳಲ್ಲಿ 42 ರಕ್ಷಣಾ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ರಕ್ಷಣಾ ಖಾತೆ ರಾಜ್ಯ ಸಚಿವ ಅಜಯ್ ಭಟ್ ಅವರು ರಾಜ್ಯಸಭೆಗೆ ಕಳೆದ ಮಾರ್ಚ್‌ನಲ್ಲಿ ಮಾಹಿತಿ ನೀಡಿದ್ದರು

ಆರ್ಟ್ ಆಫ್ ಲಿವಿಂಗ್‌ನಲ್ಲಿ ‘ಶ್ರೀ ಶ್ರೀ ಶಿಕ್ಷಣ ಪ್ರಶಸ್ತಿ’ ಪ್ರದಾನ

‘ಶಿಕ್ಷಣವೇ ಅಭಿವೃದ್ಧಿಯ ಬುನಾದಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣವೇ ದೇಶದ ಅಭಿವೃದ್ಧಿಯನ್ನು ನಿರ್ಧರಿಸುವ ಪ್ರಮುಖ ಅಂಶ. ಶಿಕ್ಷಣವು ಮಕ್ಕಳಲ್ಲಿ ಮಾನವೀಯತೆ, ಸ್ಪರ್ಧಾತ್ಮಕ ಗುಣ, ಪ್ರಾಮಾಣಿಕತೆ ಮತ್ತು ಸಂತೋಷದಿಂದ ಬದುಕುವುದನ್ನು ಕಲಿಸುತ್ತದೆ ಎಂದು ಕೇಂದ್ರ ಶಿಕ್ಷಣ ಖಾತೆ ರಾಜ್ಯ ಸಚಿವ ರಾಜ್ ಕುಮಾರ್ ರಂಜನ್ ಸಿಂಗ್ ಹೇಳಿದರು.

ಆರ್ಟ್ ಆಫ್ ಲಿವಿಂಗ್‌ನಲ್ಲಿ ಶನಿವಾರ ನಡೆದ ‘ಶ್ರೀ ಶ್ರೀ ಶಿಕ್ಷಣ ಪ್ರಶಸ್ತಿ’ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ‘ನಮ್ಮ ದೇಶದ ಭೌಗೋಳಿಕ ಮತ್ತು ಸಾಂಸ್ಕೃತಿಕ ವೈವಿಧ್ಯವನ್ನು ಆಧರಿಸಿದ ಶಿಕ್ಷಣ ಕ್ರಮವನ್ನು ರೂಪಿಸುವುದು ಬಹಳ ಮುಖ್ಯ. ಅದನ್ನು ಗುರಿಯಾಗಿಟ್ಟುಕೊಂಡು ಹೊಸ ಶಿಕ್ಷಣ ನೀತಿ–2020 ಜಾರಿಗೆ ತರಲಾಗಿದೆ. ಶ್ರೀ ಶ್ರೀ ರವಿಶಂಕರ್ ವಿದ್ಯಾ ಮಂದಿರ ಟ್ರಸ್ಟ್ ನೀತಿಗೆ ಪೂರಕವಾಗಿ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ, ‘ಸ್ವಾತಂತ್ರ್ಯ, ನಿರ್ಭೀತಿ, ಮುಕ್ತವಾದ ವಾತಾವರಣ ಮತ್ತು ಅರಿತಿರುವ ಸಂಗತಿಗಳನ್ನು ಹಂಚಿಕೊಳ್ಳುವುದು ನಮ್ಮ ಶಿಕ್ಷಣ ವ್ಯವಸ್ಥೆಯ ಭಾಗವಾಗಬೇಕು’ ಎಂದು ಹೇಳಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ಮಾತನಾಡಿ, ‘ಭಾರತೀಯ ಸಂಸ್ಕೃತಿಯ ತಳಹದಿಯ ಮೇಲೆ ಶಿಕ್ಷಣ ವ್ಯವಸ್ಥೆ ರೂಪಿಸಬೇಕು ಎಂಬುದು ಸ್ವಾಮಿ ವಿವೇಕಾನಂದ ಅವರ ಆಶಯವಾಗಿತ್ತು. ರವಿಶಂಕರ್ ಗುರೂಜಿಯವರು ಅವರ ಸಂಸ್ಥೆಯ ಶಾಲೆಗಳಲ್ಲಿ ಅಂತಹ ಶಿಕ್ಷಣ ಕ್ರಮವನ್ನು ಅಳವಡಿಸಿದ್ದಾರೆ. ಅದೇ ಮಾದರಿಯ ಶಿಕ್ಷಣ ಕ್ರಮ ಜಾರಿಗೊಳಿಸಲು ಹೊಸ ಶಿಕ್ಷಣ ನೀತಿ ರೂಪಿಸಲಾಗಿದೆ’ ಎಂದರು.

ಸರ್ಕಾರ ಕೂಡ ತಲುಪಲಾಗದಂತಹ ಗುಡ್ಡಗಾಡು ಪ್ರದೇಶಗಳಲ್ಲಿ ಗುರೂಜಿಯವರು ಶಾಲೆಗಳನ್ನು ಆರಂಭಿಸಿದ್ದಾರೆ ಎಂದು ಶ್ಲಾಘಿಸಿದರು.

ಡ್ರೇಪರ್ ಅಸೋಸಿಯೇಟ್‌ನ ಸಂಸ್ಥಾಪಕ ಟಿಮ್ ಡ್ರೇಪರ್ ಉಪಸ್ಥಿತರಿದ್ದರು. ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯುತ್ತಮ ಕೆಲಸ ಮಾಡಿರುವ ಶಿಕ್ಷಣ ಸಂಸ್ಥೆಗಳು ಹಾಗೂ ಶಿಕ್ಷಕರಿಗೆ ರಾಷ್ಟ್ರೀಯ ಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶ್ರೀ ಶ್ರೀ ಶಿಕ್ಷಣ ಪ್ರಶಸ್ತಿ ಪುರಸ್ಕೃತ ಶಾಲೆಗಳು

- ಆರ್ಮಿ ಪಬ್ಲಿಕ್ ಸ್ಕೂಲ್, ಶಂಕರ ವಿಹಾರ, ದೆಹಲಿ ಕಂಟೋನ್ಮೆಂಟ್
- ದಿ ಹೆರಿಟೇಜ್ ಸ್ಕೂಲ್, ಕೋಲ್ಕತ್ತ
- ಅಮಿಟಿ ಇಂಟರ್‌ನ್ಯಾಷನಲ್ ಸ್ಕೂಲ್, ಗುರುಗ್ರಾಮ
- ಡೆಲ್ಲಿ ಪಬ್ಲಿಕ್ ಸ್ಕೂಲ್– ಬೆಂಗಳೂರು ಉತ್ತರ
- ಮೌಂಟು ಅಬು ಪಬ್ಲಿಕ್ ಸ್ಕೂಲ್, ರೋಹಿಣಿ, ನವದೆಹಲಿ
- ಡಾ. ಗೀತಾ ಲಕ್ಷ್ಮಣ್, ಸಿಂಧಿ ಸ್ಕೂಲ್, ಹೆಬ್ಬಾಳ, ಬೆಂಗಳೂರು (ದಕ್ಷಿಣ ವಲಯ)
- ಸುನೀತಾ ಚಾಂದ್, ಡಿಎವಿ ಪಬ್ಲಿಕ್ ಸ್ಕೂಲ್, ಐರೋಲಿ, ನವಿ ಮುಂಬೈ (ಪಶ್ಚಿಮ ವಲಯ)

ಶ್ರೀ ಶ್ರೀ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ

- ಸಹನಾ, ವಿದ್ಯಾ ಭಾರತಿ ಚಿನ್ಮಯ ವಿದ್ಯಾಲಯ, ಜೆಮ್‌ಶೆಡ್‌ಪುರ (ಪೂರ್ವ ವಲಯ)
- ಪ್ರಿಯಾಂಕಾ ಯಾದವ್, ಕೆಐಟಿ, ಗುರುಗ್ರಾಮ (ಉತ್ತರ ವಲಯ)

ಸಮಗ್ರ ಶಿಕ್ಷಣಕ್ಕಾಗಿ ಶ್ರೀ ಶ್ರೀ ಪ್ರಶಸ್ತಿ

- ಶ್ರೀಮತಿ ಸುಲೋಚನಾದೇವಿ ಸಿಂಘಾನಿಯಾ ಶಾಲೆ, ಠಾಣೆ
- ಮೇಯೋ ಕಾಲೇಜ್, ಅಜ್ಮೀರ್
- **ವಿಶೇಷ ಪ್ರಶಸ್ತಿ:** ರಾಜೇಂದರ್ ಅಪ್ಪಾ ಸಾಹೇಬ್ ಕೋಲಿ, ಸರ್ಕಾರಿ ಪ್ರಾಥಮಿಕ ಶಾಲೆ, ಮಂಗಲ್‌ವಾಡಾ, ಸೊಲ್ಲಾಪುರ ಜಿಲ್ಲೆ.
- **ಶಿಕ್ಷಣದಲ್ಲಿ ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಕೊಡುಗೆಗಾಗಿ ಪ್ರಶಸ್ತಿ:** ಪೋಲ ಭಾಸ್ಕರ್, ಕಾಲೇಜು ಶಿಕ್ಷಣ ಆಯುಕ್ತ, ಆಂಧ್ರಪ್ರದೇಶ.

ಸಾಕ್ಷ್ಯಚಿತ್ರ: ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಂಬೈ: ಬಿಬಿಸಿ ನಿರ್ಮಿಸಿರುವ ‘ಇಂಡಿಯಾ: ದಿ ಮೋದಿ ಕ್ವೆಶ್ಚನ್’ ಸಾಕ್ಷ್ಯಚಿತ್ರವನ್ನು ಇಲ್ಲಿನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್ (ಟಿಸ್) ಆವರಣದಲ್ಲಿ ಪ್ರದರ್ಶಿಸುವುದನ್ನು ವಿರೋಧಿಸಿ ಬಿಜೆಪಿ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು. ಸಾಕ್ಷ್ಯಚಿತ್ರ ಪ್ರದರ್ಶಿಸುವುದಾಗಿ ‘ದಿ ಪ್ರೋಗ್ರೆಸಿವ್ ಸ್ಟೂಡೆಂಟ್ಸ್ ಫೋರಂ’ (ಪಿಎಸ್‌ಎಫ್) ಪ್ರಕಟಿಸಿತ್ತು.

ಪ್ರತಿಭಟನೆ ಹಾಗೂ ಭದ್ರತೆಯ ಕಾರಣಕ್ಕೆ, ಪ್ರೊಜೆಕ್ಟರ್‌ನಲ್ಲಿ ಸಾಕ್ಷ್ಯಚಿತ್ರ ಪ್ರದರ್ಶಿಸಲು ಸಾಧ್ಯವಾಗಲಿಲ್ಲ. ಆದರೆ, ಕೆಲವು ವಿದ್ಯಾರ್ಥಿಗಳು ಮೊಬೈಲ್ ಹಾಗೂ ಲ್ಯಾಪ್‌ಟಾಪ್‌ನಲ್ಲಿ ಚಿತ್ರ ವೀಕ್ಷಿಸಿದರು. ‘ಇದು ನಕಲಿ ಸಾಕ್ಷ್ಯಚಿತ್ರ, ಪೊಲೀಸರು ಕ್ರಮ ತೆಗೆದುಕೊಳ್ಳದಿದ್ದರೆ ನಾವೇ ಮಧ್ಯಪ್ರವೇಶಿಸುತ್ತೇವೆ’ ಎಂದು ಬಿಜೆಪಿಯ ಮುಂಬೈ ಘಟಕದ ಅಧ್ಯಕ್ಷ ಆಶಿಶ್ ಶೆಲಾರ್ ಅವರು ಹೇಳಿದ್ದಾರೆ.

ಪ್ರೆಸಿಡೆನ್ಸಿ ವಿ.ವಿಯಲ್ಲಿ ವಿದ್ಯುತ್ ಕಡಿತ: ಕೋಲ್ಕತ್ತದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಪ್ರದರ್ಶಿಸಲಾದ ಬಿಬಿಸಿ ಸಾಕ್ಷ್ಯಚಿತ್ರವನ್ನು 50ಕ್ಕೂ ಹೆಚ್ಚು ಮಂದಿ ವೀಕ್ಷಿಸಿದರು. ಆದರೆ ವಿಶ್ವವಿದ್ಯಾಲಯವು ವಿದ್ಯುತ್ ಪೂರೈಕೆ ಕಡಿತಗೊಳಿಸಿ ಅಡ್ಡಿಪಡಿಸಿದ್ದರಿಂದಪ್ರದರ್ಶನಸ್ಥಳವನ್ನುಬದಲಾಯಿಸಬೇಕಾಯಿತು ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ. ವಿದ್ಯಾರ್ಥಿಗಳು ಕ್ಯಾಂಪಸ್‌ನಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ಸಂಜೆ 6 ಗಂಟೆಯ ಹೊತ್ತಿಗೆ ವಿದ್ಯುತ್ ಪೂರೈಕೆ ಶುರುವಾದ ಬಳಿಕ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು.

ಪುಣೆಯ ಎಫ್‌ಟಿಐಐನಲ್ಲಿ ಪ್ರದರ್ಶನ: ಜನವರಿ 26ರಂದು ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶಿಸಿದ್ದಾಗಿ ಪುಣೆಯ ಫಿಲ್ಮ್ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್‌ನ (ಎಫ್‌ಟಿಐಐ) ವಿದ್ಯಾರ್ಥಿ ಸಂಘಟನೆ ಶನಿವಾರ ತಿಳಿಸಿದೆ.

ದೆಹಲಿ ವಿ.ವಿ ಗಲಾಟೆ ತನಿಖೆಗೆ ಸಮಿತಿ

ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶಿಸುವ ಕುರಿತಂತೆ ಶುಕ್ರವಾರ ಉಂಟಾದ ಗಲಾಟೆಯ ಬಗ್ಗೆ ತನಿಖೆ ನಡೆಸಲು ದೆಹಲಿ ವಿ.ವಿ. ಏಳು ಸದಸ್ಯರ ಸಮಿತಿ ರಚಿಸಿದೆ ಎಂದು ‘ಪಿಟಿಐ’ ವರದಿ ಮಾಡಿದೆ. ವಿಶ್ವವಿದ್ಯಾಲಯದ ಮುಖ್ಯ ಮೇಲ್ವಿಚಾರಕರಾದ ರಜಿನಿ ಅಬ್ಬಿ ಅವರ ನೇತೃತ್ವದ ಸಮಿತಿ ರಚಿಸಲಾಗಿದೆ. ವಿಶ್ವವಿದ್ಯಾಲಯದ ಕುಲಪತಿ ಯೋಗೇಶ್ ಸಿಂಗ್ ಅವರಿಗೆ ಸೋಮವಾರ ಸಂಜೆ 5 ಗಂಟೆಯ ಒಳಗೆ ವರದಿ ನೀಡಬೇಕು ಎಂದು ಸಮಿತಿಗೆ ಸೂಚನೆ ನೀಡಲಾಗಿದೆ.

‘ಮಹಿಳಾ ಸಬಲೀಕರಣ ಸುಧಾರಣೆಗೆ ಸಹಕಾರಿ’

ಪೀಣ್ಯ ದಾಸರಹಳ್ಳಿ: 'ಮಹಿಳೆಯರ ಸಬಲೀಕರಣದಿಂದ ಸಾಮಾಜಿಕ ಬದಲಾವಣೆಯ ಜತೆಗೆ ದೇಶದ ಪ್ರಗತಿ ಸಾಧ್ಯವಾಗಲಿದೆ' ಎಂದು ಸಂಸದ ಡಿ.ವಿ ಸದಾನಂದ ಗೌಡ ತಿಳಿಸಿದರು.

ಬಾಗಲಗುಂಟೆಯ ಎಂಇಐ ಆಟದ ಮೈದಾನದಲ್ಲಿ ಎನ್. ಲೋಕೇಶ್ ಗೌಡ ಆಯೋಜಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಮಾತೃಶ್ರೀ ದಿ. ಹೀರಾಬೆನ್ ಮೋದಿ ಅವರ ಸ್ಮರಣಾರ್ಥವಾಗಿ ಮಹಿಳಾ ಸಬಲೀಕರಣ ಕಾರ್ಯಕ್ರಮದಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳಿಗೆ ಸಹಾಯಧನ ವಿತರಿಸಿ ಮಾತನಾಡಿದರು.

'ರಾಷ್ಟ್ರ-ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದ ಸರ್ಕಾರಗಳ ಅಧಿಕಾರದಲ್ಲಿ ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಲಾಗಿದೆ. ಮುಂದುವರಿದ ಭಾಗವಾಗಿ ಮಹಿಳೆಯರ ಜೀವನ, ಆರ್ಥಿಕ ಮಟ್ಟ ಸುಧಾರಣೆ ನಿಟ್ಟಿನಲ್ಲಿ ಲೋಕೇಶ್ ಗೌಡ ಮಹಿಳಾ ಸ್ವಸಹಾಯ ಸಂಘಗಳಿಗೆ ಆರ್ಥಿಕ ನೆರವು ನೀಡಿ ಮನೆ–ಮನ, ಮಹಿಳೆಯರನ್ನು ಮುಟ್ಟುವಂಥ ಅರ್ಥಪೂರ್ಣ ಸಮಾಜಮುಖಿ ಕಾರ್ಯ ಮಾಡಿ ಇತರರಿಗೂ ಮಾದರಿಯಾಗಿದ್ದಾರೆ' ಎಂದು ಶ್ಲಾಘಿಸಿದರು.

ಚಿತ್ರದುರ್ಗದ ಶ್ರೀ ಗುರು ಪೀಠದ ಪೀಠಾಧ್ಯಕ್ಷರಾದ ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿ ಆಶೀರ್ವಚನ ನೀಡಿ, 'ಯಾವುದೇ ಸಮುದಾಯ, ದೇಶ ಅಭಿವೃದ್ಧಿ ಹೊಂದಬೇಕಾದರೆ ಮಹಿಳೆಯರ ಆರ್ಥಿಕ ಸಬಲೀಕರಣ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಇದನ್ನು ಮನಗಂಡು ಲೋಕೇಶ್ ಗೌಡ ಅವರು ನೂರಾರು ಮಹಿಳಾ ಸಂಘಗಳ ಸಾವಿರಾರು ಮಹಿಳೆಯರಿಗೆ ಸಹಾಯಧನ ನೀಡುವ ಜತೆಗೆ ಶ್ರಮಿಕ ವರ್ಗ ಚಾಲಕರಿಗೆ ಉಚಿತ ಅಪಘಾತ ವಿಮೆ ಮಾಡಿಸಿ ಸಮವಸ್ತ್ರ ವಿತರಿಸಿದ್ದಾರೆ' ಎಂದರು.

ಮಾಜಿಶಾಸಕ ಎಸ್.ಮುನಿರಾಜು ಮಾತನಾಡಿದರು. ದಾಸರಹಳ್ಳಿ ಮಂಡಲ ಬಿಜೆಪಿ ಅಧ್ಯಕ್ಷ ಎನ್. ಲೋಕೇಶ್ ಗೌಡ, 'ರಾಜ್ಯದಾದ್ಯಂತ ವೀರೇಂದ್ರ ಹೆಗ್ಗಡೆ ಅವರ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳ ಪ್ರೇರಣೆಯಿಂದ ಮಹಿಳಾ ಸಂಘಗಳನ್ನು ನೋಂದಣಿ ಮಾಡಿಸಲಾಗಿದೆ. ಪ್ರಾರಂಭಿಕ ಕಾರ್ಯಚಟುವಟಿಕೆಗಳಿಗಾಗಿ ಆರ್ಥಿಕ ನೆರವು ನೀಡಲಾಗಿದ್ದು, ಸಂಘಗಳು ಸದ್ಬಳಕೆ ಮಾಡಿಕೊಳ್ಳಬೇಕು' ಎಂದರು.

ಬಿಜೆಪಿ ಮುಖಂಡರಾದ ಜಿ.ಮರಿಸ್ವಾಮಿ,ಟಿ.ಎಸ್ ಗಂಗರಾಜು, ರವಿಗೌಡ ಎಂ.ಎಸ್, ಗಿರೀಶ್, ಭರತ್ ಸೌಂದರ್ಯ, ಹನಶ್ರೀ ಮಂಜಣ್ಣ ಹಾಗೂ ಸಹಸ್ರಾರು ಮಹಿಳಾ ಸಂಘಗಳ ಸದಸ್ಯರು, ಸಾರ್ವಜನಿಕರು ಇದ್ದರು.


ಬಾಗಲಗುಂಟೆಯ ಎಂಇಐ ಆಟದ ಮೈದಾನದಲ್ಲಿ ಎನ್. ಲೋಕೇಶ್ ಗೌಡ ಆಯೋಜಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಮಾತೃಶ್ರೀ ದಿ. ಹೀರಾಬೆನ್ ಮೋದಿ ಅವರ ಸ್ಮರಣಾರ್ಥವಾಗಿ ಮಹಿಳಾ ಸಬಲೀಕರಣ ಕಾರ್ಯಕ್ರಮದಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳಿಗೆ ಸಂಸದ ಡಿ.ವಿ. ಸದಾನಂದ ಗೌಡ ಅವರು ಸಹಾಯಧನ ವಿತರಿಸಿದರು. ಚಿತ್ರದುರ್ಗದ ಶ್ರೀ ಗುರು ಪೀಠದ ಪೀಠಾಧ್ಯಕ್ಷರಾದ ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿ, ಮಾಜಿ ಶಾಸಕ ಎಸ್. ಮುನಿರಾಜು, ದಾಸರಹಳ್ಳಿ ಮಂಡಲ ಬಿಜೆಪಿ ಅಧ್ಯಕ್ಷ ಎನ್. ಲೋಕೇಶ್ ಮುಂತಾದವರಿದ್ದರು.

‘ಜೋಶಿಮಠ ಭೂ ಕುಸಿತಕ್ಕೆ ಮಿತಿ ಮೀರಿದ ನಿರ್ಮಾಣವೇ ಕಾರಣ’

ನವದೆಹಲಿ (ಪಿಟಿಐ): ‘ಅಭಿವೃದ್ಧಿಯ ಹೆಸರಿನಲ್ಲಿ ಮಿತಿ ಮೀರಿದ ಹಾಗೂ ಸೂಕ್ತ ಯೋಜನೆಯಿಲ್ಲದ ನಿರ್ಮಾಣ ಕಾಮಗಾರಿಗಳನ್ನು ಕೈಗೊಂಡಿದ್ದೇ ಜೋಶಿಮಠ ಭೂ ಕುಸಿತಕ್ಕೆ ಕಾರಣ’ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸ್ವದೇಶಿ ಜಾಗರಣ್ ಮಂಚ್ (ಎಸ್‌ಜೆಎಂ) ಶನಿವಾರ ಹಮ್ಮಿಕೊಂಡಿದ್ದ ಸಂವಾದದಲ್ಲಿ ಪಾಲ್ಗೊಂಡಿದ್ದ ತಜ್ಞರು, ಹಿಮಾಲಯ ಶ್ರೇಣಿಯನ್ನು ಪರಿಸರ ಸೂಕ್ಷ್ಮ ವಲಯವೆಂದು ಘೋಷಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

‘ಗುಡ್ಡಗಾಡು ಪ್ರದೇಶಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ನಿರ್ಮಾಣ ಚಟುವಟಿಕೆಗಳಿಗೆ ಕಡಿವಾಣ ಹಾಕದೆ ಇದ್ದರೆ ನೈನಿತಾಲ್, ಮಸೂರಿ ಹಾಗೂ ಇತರ ಪ್ರದೇಶಗಳಲ್ಲೂ ಜೋಶಿಮಠದಲ್ಲಿ ಉದ್ಭವಿಸಿರುವ ಪರಿಸ್ಥಿತಿ ತಲೆದೋರಬಹುದು’ ಎಂದು ಎಚ್ಚರಿಸಿದ್ದಾರೆ.

‘ಚಾರ್‌ಧಾಮ್ ರಸ್ತೆ ವಿಸ್ತರಣೆ ಯೋಜನೆಯ ಮೇಲೆ ನಿಯಂತ್ರಣ ಹೇರಬೇಕು. ಆ ಮೂಲಕ ಭೂ ಭಾಗಕ್ಕೆ ಉಂಟಾಗಬಹುದಾದ ಹಾನಿಯನ್ನು ತಗ್ಗಿಸಬೇಕು. ಜೊತೆಗೆ ಚಾರ್‌ಧಾಮ್ ರೈಲ್ವೆ ಯೋಜನೆಯ ಕುರಿತು ಮರುಪರಿಶೀಲನೆ ನಡೆಸಬೇಕು’ ಎಂದು ಆಗ್ರಹಿಸಿದ್ದಾರೆ.

ಅಗ್ನಿ ದುರಂತ: ವೈದ್ಯ ದಂಪತಿ ಸೇರಿ 5 ಸಾವು

ಧನಬಾದ್, ಜಾರ್ಖಂಡ್ (ಪಿಟಿಐ): ಇಲ್ಲಿನ ನರ್ಸಿಂಗ್ ಹೋಂವೊಂದರಲ್ಲಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ ವೈದ್ಯ ದಂಪತಿ ಸೇರಿ ಐವರು ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ನರ್ಸಿಂಗ್ ಹೋಂನ ಮಾಲೀಕ ಡಾ. ವಿಕಾಸ್ ಹಜ್ರಾ, ಪತ್ನಿ ಡಾ. ಪ್ರೇಮಾ ಹಜ್ರಾ, ವಿಕಾಸ್ ಅವರ ಸೋದರಳಿಯ ಸೋಹನ್ ಖಮಾರಿ, ಮನೆಕೆಲಸದಾಕೆ ತಾರಾ ದೇವಿ, ಇನ್ನೊಬ್ಬರು ಮೃತಪಟ್ಟಿದ್ದಾರೆ ಎಂದಿದ್ದಾರೆ. ನರ್ಸಿಂಗ್ ಹೋಂನ ದಾಸ್ತಾನು ಕೊಠಡಿಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಅದರಿಂದ ಹೊಮ್ಮಿದ ಹೊಗೆಯಿಂದಾಗಿ ಐವರು ಉಸಿರುಗಟ್ಟಿ ಸಾವಿಗೀಡಾಗಿದ್ದಾರೆ ಎಂದಿದ್ದಾರೆ.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 29 ಜನವರಿ 2023

ಮಹಾತ್ಮನ ಕೊನೆಯ ದಿನ

ಎನ್. ಆರ್. ವಿಶುಕುಮಾರ್

ಅಂದು 1948ರ ಜನವರಿ 30. ನಸುಕಿನ 3.30ರ ಸಮಯ. ದೆಹಲಿಯ ಬಿರ್ಲಾ ಭವನದಲ್ಲಂತೂ ಪ್ರಶಾಂತ ವಾತಾವರಣ. ಮೈಕೊರೆಯುವ ಆ ಚಳಿಯಲ್ಲಿ, 78ರ ಇಳಿವಯಸ್ಸಿನ ಗಾಂಧೀಜಿ ಎಂದಿನಂತೆ ಬೆಳಿಗ್ಗೆ ಬೇಗ ಎದ್ದರು. ಪಕ್ಕದಲ್ಲಿಯೇ ಮಲಗಿದ್ದ ಹಿರಿಯ ಮೊಮ್ಮಗಳು ಅಭಾಳಿಗೆ ಎದ್ದೇಳುವಂತೆ ಹೇಳಿ, ತಾವು ಶೌಚಕ್ಕೆ ತೆರಳಿದರು. ಶೌಚ ಮುಗಿಸಿ ಬಂದು ಚಾಪೆಯ ಮೇಲೆ ಕುಳಿತು ಸ್ವಲ್ಪ ಹೊತ್ತು ಧ್ಯಾನಾಸಕ್ತರಾದರು. ಗಾಂಧೀಜಿಯ ಇನ್ನೊಬ್ಬ ಕಿರಿಯ ಮೊಮ್ಮಗಳು ಮನು ಬೆಳಗಿನ ಪ್ರಾರ್ಥನೆಗೆ ಸಿದ್ಧತೆ ಮಾಡಿದಳು. ಗಾಂಧೀಜಿ ತಮ್ಮ ಆಪ್ತ ಬಳಗದ ಜೊತೆ ಕುಳಿತು ವಿವಿಧ ಧರ್ಮಗಳಿಂದ ಆಯ್ದ ಕೆಲವು ಪ್ರಾರ್ಥನೆಗಳನ್ನು ಹಾಡಿದರು.

> ಗಾಂಧೀಜಿಯ ಹತ್ಯೆಯಾಗಿ ಈಗ 75 ವರ್ಷ. ಅಹಿಂಸೆಯ ಈ ಸಾಕಾರ ಮೂರ್ತಿ ಹಿಂಸೆಗೆ ಬಲಿಯಾದರೂ ಮನುಕುಲದ ಚರಿತ್ರೆಯಲ್ಲಿ ಬುದ್ಧ ಮತ್ತು ಏಸುಕ್ರಿಸ್ತರ ಸಾಲಿನಲ್ಲಿ ಶಾಶ್ವತ ತಾರೆಯಾಗಿ ಬೆಳಗುತ್ತಿದ್ದಾರೆ

ಪ್ರಾರ್ಥನೆ ಮುಗಿದ ಬಳಿಕ ಬಿಸಿನೀರಿಗೆ ತುಸು ಜೇನುತುಪ್ಪ, ನಿಂಬೆರಸ ಬೆರೆಸಿ ಮನು ಕೊಟ್ಟ ಪಾನೀಯವನ್ನು ಗಾಂಧೀಜಿ ಕುಡಿದರು. ಅವತ್ತಿನ ಬೆಳಗಿನ ಪ್ರಾರ್ಥನೆಗೆ ಅಭಾ ಬಾರದಿದ್ದನ್ನು ಗಮನಿಸಿದ್ದ ಗಾಂಧೀಜಿ ಗುಜರಾತಿ ಭಾಷೆಯಲ್ಲಿ 'ಪ್ರಾರ್ಥನೆ ಎನ್ನುವುದು ನಮ್ಮ ಆತ್ಮವನ್ನು ಸ್ವಚ್ಛಗೊಳಿಸುವ ಪೊರಕೆ. ಇಂಥ ಮಹತ್ವವುಳ್ಳ ಪ್ರಾರ್ಥನೆಗೆ ಅಭಾ ತಪ್ಪಿಸಿಕೊಳ್ಳುವುದು ನನಗೆ ನೋವು ತರುತ್ತಿದೆ. ಪ್ರಾರ್ಥನೆಗೆ ಬರುವುದು ಆಕೆಗೆ ಇಷ್ಟವಿಲ್ಲದಿದ್ದರೆ ನನ್ನನ್ನು ಬಿಟ್ಟು ಹೋಗಬಹುದು. ಇದು ನಮ್ಮಿಬ್ಬರಿಗೂ ಒಳ್ಳೆಯದು' ಎಂದು ಮನುಗೆ ಮೆಲುದನಿಯಲ್ಲಿ ಹೇಳಿದರು.

ಗಾಂಧೀಜಿಯನ್ನು ಭೇಟಿ ಮಾಡಲು ಬೆಳಿಗ್ಗೆ 6ಕ್ಕೆ ಆರ್.ಕೆ. ನೆಹರೂ ಅವರು ಬಂದಿದ್ದರು. ಅಂದು ಮಧ್ಯಾಹ್ನವೇ ಅಮೆರಿಕ ಪ್ರವಾಸಕ್ಕೆ ತೆರಳುತ್ತಿದ್ದ ಅವರಿಗೆ ಗಾಂಧೀಜಿ, 'ಬಡರಾಷ್ಟ್ರದ ಪ್ರತಿನಿಧಿಯಾಗಿ ಅಲ್ಲಿಗೆ ತೆರಳುತ್ತಿರುವ ನೀನು ಅಮೆರಿಕದಲ್ಲಿ ಸರಳತೆಯ ಜೀವನ ಮತ್ತು ನಡತೆಯನ್ನು ಪ್ರದರ್ಶಿಸಬೇಕು' ಎಂದು ಹಿತವಚನ ಹೇಳಿ, ಸಹಿ ಮಾಡಿದ ತಮ್ಮ ಭಾವಚಿತ್ರವನ್ನು ಆಕೆಗೆ ನೀಡಿ ಬೀಳ್ಕೊಟ್ಟಿದ್ದರು.

ಬಳಿಕ ಗಾಂಧೀಜಿಯವರಿಗೆ ಅವರ ಆಪ್ತ ಸಹಾಯಕರು ನಿತ್ಯದಂತೆ ಅರ್ಧಗಂಟೆ ಮಸಾಜ್ ಮಾಡಿದರು. ತುಸು ಹೊತ್ತಿನ ನಂತರ ಮನು, ಗಾಂಧೀಜಿಗೆ ಸ್ನಾನ ಮಾಡಿಸಿದರು. ಗಾಂಧೀಜಿಯವರ ಅಂತಿಮ ದಿನಗಳಲ್ಲಿ ಅವರ ಮೊಮ್ಮಕ್ಕಳಾದ ಅಭಾ ಮತ್ತು ಮನು ಅವರ ಪಾತ್ರ ಬಹಳ ಪ್ರಮುಖವಾಗಿತ್ತು. ಸ್ನಾನ ಮುಗಿಸಿ ಬಂದ ನಂತರ ಗಾಂಧೀಜಿ ತುಸು ಗೆಲುವಾಗಿದ್ದರು. ಮನು ಅವರನ್ನು ತೂಕದ ಯಂತ್ರದ ಮೇಲೆ ನಿಲ್ಲಿಸಿ ನೋಡಿದರು. ಗಾಂಧೀಜಿಯ ತೂಕದಲ್ಲಿ ಸ್ವಲ್ಪ ಏರಿಕೆಯಾಗಿತ್ತು. ಐದು ದಿನಗಳ ಉಪವಾಸ ಸತ್ಯಾಗ್ರಹದಲ್ಲಿ ಕಳೆದುಕೊಂಡಿದ್ದ ತೂಕದಲ್ಲಿ ಒಂದು ಕೆ.ಜಿ. ತೂಕ ಗಳಿಸಿ ಅವರು 49 ಕೆ.ಜಿ. ತೂಗಿದರು. ಬೆಳಿಗ್ಗೆ 9.30ಕ್ಕೆ ಉಪಾಹಾರ ಸೇವನೆಗೆ ಕುಳಿತರು. ವೈದ್ಯರ ಸಲಹೆ ಮೇರೆಗೆ ಗಾಂಧೀಜಿಯವರಿಗೆ ಬೇಯಿಸಿದ ತರಕಾರಿ, ಮೇಕೆ ಹಾಲು, ಟೊಮ್ಯಾಟೊ, ಕಿತ್ತಳೆ ಹಣ್ಣಿನ ರಸ, ಕ್ಯಾರೆಟ್ ರಸ ಇವೆಲ್ಲವನ್ನೂ ನೀಡಲಾಗುತ್ತಿತ್ತು.

ಬೆಳಿಗ್ಗೆ ಹೊತ್ತು ಏರುತ್ತಿದ್ದಂತೆ ಬಿರ್ಲಾ ಭವನದಲ್ಲಿ ಚಟುವಟಿಕೆಗಳು ಚುರುಕಾದವು. ರಾಜಕೀಯ ನಾಯಕರು, ಧಾರ್ಮಿಕ ಮುಖಂಡರು, ಜನಸಾಮಾನ್ಯರು, ಪತ್ರಕರ್ತರು ಗಾಂಧೀಜಿಯವರ ಭೇಟಿಗಾಗಿ ಬರತೊಡಗಿದರು. ಕೋಮು ಗಲಭೆಗಳಿಂದ ಕಂಗೆಟ್ಟಿದ್ದ ಗಾಂಧೀಜಿ ಜನಸಾಮಾನ್ಯರ ಭೇಟಿ ಮತ್ತು ಪ್ರಾರ್ಥನಾ ಸಭೆಗಳ ಮೂಲಕ ತಮ್ಮ ಮನಸ್ಸಿನ ದುಗುಡ ಕಡಿಮೆ ಮಾಡಿಕೊಳ್ಳಲು ಬಯಸುತ್ತಿದ್ದರು. ಹೀಗಾಗಿ ದಿನನಿತ್ಯ ಅವರ ಭೇಟಿಗಾಗಿ ಬರುವವರ ಸಂಖ್ಯೆ ಸಹಜವಾಗಿಯೇ ಹೆಚ್ಚಾಗುತ್ತಿತ್ತು.

ಗಾಂಧೀಜಿಯವರ ಅಂತಿಮ ದಿನಗಳಲ್ಲಿ ಅವರ ಬಳಿ ಇಬ್ಬರು ಆಪ್ತ ಕಾರ್ಯದರ್ಶಿಗಳಿದ್ದರು. ಒಬ್ಬರು ಅವರ ಹಿರಿಯ ಅತ್ಯಾಪ್ತ ಕಾರ್ಯದರ್ಶಿ ಪ್ಯಾರೇಲಾಲ್ ನಯ್ಯರ್. ಇನ್ನೊಬ್ಬರು ಕಿರಿಯ ಆಪ್ತ ಕಾರ್ಯದರ್ಶಿ ವಿ.ಕಲ್ಯಾಣಂ. ಅತಿ ಗಹನವಾದ ರಾಜಕೀಯ ವಿಷಯಗಳನ್ನು ಪ್ಯಾರೇಲಾಲ್ ನಿರ್ವಹಿಸುತ್ತಿದ್ದರು. ಗಾಂಧೀಜಿಯವರ ಸಂದರ್ಶಕರ ಭೇಟಿ ನಿಗದಿಗೊಳಿಸುವುದು, ಪ್ರವಾಸ ಕಾರ್ಯಕ್ರಮ ಸಿದ್ಧಪಡಿಸುವುದು, ಕರಡು ಟಿಪ್ಪಣಿಗಳ ಬೆರಳಚ್ಚು ಮಾಡುವುದು ಹಾಗೂ ಇತರೆ ಕಾರ್ಯಗಳನ್ನು ಕಲ್ಯಾಣಂ ನಿರ್ವಹಿಸುತ್ತಿದ್ದರು.


ಬೆಳಕು ನಂದಿದ ಕ್ಷಣ... ಮಹಾತ್ಮನ ಪಾರ್ಥಿವ ಶರೀರದೊಂದಿಗೆ ಮನು, ಅಭಾ, ಪ್ಯಾರೇಲಾಲ್ ಮತ್ತಿತರರು ಚಿತ್ರಕೃಪೆ: ಗಾಂಧಿ ಆ್ಯನ್ ಇಲ್ಲಸ್ಟ್ರೇಟೆಡ್ ಬಯಾಗ್ರಫಿ ಕೃತಿ

ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಲು ಗಂಭೀರವಾಗಿ ಚಿಂತಿಸುತ್ತಿದ್ದ ಗಾಂಧೀಜಿ ಅದಕ್ಕಾಗಿ ಹಿಂದಿನ ದಿನ ಚರ್ಚಿಸಿ ಒಂದು ಕರಡನ್ನು ಸಿದ್ಧಪಡಿಸಿದ್ದರು. ಗ್ರಾಮೀಣ ಏಳಿಗೆಗೆ ಪೂರ್ಣವಾಗಿ ಶ್ರಮಿಸುವ ಲೋಕ ಸೇವಕ ಸಂಘ ಎನ್ನುವ ಹೆಸರಿನ ಹೊಸ ಸಂಘಟನೆಯನ್ನು ಸ್ಥಾಪಿಸುವ ಬಗ್ಗೆ ಜನವರಿ 29ರಂದು ತಯಾರಿಸಿದ್ದ ಕರಡು ಟಿಪ್ಪಣಿಯ ಮೇಲೆ ಅವರು ಕಣ್ಣಾಡಿಸಿದರು. ಅದನ್ನು ಪ್ಯಾರೇಲಾಲ್ ಅವರಿಗೆ ನೀಡಿ, ತಪ್ಪು ಒಪ್ಪುಗಳನ್ನು ಗಮನಿಸಿ ಶುದ್ಧ ಕರಡನ್ನು ಸಂಜೆಗೆ ನೀಡಬೇಕೆಂದು ಸೂಚನೆ ನೀಡಿದರು. ಹಾಗೆಯೇ ಫೆಬ್ರುವರಿ 2ರಂದು ವಾರ್ಧಾದಲ್ಲಿನ ತಮ್ಮ ಹಳೆಯ ಆಶ್ರಮ ಸೇವಾಗ್ರಾಮಕ್ಕೆ ಭೇಟಿ ನೀಡುವ ಬಗ್ಗೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಕಲ್ಯಾಣಂ ಅವರಿಗೆ ಸೂಚಿಸಿದರು.

ಹದಿನೈದು ದಿನಗಳ ಹಿಂದಷ್ಟೇ ದೆಹಲಿಯ ಕೋಮು ಗಲಭೆ ನಿಯಂತ್ರಿಸಲು ಒತ್ತಾಯಿಸಿ ಐದು ದಿನಗಳ ಕಾಲ ಉಪವಾಸ ಕೈಗೊಂಡು ನಿತ್ರಾಣಗೊಂಡಿದ್ದ ಗಾಂಧೀಜಿಯವರ ದೇಹ ಹೆಚ್ಚು ವಿಶ್ರಾಂತಿ ಬಯಸುತ್ತಿತ್ತು. ಕೊಂಚ ವಿಶ್ರಾಂತಿಯ ನಂತರ ಗಾಂಧೀಜಿ ಬಿರ್ಲಾ ಭವನದ ಹುಲ್ಲುಹಾಸಿನ ಮೇಲೆ ಚಾರ್ಪಾಯ್ ಹಾಕಿಕೊಂಡು ತುಸು ಬಿಸಿಲು ಕಾಯಿಸಿಕೊಂಡರು. ಕೆಲವು ಮುಸ್ಲಿಂ ಮುಖಂಡರು ಮಧ್ಯಾಹ್ನ 12.30ರ ಸುಮಾರಿಗೆ ಬಂದು ಭೇಟಿಯಾದರು. 'ದೆಹಲಿ ಗಲಭೆಗಳನ್ನು ನಿಯಂತ್ರಿಸಲು ನಾವು ಎಲ್ಲ ರೀತಿಯ ಸಹಕಾರ ನೀಡುತ್ತೇವೆ. ಆ ಬಗ್ಗೆ ತಾವು ಮತ್ತೆ ಮತ್ತೆ ಚಿಂತಿಸುವ ಅಗತ್ಯವಿಲ್ಲ' ಎನ್ನುವ ಭರವಸೆಯನ್ನು ಅವರು ಗಾಂಧೀಜಿಗೆ ನೀಡಿದರು.

ಅಮೆರಿಕದ 'ಲೈಫ್' ನಿಯತಕಾಲಿಕದ ಖ್ಯಾತ ಛಾಯಾಗ್ರಾಹಕಿ, ಪತ್ರಕರ್ತೆ ಮಾರ್ಗರೇಟ್ ಬರ್ಕ್‌ವೈಟ್ ಮಧ್ಯಾಹ್ನ 2ರ ಸುಮಾರಿಗೆ ಗಾಂಧೀಜಿಯ ಸಂದರ್ಶನಕ್ಕೆ ಬಂದಿದ್ದರು. ಸಂದರ್ಶನದ ನಡುವೆ ಆಕೆ, 'ಗಾಂಧೀಜಿ ಹಿಂದೊಮ್ಮೆ ನೀವು 125 ವರ್ಷ ಬದುಕಬೇಕೆಂದು ಹೇಳಿದ್ದಿರಿ. ಆ ರೀತಿ ನಿಮಗೆ ಏಕೆ ಅನಿಸಿತು' ಎಂದು ಕೇಳಿದರು. ಈ ಪ್ರಶ್ನೆಗೆ ಗಾಂಧೀಜಿಯ ಉತ್ತರ ಆಕೆಯನ್ನು ಚಕಿತಗೊಳಿಸಿತು. 'ನನಗೀಗ ಆ ಆಸೆ ಉಳಿದಿಲ್ಲ. ಜಗತ್ತಿನಲ್ಲಿ ಇತ್ತೀಚೆಗೆ ನಡೆಯುತ್ತಿರುವ ಘಟನೆಗಳನ್ನು ನೋಡಿದರೆ ನಾನು ಈ ಕತ್ತಲೆಯಲ್ಲಿ ಬಹಳ ಕಾಲ ಬದುಕಲು ಇಚ್ಛಿಸುವುದಿಲ್ಲ' ಎಂದು ಗಾಂಧೀಜಿ ಉತ್ತರಿಸಿದ್ದರು. ಗಾಂಧೀಜಿ ತಮ್ಮ ಅಂತಿಮ ದಿನಗಳಲ್ಲಿ, ಈ ರೀತಿ ಹೆಚ್ಚು ಕಾಲ ಬದುಕುವ ಆಸೆ ತನಗಿಲ್ಲ ಎನ್ನುವ ಮನೋ ಇಂಗಿತವನ್ನು ಹಲವಾರು ವೇದಿಕೆಗಳಲ್ಲಿ ಮತ್ತು ಪ್ರಾರ್ಥನಾ ಸಭೆಗಳಲ್ಲಿ ಪದೇ ಪದೇ ಹೇಳುತ್ತಲೇ ಇದ್ದರು.

ಹತ್ತು ದಿನಗಳ ಹಿಂದಷ್ಟೇ, ಜನವರಿ 20ರಂದು, ಪ್ರಾರ್ಥನಾ ಸಭೆಯಲ್ಲಿ ಬಾಂಬ್ ಎಸೆಯುವ ಮೂಲಕ ಗಾಂಧೀಜಿಯವರನ್ನು ಹತ್ಯೆ ಮಾಡುವ ವಿಫಲ ಪ್ರಯತ್ನವೂ ನಡೆದಿತ್ತು. ಮದನಲಾಲ್ ಎನ್ನುವ ಪಂಜಾಬ್‌ನ ನಿರಾಶ್ರಿತ ಗಾಂಧೀಜಿಯ ಕಡೆಗೆ ಕೈಬಾಂಬ್ ಎಸೆದಿದ್ದ. ಅದು ಗೋಡೆಗೆ ತಗುಲಿ ಗೋಡೆ ಬಿರುಕು ಬಿಟ್ಟಿತ್ತು. ಈ ಘಟನೆಯಿಂದ ಗಾಂಧೀಜಿ ಸ್ವಲ್ಪವೂ ವಿಚಲಿತರಾಗಿರಲಿಲ್ಲ. ಘಟನೆಯ ನಂತರ ಗೃಹ ಸಚಿವ ಪಟೇಲ್ ಅವರ ಸೂಚನೆಯ ಮೇರೆಗೆ ಹಿರಿಯ ಪೊಲೀಸ್ ಅಧಿಕಾರಿಗಳು ರಕ್ಷಣೆ ನೀಡುವ ಬಗ್ಗೆ ಚರ್ಚಿಸಲು ಬಂದಾಗ, 'ನನ್ನ ಜೀವನ ದೇವರ ಕೈಯಲ್ಲಿದೆ. ನಾನು ಸಾಯಲೇಬೇಕೆಂದು ದೈವ ನಿರ್ಧರಿತವಾಗಿದ್ದರೆ ನಿಮ್ಮ ಯಾವ ಮುಂಜಾಗ್ರತಾ ರಕ್ಷಣಾ ಕ್ರಮಗಳೂ ನನ್ನನ್ನು ಉಳಿಸಲಾರವು. ನನ್ನ ಸ್ವಾತಂತ್ರ್ಯವನ್ನು ಹರಣ ಮಾಡಿಕೊಂಡು ನಾನು ಜೀವರಕ್ಷಣೆ ಬಯಸುವುದಿಲ್ಲ' ಎಂದೇ ಕಟುವಾಗಿ ಉತ್ತರಿಸಿದ್ದರು. ಆದರೂ ಬಿರ್ಲಾ ಭವನದಲ್ಲಿ ಅನುಮಾನಾಸ್ಪದ ವ್ಯಕ್ತಿಗಳ ಮೇಲೆ ಕಣ್ಣಿಡುವಂತೆ ಮಫ್ತಿಯಲ್ಲಿರುತ್ತಿದ್ದ ಪೊಲೀಸರಿಗೆ ಗೃಹ ಇಲಾಖೆ ಸೂಚನೆ ನೀಡಿತ್ತು.

ಇಂಥ ವಿಷಮಯ ಪರಿಸ್ಥಿತಿಯಲ್ಲಿ ಗಾಂಧೀಜಿ ತಮ್ಮ ಅಂತಿಮ ದಿನಗಳನ್ನು ಕಳೆಯುತ್ತಿದ್ದರು. ಜನವರಿ 30ರ ಸಂಜೆ ನಾಲ್ಕಕ್ಕೆ ಗೃಹ ಸಚಿವ ಪಟೇಲ್ ಅವರ ಭೇಟಿ ನಿಗದಿಯಾಗಿತ್ತು. ಸರ್ದಾರ್ ಪಟೇಲ್ ಸಮಯಕ್ಕೆ ಸರಿಯಾಗಿ ತಮ್ಮ ಮಗಳು ಮನುಬೆನ್ ಜೊತೆಗೂಡಿ ಗಾಂಧೀಜಿಯವರ ಭೇಟಿಗೆ ಬಂದರು. ಮಾಧ್ಯಮಗಳಲ್ಲಿ ಪದೇ ಪದೇ ಪ್ರಸ್ತಾಪವಾಗುತ್ತಿದ್ದ ನೆಹರೂ ಮತ್ತು ಪಟೇಲ್ ನಡುವಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಉತ್ಸುಕರಾಗಿದ್ದ ಗಾಂಧೀಜಿ, ಪಟೇಲರ ಜೊತೆ ಅಂದು ಗಹನ ಚರ್ಚೆ ನಡೆಸಲಿದ್ದಾರೆ ಎನ್ನುವ ಗುಸು ಗುಸು ಸುದ್ದಿ ಹಬ್ಬಿತ್ತು. ಗಾಂಧೀಜಿ ನೂಲುತ್ತಲೇ ಪಟೇಲರ ಜೊತೆ ಚರ್ಚೆ ನಡೆಸುತ್ತಿದ್ದರು. ಸಮಯ ಐದು ಗಂಟೆ ಕಳೆದರೂ ಅವರಿಬ್ಬರ ನಡುವೆ ಚರ್ಚೆ ನಡೆದೇ ಇತ್ತು.

11ನೇ ಪುಟಕ್ಕೆ...


ಕಲೆ: ಎಂ.ಎಸ್. ಮೂರ್ತಿ


ತುಂಗಾನದಿ ತೀರದಲ್ಲಿ ಸಂಗೀತದ ಹೊನಲು


ಸಂಗೀತದ ಅಲೆ

ತುಂಗಾ ತೀರದಿ...

ಶ್ರೀಮತಿ ದೇವಿ

'ದಾಸರೆಂದರೆ ಪುರಂದರ ದಾಸರಯ್ಯಾ' ಎಂದು ಅವರ ಗುರುಗಳಾದ ವ್ಯಾಸರಾಯರಿಂದಲೇ ಹೊಗಳಿಸಿಕೊಂಡ ಪುರಂದರ ದಾಸರು, 'ಕರ್ನಾಟಕ ಸಂಗೀತ ಪಿತಾಮಹ' ಎಂದು ಹೆಸರಾದವರು. ಅವರು ನಡೆದಾಡಿದ, ತಮ್ಮ ಕಾವ್ಯ ರಚನೆಗೆ ತಾಣವನ್ನಾಗಿ ಮಾಡಿಕೊಂಡ ಹಂಪಿಯ 'ಪುರಂದರ ಮಂಟಪ'ದಲ್ಲಿ ತುಂಬಾ ವಿಶೇಷವಾಗಿ ನಡೆದ ಅವರ ಆರಾಧನೆಯಲ್ಲಿ ಪಾಲ್ಗೊಳ್ಳುವ ಅವಕಾಶವು ದೊರಕಿತು.

ಪ್ರತಿವರ್ಷ ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ನಡೆಯುವ ಆಚರಣೆಯನ್ನು ಈ ಬಾರಿ ಮೊತ್ತಮೊದಲ ಬಾರಿಗೆ ಪುರಂದರ ಮಂಟಪದಲ್ಲಿ ನಡೆಯುವಂತೆ ಮಾಡಿದ್ದರ ಹಿಂದೆ, ರಾಜವಂಶಜರಾದ ಕೃಷ್ಣದೇವರಾಯರ ಹಿರಿದಾದ ಬಯಕೆ ಇತ್ತು. ಬೆಳಗ್ಗೆ 8ರಿಂದ ಸಂಜೆ 4ರವರೆಗೆ ಪುರಂದರ ಮಂಟಪದ ಮುಂಭಾಗದಲ್ಲಿ ಮತ್ತು ಸಂಜೆ 4ರಿಂದ ರಾತ್ರಿಯವರೆಗೆ ವಿಜಯ ವಿಠಲ ದೇವಸ್ಥಾನದ ಆವರಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಕರ್ನಾಟಕಿ ಸಂಗೀತದೊಂದಿಗೆ ಹಿಂದೂಸ್ತಾನಿ ಸಂಗೀತವೂ ಮೇಳೈಸಿದ್ದು ತುಂಬಾ ವಿಶೇಷವಾಗಿತ್ತು.


ರಾಜವಂಶಜರಾದ ಕೃಷ್ಣದೇವರಾಯ

ವಿಜಯನಗರ ಸಾಮ್ರಾಜ್ಯದ ಕಳೆದುಹೋದ ವೈಭವವನ್ನು ನೆನೆಯುತ್ತಾ ದುಃಖಿಸುವುದನ್ನು ಬದಿಗಿಟ್ಟು, ಆ ಸಂಭ್ರಮವನ್ನು ಮತ್ತೆ ನೆನಪಿಸಿಕೊಂಡು ನಾಡು-ನುಡಿ-ಸಂಸ್ಕೃತಿಗಳ ಕುರಿತು ಕೆಲಸವನ್ನು ಆರಂಭಿಸುವುದು ರಾಯರ ಉದ್ದೇಶವಾಗಿದ್ದು, ಅದಕ್ಕಾಗಿ ಅವರು ತುಂಗಭದ್ರೆಯ ತೀರದಲ್ಲಿ, ದಾಸಶ್ರೇಷ್ಠರು ಓಡಾಡಿದ ಸ್ಥಳದಲ್ಲೇ ಅವರನ್ನು ನೆನಪಿಸುವ ಕಾರ್ಯವನ್ನು ಆಯೋಜಿಸಿದ್ದರು. ಕರ್ನಾಟಕಿ ಸಂಗೀತಗಾರರೂ, ವಿದ್ವಾಂಸರೂ ಆದ ಪ್ರೊ.ಅರವಿಂದ ಹೆಬ್ಬಾರ್ ಅವರು ಕಾರ್ಯಕ್ರಮದ ರೂವಾರಿಗಳಾಗಿದ್ದರು

ಪೂರ್ವದಲ್ಲಿ ಸೂರ್ಯ ಮೂಡುತ್ತಿದ್ದಂತೆ ಬಗೆಬಗೆಯ ವಾದ್ಯಗಳೊಂದಿಗೆ, ಸಂಭ್ರಮದ ಕಲಾವಿದರ ಗಡಣವೇ ಅಲ್ಲಿ ನೆರೆದಿತ್ತು. ಮಂಟಪದ ಹೊರಗೆ ಅಲಂಕೃತವಾದ ವೇದಿಕೆಯ ಮುಂಭಾಗದಲ್ಲಿ ಪುರಂದರ ದಾಸರ ಆರಾಧನೆಯ ಕಾರ್ಯಕ್ರಮ ಆರಂಭವಾದದ್ದು ಗೋಷ್ಠಿ ಗಾಯನದೊಂದಿಗೆ. ಇದಕ್ಕಾಗಿ ಕರ್ನಾಟಕದ ವಿವಿಧ ಕಡೆಗಳಿಂದ ಕರ್ನಾಟಕಿ ಮತ್ತು ಹಿಂದೂಸ್ತಾನಿ ಹಾಡುಗಾರ/ವಾದಕರನ್ನು ಆಹ್ವಾನಿಸಲಾಗಿತ್ತು.

13ನೇ ಪುಟಕ್ಕೆ...

'ಕೃತಕ ಬುದ್ಧಿ'ಯ ಕಾಲದಲ್ಲಿ ಸೃಜನಶೀಲತೆಯ ಅಗ್ನಿದಿವ್ಯ!

> ಮನುಷ್ಯನ ಸೃಷ್ಟಿಕ್ರಿಯೆಯ ಅನನ್ಯತೆ ಇರುವುದು ಕಲಾಸೃಷ್ಟಿಯ ಹದದಲ್ಲಿ. ಕೃತಕ ಬುದ್ಧಿಮತ್ತೆಗೆ ಇರುವ ಕೊರತೆಯೂ ಅದೊಂದೇ..

ದಯಾನಂದ


ಜನಾಂಗೀಯ ತಾರತಮ್ಯ, ವರ್ಣಭೇದ, ಅಶ್ಲೀಲ ಮನೋಭಾವ, ಸೈಬರ್ ವಂಚನೆ, ತಪ್ಪು ಮಾಹಿತಿ - ಹೀಗೆ ಸಾಲುಸಾಲು ಕೆಟ್ಟ ಕಾರಣಗಳಿಗೆ ಸುದ್ದಿಯಾಗಿರುವ ಕೃತಕ ಬುದ್ಧಿಮತ್ತೆ (Artificial Intelligence - AI) Chat GPT ಈಗ ಟ್ರೆಂಡ್‌ನಲ್ಲಿದೆ. ಈ AI ತಾಣ, ಚಾಟ್ ಮೂಲಕ ನೀವು ಕೊಡುವ ಇನ್‌ಪುಟ್ ಕಮಾಂಡ್‌ಗೆ ಕೆಲವೇ ಸೆಕೆಂಡ್‌ಗಳಲ್ಲಿ ನಿಮಗೆ ಏನು ಬೇಕೋ ಯಾವ ಸ್ವರೂಪದಲ್ಲಿ ಬೇಕೋ ಅದನ್ನು (ಹೇಗೆ ಬೇಕೋ ಹಾಗೆ ಎನ್ನುವ ಒಂದನ್ನು ಬಿಟ್ಟು) ಬರೆದುಕೊಡುತ್ತದೆ. ನಾಲ್ಕು ಪ್ಯಾರಾ ಪದ್ಯದಿಂದ ಹಿಡಿದು ನೂರಾರು ಪದಗಳ ಲೇಖನ, ಸಣ್ಣಕತೆಗಳನ್ನೂ ಈ AI ಫಟಾಫಟ್ ಬರೆದು ಬಿಸಾಕುತ್ತದೆ. 'ಇದೇ ಕವಿತೆ, ಕತೆ, ಲೇಖನ ಬರೆಯಲು ಶುರು ಮಾಡಿದರೆ ನಮ್ಮ ಕತೆ ಏನು' ಎಂದು ಕವಿಕುಲ ಕಳವಳಿಸುವ ಕಾಲ ಈಗ ಶುರುವಾಗಿದೆ!

ಬರೆಯಲು ಕೂರುವ ಜಾಗ, ಬೆಳಕು, ಕರ್ಟನ್‌ನ ಬಣ್ಣ, ಹವಾಮಾನ, ಮೂಡ್, ಸಿಗರೇಟ್; ಇವೆಲ್ಲಾ ಸಿಕ್ಕರೂ ಕೊನೆಗೆ ಕಾಡುವ ರೈಟರ್ಸ್ ಬ್ಲಾಕ್ - ಇದ್ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದೆ, ಟಾಸ್ಕ್ ಕೇಳಿಸಿಕೊಂಡ ಹೊಸ ಇಂಟರ್ನ್‌ನ ಹಾಗೆ ಹೇಳಿದ ಅಸೈನ್‌ಮೆಂಟ್ ಬರೆದು ಮುಗಿಸುತ್ತದೆ ಈ AI. ಕರ್ಸರ್ ಬ್ಲಿಂಕ್ ಆಗುವ ಕೆಲವು ಮೈಕ್ರೊ ಸೆಕೆಂಡ್‌ಗಳನ್ನು ಬಿಟ್ಟರೆ ಯೋಚಿಸಲೂ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಕಮಾಂಡ್‌ಗೆ ತಕ್ಕ ಹಾಗೆ ಒಂದು ಕಂಟೆಂಟ್ ಬರೆದುಕೊಟ್ಟು ನಿಮ್ಮ ಮುಂದಿನ ಅಪ್ಪಣೆಗಾಗಿ ಕಾದು ನಿಲ್ಲುತ್ತದೆ.

ಸ್ಮಾರ್ಟ್‌ಫೋನ್‌ಗಳು ಹೆಚ್ಚಾಗಿರುವ ಈ ಕಾಲದಲ್ಲಿ AI ಬಳಕೆ ಹೊಸದೇನಲ್ಲ. ಮನೆಯ ಬಹುತೇಕ ಕೆಲಸವನ್ನು ಅದೇ ಮಾಡುವಂತೆ ಮನೆಯನ್ನು ಸ್ಮಾರ್ಟ್‌ಹೋಮ್ ಮಾಡಿಕೊಂಡಿರುವ ಸ್ಮಾರ್ಟ್ ಮಂದಿಯಿಂದ ಹಿಡಿದು, AI ಎಂದರೆ ಏನು ಎಂದು ಗೊತ್ತಿಲ್ಲದೆಯೂ ಗೂಗಲ್ ಮ್ಯಾಪ್ ಬಳಸುವ ಜನರವರೆಗೂ ಇದೀಗ ಸರ್ವಾಂತರ್ಯಾಮಿ. ರೋಬೋಟಿಕ್ ಎಂದು ಕರೆಯುವ ಯಾವೆಲ್ಲಾ ಉಪಕರಣ, ಸೇವೆಗಳನ್ನು ನಾವಿಂದು ಬಳಸುತ್ತಿದ್ದೇವೆಯೋ ಅಲ್ಲೆಲ್ಲಾ ಈಗಾಗಲೇ AI ನಮಗರಿವಿಲ್ಲದೆಯೇ ಕೆಲಸ ಮಾಡುತ್ತಿದೆ. ನಿಮ್ಮ ಕೈಯಲ್ಲೊಂದು ಸ್ಮಾರ್ಟ್‌ಫೋನ್ ಇದೆ ಎಂದಾದರೆ ನೀವೂ ಅದರ ಫಲಾನುಭವಿಗಳೇ.

ಈ ತಂತ್ರಜ್ಞಾನಕ್ಕೆ ಅರ್ಧ ಶತಮಾನಕ್ಕೂ ಹೆಚ್ಚಿನ ಇತಿಹಾಸವಿದೆ. ಕಂಪ್ಯೂಟರ್ ಎಂಬ ಮಾಂತ್ರಿಕ ಉಪಕರಣ ಆವಿಷ್ಕಾರಗೊಂಡಾಗಲೇ AI ಅದರ ಗರ್ಭದಲ್ಲಿ ಮೂಡಿಯಾಗಿತ್ತು. ಮನುಷ್ಯ ತನ್ನ ಬುದ್ಧಿಯನ್ನು ತಂತ್ರಜ್ಞಾನಕ್ಕೆ ಅಳವಡಿಸುವ ಈ ಕೆಲಸಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಅಬಾಕಸ್‌ನಿಂದ ಟ್ಯಾಬ್ಯುಲೇಟಿಂಗ್ ಮಷೀನ್‌ಗಳವರೆಗೆ ಈ ತಂತ್ರಜ್ಞಾನ ಸಾಗಿಬರಲು ಇದು ಸವೆಸಿರುವ ದಾರಿ ಅಂದಾಜು 4000 ವರ್ಷ! ಅದರ ಮುಂದಿನ ಶತಮಾನಗಳಲ್ಲಿ ನಡೆದಿರುವ ತಾಂತ್ರಿಕ ಆವಿಷ್ಕಾರ AIನ ಮಿದುಳನ್ನು ಸೂಕ್ಷ್ಮವಾಗಿಸುತ್ತಲೇ ಬಂದಿದೆ.

ಗೂಗಲ್ ಅಸಿಸ್ಟಂಟ್ ಬಳಸಿ ಅದರ ಅತಿ-ಮಿತಿಗಳನ್ನು ಅರಿತಿರುವವರಿಗೆ ಈ Chat GPTಯ ಬರಹದ ಕೆಲಸ ಹೆಚ್ಚೇನೂ ಅಚ್ಚರಿ ತರದಿರಬಹುದು. ಟೆಕ್‌ಸ್ಯಾವಿಗಳಿಗಂತೂ ಇದೊಂದು ಹೊಸ ವಿಷಯವೇ ಅಲ್ಲ. ಆದರೆ, ಹೇಳಿದಂತೆ ಕೇಳಿ ರಿಸಲ್ಟ್ ಕೊಡುವ ಅಸಿಸ್ಟಂಟ್ ಕೆಲಸದ ಬದಲಿಗೆ, ವಿಷಯ ಹೇಳಿದರೆ ಅದರ ಬಗ್ಗೆ ಬರೆದುಕೊಡುವ ಈ ತಾಣವು, ಬರಹ ಹಾಗೂ ಬರಹದ ಸುತ್ತ ಕೆಲಸ ಮಾಡುವ ವಲಯದಲ್ಲಿರುವವರಿಗೆ ಕೊಂಚಮಟ್ಟಿಗೆ ಅಭದ್ರತೆಯನ್ನು ಹುಟ್ಟುಹಾಕುವ ದಾರಿಯಲ್ಲಿದೆ. ಇತ್ತೀಚೆಗೆ ಮಾರುಕಟ್ಟೆ ಸೃಷ್ಟಿಸಿಕೊಳ್ಳುತ್ತಿರುವ ಕಂಟೆಂಟ್ ರೈಟಿಂಗ್ ವಲಯದಲ್ಲಿನ ಉದ್ಯೋಗಗಳಿಗಂತೂ ಇದು ಕೆಲದಿನಗಳಲ್ಲೇ ಕಲ್ಲು ಹಾಕುವುದಂತೂ ನಿಜ.



12ನೇ ಪುಟಕ್ಕೆ...



ಬರ್ಲಿನ್‌ನ ಸಂಸತ್ ಭವನ

ಹಲವು ಆಕರ್ಷಣೆಗಳ ಬರ್ಲಿನ್

ಪ್ರವಾಸ

ಜಿ. ನಾಗೇಂದ್ರ ಕಾವೂರು

ಯುರೋಪ್ ರಾಷ್ಟ್ರಗಳಲ್ಲಿನ ನಗರಗಳ ಪೈಕಿ ಬರ್ಲಿನ್ ನಗರದ ಇತಿಹಾಸವು ತುಂಬಾ ರೋಚಕವಾಗಿದೆ. ಪೂರ್ವ ಮತ್ತು ಪಶ್ಚಿಮ ಜರ್ಮನಿ ಎಂದು ಇಬ್ಭಾಗ ಮಾಡಿದ್ದ ಬರ್ಲಿನ್ ಗೋಡೆಯ ಒಂದು ಬದಿಯಲ್ಲಿ ಬಡತನ ನಿರುದ್ಯೋಗ ತಾಂಡವವಾಡುತ್ತಿದ್ದರೆ, ಮತ್ತೊಂದು ಬದಿಯಲ್ಲಿ ಶರವೇಗದಲ್ಲಿ ನಡೆಯುತ್ತಿತ್ತು ಅಭಿವೃದ್ಧಿ ಚಟುವಟಿಕೆ. ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಜೀವದ ಹಂಗುತೊರೆದು ಗೋಡೆ ದಾಟುವ ಸಮಯದಲ್ಲಿ ಭದ್ರತಾ ಸಿಬ್ಬಂದಿಯ ಗುಂಡಿಗೆ ಬಲಿಯಾದವರು ಸಾವಿರಾರು ಪ್ರಜೆಗಳು. ರೊಚ್ಚಿಗೆದ್ದ ಪೂರ್ವ ಜರ್ಮನಿಯ ಪ್ರಜೆಗಳು ತಮ್ಮ ಅಭಿವೃದ್ಧಿಗೆ ಅಡ್ಡವಾಗಿದ್ದ ಬರ್ಲಿನ್ ಗೋಡೆಯನ್ನು ಕೆಡವಿದ್ದನ್ನು ನಾವು ಇತಿಹಾಸದ ಪಠ್ಯಗಳಲ್ಲಿ ಓದಿರುತ್ತೇವೆ.

ಬರ್ಲಿನ್ ನಗರವನ್ನು ವೀಕ್ಷಿಸುವ ಆಸೆ ನನ್ನ ಮಗನ ಮೂಲಕ ಸಾಕಾರಗೊಂಡಿತು. ನಾನು ಒಂದು ತಿಂಗಳು ನೆದರ್ಲೆಂಡ್ಸ್‌ನಲ್ಲಿದ್ದು, ಯುರೋಪ್ ರಾಷ್ಟ್ರಗಳ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿದೆ. ಬರ್ಲಿನ್ ನಗರದ ಮೂರು ದಿನಗಳ ಪ್ರವಾಸ ಸದಾ ನೆನಪಿನಲ್ಲಿ ಉಳಿಯುವಂತದ್ದು.

ಅಲೆಕ್ಸಾಂಡರ್ ಪ್ಲಾಜಾ: ಬರ್ಲಿನ್ ನಗರದ ಜನದಟ್ಟಣೆಯುಳ್ಳ ಹಾಗೂ ಹಲವು ಆಕರ್ಷಣೆಗಳನ್ನು ಹೊಂದಿರುವ ಕೇಂದ್ರ ಪ್ರದೇಶ ಅಲೆಕ್ಸಾಂಡರ್ ಪ್ಲಾಜಾ. ಬರ್ಲಿನ್ ನಗರದಲ್ಲಿ ನಾವೆಲ್ಲೇ ಇದ್ದರೂ ನಮಗೆ ಬರ್ಲಿನ್ ಟೆಲಿವಿಷನ್ ಟವರ್ ಕಾಣುತ್ತದೆ. 368 ಮೀಟರ್ ಎತ್ತರವುಳ್ಳ, ನಗರದ ಅತಿ ಎತ್ತರದ ಟವರ್ ಇದಾಗಿದೆ. 1960ರ ದಶಕದಲ್ಲಿ ನಿರ್ಮಿಸಲಾದ ಟವರ್ ಮೇಲಿರುವ ಪ್ರವಾಸಿಗರ ವೀಕ್ಷಣಾ ಗ್ಯಾಲರಿಯಿಂದ ಬರ್ಲಿನ್ ನಗರದ ಸೌಂದರ್ಯವನ್ನು ಕಣ್ತುಂಬಿಕೊಳ್ಳಬಹುದು. ನಗರ ವೀಕ್ಷಣೆಗೆಂದೇ ಮೀಸಲಾಗಿರುವ ಹಾಫ್ ಆನ್-ಹಾಫ್ ಆಫ್ ಬಸ್ಸುಗಳು ಇಲ್ಲಿಂದಲೇ ಪ್ರಾರಂಭವಾಗುತ್ತವೆ.

ಎರಡನೇ ಮಹಾಯುದ್ಧದ ಸಮಯದಲ್ಲಿ ಅತ್ಯಂತ ಹೆಚ್ಚು ಹಾನಿಗೊಳಗಾಗಿದ್ದ ಈ ಪ್ರದೇಶವನ್ನು ಮರುಸ್ಥಾಪಿಸಲಾಗಿದೆ. ಹಾನಿಗೊಳಗಾದ ಕೆಲವು ಕುರುಹುಗಳು ಈಗಲೂ ನಮಗೆ ಕಾಣಲು ಸಿಗುತ್ತವೆ. ಜೆಂಡರ್‌ಮನ್ ಮಾರ್ಕೆಟ್ ಪ್ರದೇಶದಲ್ಲಿ ಅಡ್ಡಾಡಿದರೆ ಬರ್ಲಿನ್ ನಗರದ 18 ಮತ್ತು 19ನೇ ಶತಮಾನದ ಕಟ್ಟಡಗಳ ಆಕರ್ಷಕ ವಾಸ್ತು ಶೈಲಿಯನ್ನು ಕಣ್ತುಂಬಿಕೊಳ್ಳಬಹುದು. ಇಲ್ಲಿರುವ ಮೂರು ಹೆಗ್ಗುರುತುಗಳಾದ ಫ್ರೆಂಚ್ ಕ್ಯಾಥೆಡ್ರಲ್, ಜರ್ಮನ್ ಕ್ಯಾಥೆಡ್ರಲ್ ಹಾಗೂ ಕಾನ್ಸರ್ಟ್ ಹೌಸ್ ಕಟ್ಟಡಗಳು, ಅವುಗಳ ಭವ್ಯ ಗುಮ್ಮಟಗಳು ಎಂಥವರನ್ನೂ ಮಂತ್ರಮುಗ್ಧರನ್ನಾಗಿಸುತ್ತವೆ. ಕವಿ ಫ್ರೆಡರಿಕ್ ಷಿಲ್ಲರ್‌ನ ಭವ್ಯ ಪ್ರತಿಮೆಯನ್ನೂ ನಾವಿಲ್ಲಿ ನೋಡಬಹುದು.

ಬರ್ಲಿನ್ ಗೋಡೆ: ಎರಡನೇ ಮಹಾಯುದ್ಧದ ನಂತರ ಜರ್ಮನಿ ದೇಶವು ಪೂರ್ವ ಜರ್ಮನಿ ಮತ್ತು ಪಶ್ಚಿಮ ಜರ್ಮನಿಗಳಾಗಿ ಇಬ್ಭಾಗವಾಯಿತು. ರಾಜಧಾನಿ ಬರ್ಲಿನ್ ನಗರವನ್ನೂ ಇಬ್ಭಾಗ ಮಾಡಲಾಯಿತು. ಪೂರ್ವ ಜರ್ಮನಿಯ ಸರ್ಕಾರ ಬರ್ಲಿನ್‌ನಲ್ಲಿ 106 ಕಿ.ಮೀ ಉದ್ದದ ಕಾಂಕ್ರೀಟ್ ಗೋಡೆಯನ್ನು ನಿರ್ಮಿಸಿತು. ಬರ್ಲಿನ್ ಗೋಡೆಯನ್ನು 1989ರಲ್ಲಿ ಭಾಗಶಃ ಕೆಡವಿ ಪೂರ್ವ ಮತ್ತು ಪಶ್ಚಿಮ ಜರ್ಮನಿಯನ್ನು ಒಂದುಗೂಡಿಸುವ ಕಾರ್ಯಕ್ಕೆ ನಾಂದಿ ಹಾಡಲಾಯಿತು.

ಪೂರ್ವ ಬರ್ಲಿನ್ ಮತ್ತು ಪಶ್ಚಿಮ ಬರ್ಲಿನ್ ನಡುವಿನ 'ವಾಲ್ ಕ್ರಾಸಿಂಗ್ ಪಾಯಿಂಟ್ ಚೆಕ್ ಪಾಯಿಂಟ್ ಚಾರ್ಲಿ' ಸಮೀಪವೇ ಇರುವ ಮ್ಯೂಸಿಯಂಗೆ ಭೇಟಿಯಿತ್ತಲ್ಲಿ, ಪೂರ್ವ ಬರ್ಲಿನ್‌ನಿಂದ ಪಶ್ಚಿಮ ಬರ್ಲಿನ್‌ಗೆ ಬರ್ಲಿನ್ ವಾಲ್ ಮೂಲಕ ತಪ್ಪಿಸಿಕೊಳ್ಳುವಾಗ ಸಾವನ್ನಪ್ಪಿದ ಜನರ ಕಥೆಗಳನ್ನು ಹಾಗೂ ಬರ್ಲಿನ್ ಗೋಡೆಯ ಇತಿಹಾಸವನ್ನು ತಿಳಿಯಬಹುದು.

ವಿಶ್ವದ ಅತಿದೊಡ್ಡ ತೆರೆದ ಗ್ಯಾಲರಿ ಎಂಬ ಖ್ಯಾತಿಗೆ ಪಾತ್ರವಾಗಿರುವ ಸುಮಾರು ಒಂದು ಮೈಲು ಉದ್ದದ ಅಖಂಡವಾದ ಗೋಡೆಯಿದು. ನೂರಾರು ಅಂತರರಾಷ್ಟ್ರೀಯ ಕಲಾವಿದರು ಒಟ್ಟಾಗಿ ಚಿತ್ರಿಸಿರುವ ಶೀತಲ ಸಮರದ ಅಂತ್ಯದ ಸಂತೋಷದಾಯಕ ಹಾಗೂ ಆಶಾವಾದತ್ವವನ್ನು ಪ್ರದರ್ಶಿಸುವ ವರ್ಣಚಿತ್ರಗಳನ್ನು ನಾವಿಲ್ಲಿ ನೋಡಬಹುದು.

1791ರಲ್ಲಿ ನಿರ್ಮಿಸಲಾದ ಬ್ರಾಂಡನ್‌ಬರ್ಗ್ ಗೇಟ್, ಬರ್ಲಿನ್ ನಗರದ ಅನೇಕ ಹಳೆಯ ದ್ವಾರಗಳಲ್ಲಿ ಒಂದಾಗಿದೆ. ಎರಡು ಸಾಲುಗಳಲ್ಲಿ ಎತ್ತರವಾದ ಡೋರಿಕ್ ಕಂಬಗಳಿಂದ ನಿರ್ಮಿಸಲಾಗಿರುವ ದ್ವಾರದ ಮೇಲ್ಗಡೆ ನಾಲ್ಕು ಕುದುರೆಗಳನ್ನು ಹೊಂದಿರುವ ರಥವಿದ್ದು, ರೋಮನ್ ದೇವತೆ ವಿಕ್ಟೋರಿಯಾ ರಥವನ್ನು ನಡೆಸುತ್ತಿರುವ ಬೃಹತ್ ಗಾತ್ರದ ಶಿಲ್ಪವಿದೆ. ಬರ್ಲಿನ್ ಗೋಡೆ ಅಸ್ತಿತ್ವದಲ್ಲಿದ್ದಾಗ ನಿರ್ಮಿಸಲಾದ ಈ ದ್ವಾರವು ಅಥೆನ್ಸ್ ನಗರದ ಅಕ್ರೋಪೊಲೀಸ್ ದ್ವಾರದ ವಾಸ್ತು ಶೈಲಿಯನ್ನು ಹೋಲುತ್ತದೆ. ಇದರ ಸಮೀಪದಲ್ಲೇ 60 ಲಕ್ಷ ಯಹೂದಿ ಸಂತ್ರಸ್ತರ ನೆನಪಿಗಾಗಿ ನಿರ್ಮಿಸಲಾಗಿರುವ 2,711 ಕಾಂಕ್ರೀಟ್ ಬ್ಲಾಕ್‌ಗಳ ಯಹೂದಿಯರ ಸ್ಮಾರಕವಿದೆ.

ಭವ್ಯತೆಯ ದ್ಯೋತಕ: ಬ್ರಾಂಡನ್‌ಬರ್ಗ್ ಗೇಟ್‌ನಿಂದ ಸ್ವಲ್ಪವೇ ದೂರದಲ್ಲಿ ಜರ್ಮನಿಯ ಸಂಸತ್ ಭವನ ರೇಕ್‌ಸ್ಟಾಗ್ ಕಟ್ಟಡವಿದೆ. ಜರ್ಮನಿಯ ಸಂಸತ್ ಇಲ್ಲಿಂದಲೇ ಕಾರ್ಯನಿರ್ವಹಿಸುತ್ತದೆ. ಸಭಾಂಗಣವನ್ನು ಪ್ರವೇಶಿಸಿದರೆ, ಸುಂದರ ಗಾಜಿನ ಗುಮ್ಮಟ ಆಕರ್ಷಿಸುತ್ತದೆ. ಇಲ್ಲಿಂದ ಸಂಸತ್ ಕಲಾಪವನ್ನು ಜನ ವೀಕ್ಷಿಸಬಹುದು ಹಾಗೂ ಬರ್ಲಿನ್ ನಗರದ ವಿಹಂಗಮ ನೋಟವನ್ನು ಆಸ್ವಾದಿಸಬಹುದು.

ಮ್ಯೂಸಿಯಂ ಐಲ್ಯಾಂಡ್!: ಬರ್ಲಿನ್ ನಗರದಲ್ಲಿ ಹಾದು ಹೋಗುವ ಸ್ಪ್ರೀ ನದಿಯಲ್ಲಿ ದೋಣಿಗಳ ಮೂಲಕ ನಗರ ದರ್ಶನ ಮಾಡಬಹುದು. ಸ್ಪ್ರೀ ನದಿ ನಗರದ ಮಧ್ಯದಲ್ಲಿ ಹಾದುಹೋಗುವಾಗ ಒಂದು ದ್ವೀಪವನ್ನು ಸೃಷ್ಟಿಸಿದೆ. ಈ ಪ್ರದೇಶವು ಬರ್ಲಿನ್ ಐಲ್ಯಾಂಡ್ ಎಂದೇ ಪ್ರಖ್ಯಾತವಾಗಿದೆ.

ಯುನೆಸ್ಕೊ ವಿಶ್ವ ಪರಂಪರೆಯ ತಾಣಗಳಲ್ಲಿ ಒಂದಾಗಿರುವ 15ನೇ ಶತಮಾನಕ್ಕೂ ಹಿಂದಿನ ಇತಿಹಾಸವನ್ನು ಹೊಂದಿರುವ ಎರಡು ಶೈಲಿಗಳ ಸಂಗಮದ ಬರ್ಲಿನ್ ಕ್ಯಾಥೆಡ್ರಲ್. ಜರ್ಮನಿಯ ಅತಿದೊಡ್ಡ ಪ್ರೊಟೆಸ್ಟಂಟ್ ಚರ್ಚ್. ಎರಡನೇ ಮಹಾಯುದ್ಧದಲ್ಲಿ ಕ್ಯಾಥೆಡ್ರಲ್‌ನ ಒಳಾಂಗಣವು ಭಾಗಶಃ ಹಾನಿಗೊಳಗಾಗಿದ್ದು, ಪುನರ್ ನಿರ್ಮಿಸಲಾಗಿದೆ. ಯುರೋಪಿನ ಪ್ರಮುಖ ರಾಜವಂಶಸ್ಥರ ಗೋರಿಗಳು ಇಲ್ಲಿವೆ.


1699ರಲ್ಲಿ ನಿರ್ಮಿಸಲಾದ ಷಾರ್ಲೋ ಟೆನ್‌ಬರ್ಗ್ ಒಂದು ಭವ್ಯ ಅರಮನೆ. ಅರಮನೆಯ ಹಿಂಭಾಗದಲ್ಲಿ ವಿಶಾಲವಾದ ಸುಂದರ ಉದ್ಯಾನವನವಿದೆ. ಅರಮನೆಯ ಗೋಲ್ಡನ್ ಗ್ಯಾಲರಿಯಲ್ಲಿರುವ ಸಿಲ್ವರ್ ವಾಲ್ಟ್ ಎಂಥವರನ್ನೂ ಬೆರಗುಗೊಳಿಸುತ್ತದೆ. ನೂರಕ್ಕೂ ಅಧಿಕ ಟೇಬಲ್‌ಗಳ ಮೇಲೆ ಒಪ್ಪ ಓರಣವಾಗಿ ಜೋಡಿಸಲಾಗಿರುವ ಚಿನ್ನ, ಬೆಳ್ಳಿ, ಗಾಜಿನ ಮತ್ತು ಪಿಂಗಾಣಿಯಿಂದ ತಯಾರಿಸಲಾದ ಟೇಬಲ್ ವೇರ್, ಪರ್ಶಿಯನ್ ಕಿರೀಟ ಹಾಗೂ ವಜ್ರಾಭರಣಗಳು ಭವ್ಯತೆಯನ್ನು ಸಾರುತ್ತವೆ. ಹಳೆಯ ಅರಮನೆಯಲ್ಲಿರುವ ಪೋರ್ಸಿಲೀನ್ ಕ್ಯಾಬಿನೆಟ್ ಕೋಣೆಯಲ್ಲಿ ನೀಲಿ ಮತ್ತು ಬಿಳಿಬಣ್ಣದ ಪಿಂಗಾಣಿ ವಸ್ತುಗಳನ್ನು ವೀಕ್ಷಿಸಬಹುದು.

ಫ್ರ್ಯಾಂಕೋ-ಜರ್ಮನ್ ಯುದ್ಧದಲ್ಲಿ ಜಯಸಾಧಿಸಿದ ನೆನಪಿಗಾಗಿ 1873ರಲ್ಲಿ ನಿರ್ಮಿಸಲಾದ ಸ್ಮಾರಕದ ತುದಿಯಲ್ಲಿ ರೋಮನ್ ವಿಜಯದೇವತೆ ವಿಕ್ಟೋರಿಯಾಳ 37 ಟನ್ ತೂಕವುಳ್ಳ 27 ಅಡಿ ಎತ್ತರದ ಕಂಚಿನ ಶಿಲ್ಪವಿದ್ದು, ಸ್ಮಾರಕದ ಒಟ್ಟು ಎತ್ತರ 220 ಅಡಿಗಳಾಗಿವೆ. ಈ ಊರು ಹೆಜ್ಜೆ ಹೆಜ್ಜೆಗೂ ಚರಿತ್ರೆಯ ಕಥೆ ಹೇಳುತ್ತದೆ.



ಬರ್ಲಿನ್‌ನ ಮಹಾಗೋಡೆ, ಜೆಂಡರ್‌ಮೆನ್ ಮಾರ್ಕೆಟ್





ವಿಕ್ಟರಿ ಟವರ್

ಕೊನೆಯ ದಿನ

10ನೇ ಪುಟದಿಂದ...

ಅವರಿಬ್ಬರ ನಡುವಿನ ಚರ್ಚೆ ನಿಲ್ಲುವ ಸೂಚನೆ ಕಾಣದಾದಾಗ ಅಭಾ ಧೈರ್ಯ ಮಾಡಿ ಗಾಂಧೀಜಿಗೆ ಹೊರಗಡೆಯಿಂದಲೇ ಗಡಿಯಾರ ತೋರಿಸಿ ಪ್ರಾರ್ಥನೆಗೆ ಸಮಯ ಮೀರುತ್ತಿದೆಯೆಂದು ಸನ್ನೆಮಾಡಿ ಹೇಳಿದಳು. ಇದನ್ನು ಗಮನಿಸಿದ ಗಾಂಧೀಜಿ, 'ದೇವರ ಜೊತೆಗಿನ ನನ್ನ ಸಭೆಗೆ ತಡವಾಗುತ್ತಿದೆ' ಎಂದು ಪಟೇಲರಿಗೆ ತಮ್ಮ ಪ್ರಾರ್ಥನಾ ಸಭೆಯ ಬಗ್ಗೆ ಸೂಚ್ಯವಾಗಿ ತಿಳಿಸಿ ತಡವರಿಸಿಕೊಂಡು ಎದ್ದು ನಿಂತರು.

ಉಪವಾಸ ಸತ್ಯಾಗ್ರಹದ ಕಾರಣದಿಂದ ತೀವ್ರ ಬಳಲಿಕೆಗೆ ಈಡಾಗಿದ್ದ ಗಾಂಧೀಜಿ ಸ್ವತಂತ್ರವಾಗಿ ನಡೆದಾಡಲೂ ಪ್ರಯಾಸಪಡುತ್ತಿದ್ದರು. ಹಾಗಾಗಿ ಅಭಾ ಮತ್ತು ಮನು ಅವರ ಹೆಗಲ ಮೇಲೆ ಕೈ ಊರಿಕೊಂಡು ಸಂಜೆಯ ಪ್ರಾರ್ಥನಾ ಸಭೆಯ ಕಡೆಗೆ ಹೆಜ್ಜೆ ಹಾಕಿದರು. ಎಂದಿನಂತೆ ಸಂಜೆ ಸರಿಯಾಗಿ 5 ಗಂಟೆಗೆ ಆರಂಭವಾಗಬೇಕಿದ್ದ ಪ್ರಾರ್ಥನಾ ಸಭೆ ತಡವಾಗಿದ್ದರಿಂದ ಜನರ ಗುಂಪಿನಲ್ಲಿ ಗುಸು ಗುಸು ಆರಂಭವಾಗಿತ್ತು.

ಗಾಂಧೀಜಿ ತಮ್ಮ ಇಬ್ಬರು ಮೊಮ್ಮಕ್ಕಳೊಡನೆ ಅವರ ಕೊಠಡಿಯಿಂದ ಆಚೆ ಬರುತ್ತಿರುವುದು ಕಾಣುತ್ತಿದ್ದಂತೆ ಜನರು ಖುಷಿಯಿಂದ 'ಓ ಅಗೋ ಗಾಂಧಿ ಬರುತ್ತಿದ್ದಾರೆ' ಎಂದು ಉತ್ಸಾಹದಲ್ಲಿ ಉದ್ಗಾರ ತೆಗೆದರು. ಗಾಂಧೀಜಿಯ ಬಲಗಡೆಗೆ ಮನು ಮತ್ತು ಎಡಗಡೆಯಲ್ಲಿ ಅಭಾ ಹೆಜ್ಜೆ ಹಾಕುತ್ತಿದ್ದರು. ಕೇವಲ ನೂರು ಅಡಿ ದೂರದಲ್ಲಿದ್ದ ಪ್ರಾರ್ಥನಾ ವೇದಿಕೆಯ ಕಡೆಗೆ ಹೆಜ್ಜೆ ಹಾಕುತ್ತಿದ್ದಾಗ ಮೆಲುದನಿಯಲ್ಲಿ 'ಪ್ರಾರ್ಥನಾ ಸಭೆಗೆ ತಡವಾಗುತ್ತಿದೆ ಎಂದು ಏಕೆ ನನಗೆ ಮೊದಲೇ ಎಚ್ಚರಿಸಲಿಲ್ಲ' ಎಂದು ಮೊಮ್ಮಕ್ಕಳಿಗೆ ಗದರಿದರು. 'ನಿಮ್ಮ ಗಂಭೀರ ಚರ್ಚೆಯ ನಡುವೆ ಬಂದು ಸಮಯ ಮೀರುತ್ತಿದೆ ಎಂದು ಎಚ್ಚರಿಸುವ ಧೈರ್ಯ ನಮಗೆ ಬರಲಿಲ್ಲ' ಎಂದು ಮನು ಉತ್ತರಿಸಿದಳು. 'ಸಮಯಕ್ಕೆ ಸರಿಯಾಗಿ ರೋಗಿಗೆ ಔಷಧಿ ನೀಡುವುದು ದಾದಿಯರ ಕರ್ತವ್ಯ. ನಿಧಾನವಾದರೆ ರೋಗಿ ಸಾಯಲೂಬಹುದಲ್ಲವೇ' ಎಂದು ತಿಳಿವಳಿಕೆಯ ಮಾತು ಹೇಳಿ ಮುಂದೆ ಹೆಜ್ಜೆ ಹಾಕಿದರು.

ಗಾಂಧೀಜಿಯ ಪ್ರಾರ್ಥನಾ ಸಭೆಗೆ ಆ ವೇಳೆಗಾಗಲೇ ಸುಮಾರು 200ರಿಂದ 250 ಜನ ಸೇರಿದ್ದರು. ಅವರೆಲ್ಲ ಕೈಜೋಡಿಸಿ ಗಾಂಧೀಜಿಗೆ ನಮಸ್ಕರಿಸುತ್ತಿದ್ದರು. ಗಾಂಧೀಜಿ ಕೂಡಾ ಜನರಿಗೆ ಪ್ರತಿ ನಮಸ್ಕರಿಸುತ್ತಾ ನಿಧಾನವಾಗಿ ಪ್ರಾರ್ಥನಾ ವೇದಿಕೆಯ ಬಳಿಗೆ ಬಂದರು.

ಜನರ ಗುಂಪಿನ ನಡುವೆ ಖಾಕಿ ಉಡುಗೆ ತೊಟ್ಟು ನಿಂತಿದ್ದ ಹಂತಕ ಗೋಡ್ಸೆ ಗಾಂಧೀಜಿಯವರಿಗೆ ಬಾಗಿ ನಮಸ್ಕರಿಸುವಂತೆ ಮುಂದೆ ಬಂದಾಗ ಮನು ಆತನಿಗೆ ಕೈ ಅಡ್ಡಹಿಡಿದು 'ಅಣ್ಣಾ, ಪ್ರಾರ್ಥನಾ ಸಭೆಗೆ ಈಗಾಗಲೇ ತಡವಾಗಿದೆ. ದಾರಿಬಿಡಿ' ಎಂದು ಹೇಳಿ ಮುಂದಕ್ಕೆ ಬರುತ್ತಿದ್ದಂತೆಯೇ ಗೋಡ್ಸೆ ತನ್ನ ಎಡಗೈಯಿಂದ ಆಕೆಯನ್ನು ಬದಿಗೆ ದೂಡಿದ. ಮನು ಕೈಯಲ್ಲಿದ್ದ ಪುಸ್ತಕ, ಜಪಮಣಿ ನೆಲಕ್ಕೆ ಬಿದ್ದವು. ಮನು ಸಾವರಿಸಿಕೊಂಡು ಕೆಳಗೆ ಬಿದ್ದಿದ್ದ ಅವುಗಳನ್ನು ಎತ್ತಿಕೊಂಡು ನಿಲ್ಲುವಷ್ಟರಲ್ಲಿ ಆಗಬಾರದ ಅನಾಹುತ ಆಗಿ ಹೋಗಿತ್ತು. ಗೋಡ್ಸೆ ತನ್ನ ಎರಡೂ ಕೈಗಳ ನಡುವೆ ಅಡಗಿಸಿ ಇಟ್ಟುಕೊಂಡಿದ್ದ ಕಪ್ಪುಬಣ್ಣದ ಇಟಾಲಿಯನ್ ನಿರ್ಮಿತ ಬೆರೆಟ್ಟಾ ಪಿಸ್ತೂಲನ್ನು ಹೊರತೆಗೆದು ಮುನ್ನುಗ್ಗಿ ಗಾಂಧೀಜಿಯ ಎದುರಿಗೇ ನಿಂತು ಅವರ ಎದೆಗೆ ಮತ್ತು ಕಿಬ್ಬೊಟ್ಟೆಗೆ ಒಂದರ ಹಿಂದೊಂದರಂತೆ ಮೂರು ಗುಂಡುಗಳನ್ನು ಕೈಅಳತೆಯ ದೂರದಿಂದಲೇ ಹಾರಿಸಿದ. ಶಕ್ತಿಯುತವಾಗಿದ್ದ ವಿದೇಶಿನಿರ್ಮಿತ ಪಿಸ್ತೂಲಿನಿಂದ ಹಾರಿದ ಗುಂಡುಗಳು ಗಾಂಧೀಜಿಯ ದೇಹಕ್ಕೆ ತೂರಿ ಹೊರಬಂದವು. ಎದೆ, ಕಿಬ್ಬೊಟ್ಟೆಯಿಂದ ರಕ್ತ ಚಿಮ್ಮಿ ಅವರು ಹೊದ್ದಿದ್ದ ಶಾಲು ರಕ್ತಮಯವಾಯಿತು. ಅಲ್ಲಿ ಏನಾಗುತ್ತಿದೆ ಎಂದು ಸುತ್ತಲಿನವರಿಗೆ ಅರಿವಾಗುವ ವೇಳೆಗಾಗಲೇ ಗಾಂಧೀಜಿ ಹಿಂದಕ್ಕೆ ಒರಗಿ ನೆಲಕ್ಕೆ ಕುಸಿದಿದ್ದರು. 'ಹೇ ರಾಮ್... ಹೇ ರಾಮ್...' ಎನ್ನುವ ಕ್ಷೀಣದನಿಯೊಡನೆ ಅಂತಿಮವಾಗಿ ಗಾಂಧೀಜಿ ಕಣ್ಣು ಮುಚ್ಚಿದರು. ಆಗ ಸಮಯ ಸಂಜೆ 5 ಗಂಟೆ 17 ನಿಮಿಷ.

ಹತ್ಯೆ ನಡೆದಾಗ ಗಾಂಧೀಜಿಯವರ ಹಿಂದೆಯೇ ನಡೆದು ಬರುತ್ತಿದ್ದ ಆಪ್ತ ಸಹಾಯಕ ಬ್ರಿಜ್‌ಕೃಷ್ಣ ಮತ್ತು ಕಲ್ಯಾಣಂ ಗರ ಬಡಿದವರಂತೆ ಹಾಗೆ ನಿಂತುಬಿಟ್ಟರು. ಅವರಿಗೆ ಅರಿವಿಲ್ಲದಂತೆ ಅವರ ಕಣ್ಣುಗಳಲ್ಲಿ ಕಣ್ಣೀರು ಹರಿಯಿತು. ಗಾಂಧೀಜಿಯವರ ರಕ್ತಸಿಕ್ತ ದೇಹವನ್ನು ಮನು ಮತ್ತು ಅಭಾ ತಮ್ಮ ತೊಡೆಯ ಮೇಲೆ ಇಟ್ಟುಕೊಂಡು ಗೋಳಾಡುತ್ತಿದ್ದರು. ನಂತರ ಆಪ್ತಸಹಾಯಕರು ಮೃತದೇಹವನ್ನು ಬಿರ್ಲಾ ಭವನದ ಅವರ ಕೊಠಡಿಗೆ ತಂದು ಚಾಪೆಯ ಮೇಲೆ ಮಲಗಿಸಿದರು.

ಗಾಂಧೀಜಿಯವರ ಹತ್ಯೆಯ ವಿಷಯ ಕ್ಷಣಮಾತ್ರದಲ್ಲಿ ಪ್ರಧಾನಿ ನೆಹರೂ ಕಚೇರಿಗೆ ಮತ್ತು ಭಾರತದ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಮೌಂಟ್ ಬ್ಯಾಟನ್ ಅವರ ಕಚೇರಿಗಳಿಗೆ ತಲುಪಿತು. ಈ ಸುದ್ದಿ ಕೇಳಿದ ಕೂಡಲೇ ಲಾರ್ಡ್ ಮೌಂಟ್ ಬ್ಯಾಟನ್ ಬೆಚ್ಚಿಬಿದ್ದರು. ತಮ್ಮ ಸಹಾಯಕ ಕ್ಯಾಂಪ್ ಬೆಲ್ ಜಾನ್ಸನ್ ಅವರಿಗೆ 'ಗಾಂಧಿಯನ್ನು ಕೊಂದವರು ಯಾರು? ಅಕಸ್ಮಾತ್ ಆತ ಮುಸ್ಲಿಂ ಆಗಿದ್ದರೆ ಇಡೀ ಜಗತ್ತು ಅರಿಯದ ಭೀಕರ ನರಹತ್ಯೆಯನ್ನು ನಾವು ಕಾಣಲಿದ್ದೇವೆ' ಎಂದು ಆತಂಕದಿಂದ ನುಡಿದರು. ಗಾಂಧೀಜಿಯವರ ಹತ್ಯೆಯ ಶೋಕದ ಸುದ್ದಿಯನ್ನು ದೆಹಲಿಯ ಆಕಾಶವಾಣಿ ಪ್ರಥಮವಾಗಿ ಪ್ರಸಾರ ಮಾಡಿತು.

ಪ್ರಧಾನಿ ನೆಹರೂ ಅವರಂತೂ ಈ ಸುದ್ದಿಯಿಂದ ದಿಗ್ಭ್ರಾಂತರಾಗಿದ್ದರು. ಈ ದಿಗ್ಭ್ರಾಂತಿಯ ಸಂದರ್ಭದಲ್ಲೂ ಅವರು ನಿಂತಲ್ಲೇ ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಅಮೋಘ ಭಾಷಣ ಹೀಗಿತ್ತು. 'ನಮ್ಮೆಲ್ಲರ ಬದುಕಿನಿಂದ ಬೆಳಕು ನಂದಿ ಹೋಗಿದೆ. ಎಲ್ಲೆಲ್ಲೂ ಕತ್ತಲು ಆವರಿಸಿದೆ. ನಿಮಗೆ ಏನು ಹೇಳಬೇಕು ಮತ್ತು ಹೇಗೆ ಹೇಳಬೇಕು ಎನ್ನುವುದೇ ನನಗೆ ತಿಳಿಯುತ್ತಿಲ್ಲ. ನಮ್ಮ ನೆಚ್ಚಿನ ನಾಯಕ ರಾಷ್ಟ್ರಪಿತ ಬಾಪೂ ಇನ್ನಿಲ್ಲ. ಆದರೆ, ಅದು ಒಂದು ಅರ್ಥದಲ್ಲಿ ತಪ್ಪು. ಹಲವಾರು ವರ್ಷಗಳಿಂದ ನಾವು ನೋಡಿದ್ದಂತೆ ಮತ್ತೆ ಅವರನ್ನು ನೋಡಲು ಆಗುವುದಿಲ್ಲ. ಸಲಹೆ ಕೇಳಲು ಅವರ ಬಳಿ ಓಡೋಡಿ ಹೋಗುವಂತಿಲ್ಲ, ಸಾಂತ್ವನ ಕೇಳುವಂತಿಲ್ಲ. ಇದು ಆಘಾತಕಾರಿ ಹೊಡೆತ. ನನಗಷ್ಟೇ ಅಲ್ಲ. ಈ ದೇಶದ ಲಕ್ಷ ಲಕ್ಷ ಜನರಿಗೆ ಆಗಿರುವ ನಷ್ಟ. ಈ ಹೊಡೆತದ ಆಘಾತವನ್ನು ಯಾವುದೇ ಸಲಹೆ, ಯಾರದೇ ಸಾಂತ್ವನಗಳಿಂದ ಮೃದುಗೊಳಿಸಿಕೊಳ್ಳುವುದು ಬಹಳ ಕಷ್ಟ. ಬೆಳಕು ಆರಿಹೋಗಿದೆ ಎಂದು ನಾನು ಹೇಳಿದ್ದೇನೆ. ಆದರೆ, ಇದು ಒಂದು ಅರ್ಥದಲ್ಲಿ ಸರಿಯಲ್ಲ. ಈ ದೇಶಕ್ಕೆ ಬೆಳಕು ತೋರಿದ ಅದು ಸಾಧಾರಣ ಬೆಳಕಲ್ಲ. ಇಷ್ಟು ವರ್ಷಗಳ ಕಾಲ ಈ ದೇಶವನ್ನು ಬೆಳಗಿದ ಬೆಳಕು. ಇನ್ನೂ ಹಲವಾರು ವರ್ಷಗಳ ಕಾಲ ಅದು ಈ ದೇಶವನ್ನು ಬೆಳಗುತ್ತದೆ. ಸಾವಿರಾರು ವರ್ಷಗಳ ನಂತರವೂ ಈ ಬೆಳಕನ್ನು ದೇಶದಲ್ಲಿ ನೋಡಬಹುದು' ಎಂದು ಗದ್ಗದಿತ ದನಿಯಲ್ಲಿ ದೇಶವನ್ನು ಉದ್ದೇಶಿಸಿ ಮಾತನಾಡಿದ ಈ ಭಾಷಣ ರಾಷ್ಟ್ರ ನಾಯಕರೊಬ್ಬರು ನೀಡಿದ ಮಾದರಿ ಶೋಕ ಸಂದೇಶವೆಂದು ಈಗಲೂ ಹೆಸರಾಗಿದೆ.

ಗಾಂಧೀಜಿಯ ಹತ್ಯೆಯಾಗಿ ಈಗ 75 ವರ್ಷ. ಅಹಿಂಸೆಯ ಸಾಕಾರಮೂರ್ತಿ ಮಹಾತ್ಮ ಗಾಂಧೀಜಿ ಅವರು ಹಿಂಸೆಗೆ ಬಲಿಯಾಗಿ ಮನುಕುಲದ ಚರಿತ್ರೆಯಲ್ಲಿ ಬುದ್ಧ ಮತ್ತು ಏಸುಕ್ರಿಸ್ತರ ಸಾಲಿನಲ್ಲಿ ಶಾಶ್ವತ ತಾರೆಯಾಗಿ ಬೆಳಗುತ್ತಿದ್ದಾರೆ.



ಮಹಾತ್ಮನ ನೆನಪಿನಲ್ಲಿ...ಗಾಂಧೀಜಿಯವರು ಬಳಸಿದ ವಸ್ತುಗಳು.

ಮುನ್ನೋಟ 29-01-2023 ರಿಂದ 04-02-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಯಾವುದೇ ಉದ್ವೇಗಕ್ಕೆ ಒಳಗಾಗದಿರುವುದು ಒಳ್ಳೆಯದು. ಉದ್ಯೋಗದಲ್ಲಿ ನಿಮ್ಮ ಪ್ರಾಮಾಣಿಕತೆಯನ್ನು ಕಾಯ್ದುಕೊಳ್ಳುವ ಅಗತ್ಯವಿದೆ. ಜೀವನೋಪಾಯಕ್ಕೆ ಸಿಕ್ಕ ಅವಕಾಶಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಿರಿ. ವಾಹನ ಚಾಲನಾ ವೃತ್ತಿಯನ್ನು ನಡೆಸುವವರಿಗೆ ಹೆಚ್ಚು ಏಳಿಗೆ ಇರುತ್ತದೆ. ಅನಿವಾರ್ಯ ಕಾರಣಗಳಿಂದಾಗಿ ಮಕ್ಕಳಿಗೆ ಹೆಚ್ಚು ಹಣ ಕೊಡುವಿರಿ. ಹಣ ಹೂಡಿಕೆಗೆ ಮುಂಚೆ ಎಚ್ಚರಿಕೆವಹಿಸಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ಜೀವನದಲ್ಲಿ ಕೆಲವೊಂದು ಅನಿರೀಕ್ಷಿತ ಬದಲಾವಣೆಗಳು ಆದರೂ ಸಮಸ್ಯೆಗಳಿಗೆ ಸಿಲುಕದಂತೆ ಎಚ್ಚರವಹಿಸುವಿರಿ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ. ಸರಕು ಸಾಗಣೆ ಮಾಡುವ ಕಂಪನಿಗಳಿಗೆ ಉತ್ತಮ ವ್ಯವಹಾರವಿರುತ್ತದೆ. ಕೃಷಿಕರಿಗೆ ಬಹಳ ಉತ್ತಮವಾದ ವಾರ. ಕೃಷಿಯಿಂದ ಹೆಚ್ಚು ಆದಾಯ ಬರುವ ಸಾಧ್ಯತೆ ಇದೆ. ಕಾರ್ಮಿಕರನ್ನು ಒದಗಿಸುವ ಏಜೆನ್ಸಿಗಳಿಗೆ ಬೇಡಿಕೆ ಬರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಕಂಪನಿಯ ಹಣಕಾಸು ನಿರ್ವಹಣೆಯಲ್ಲಿ ನಿಮ್ಮ ಪಾತ್ರ ಬಹಳ ದೊಡ್ಡದಿರುತ್ತದೆ. ವಿದೇಶಗಳ ಜೊತೆ ಆಮದು ಮತ್ತು ರಫ್ತು ವ್ಯವಹಾರ ಮಾಡುವ ಕಂಪನಿಗಳಿಗೆ ಹೆಚ್ಚಿನ ಲಾಭವಿರುತ್ತದೆ. ಹಿರಿಯರು ನಿಮ್ಮ ಮೇಲೆ ಕೋಪಗೊಳ್ಳಬಹುದು. ಲೋಹಗಳ ಮೇಲೆ ಮಾಡುವ ಕುಸರಿ ಕಲೆಗಳನ್ನು ತಂದೆಯಿಂದ ಕಲಿಯಬಹುದು. ಸ್ವಂತ ಮನೆ ಅಥವಾ ಕಟ್ಟಡದ ದುರಸ್ತಿಗಾಗಿ ಹಣ ಖರ್ಚು ಮಾಡುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಸರ್ಕಾರಿ ಕೆಲಸಗಳಲ್ಲಿ ಸಾಕಷ್ಟು ಸರಾಗತೆಯನ್ನು ಕಾಣಬಹುದು. ಸಂಗಾತಿಯಿಂದ ಸಾಕಷ್ಟು ಧನಸಹಾಯ ದೊರೆಯುತ್ತದೆ. ಕೆಲಸದ ಆಯ್ಕೆ ಸರಿಯಾಗಿದ್ದು ಅದನ್ನು ನಿರ್ಭಯವಾಗಿ ಮಾಡಿ ಮುಗಿಸಿರಿ. ಯಾವುದೇ ರೀತಿಯ ಹೊಗಳಿಕೆಗೆ ಮರುಳಾಗಬೇಡಿರಿ. ಅದು ನಿಮ್ಮನ್ನು ಮೋಸಗೊಳಿಸುವ ಸಾಧನವಾಗಿರುತ್ತದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಯಾವುದೇ ರೀತಿಯಲ್ಲಿ ತೊಂದರೆ ಇರುವುದಿಲ್ಲ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಮನೆಗಳ ಒಳಾಂಗಣ ವಿನ್ಯಾಸ ಮಾಡುವವರಿಗೆ ಹೆಚ್ಚಿನ ಕೆಲಸ ದೊರೆಯುತ್ತದೆ. ಯೋಗಾಭ್ಯಾಸವನ್ನು ಹೇಳಿಕೊಡುವವರಿಗೆ ಧನ ಸಂಪಾದನೆ ಆಗುವ ಸಂದರ್ಭವಿದೆ. ಪ್ರೀತಿಸಿದವರ ಜೊತೆಗೆ ವಿವಾಹವಾಗಲು ಹಿರಿಯರ ಒಪ್ಪಿಗೆ ಸಿಗುವ ಸಂದರ್ಭವಿದೆ. ಸ್ನೇಹಿತರೊಂದಿಗೆ ಸಂತೋಷಕೂಟಗಳಲ್ಲಿ ಭಾಗವಹಿಸುವಿರಿ. ಆಕಸ್ಮಿಕ ಧನಲಾಭ ಆಗುವ ಸಂದರ್ಭವಿದೆ. ಹಣದ ಒಳಹರಿವು ಉತ್ತಮವಾಗಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಕೆಲವೊಂದು ಪ್ರಭಾವಿ ವ್ಯಕ್ತಿಗಳ ಸಹಾಯ ದೊರೆಯುತ್ತದೆ. ದಿನಸಿ ವ್ಯಾಪಾರಿಗಳ ವ್ಯಾಪಾರ ವಹಿವಾಟು ಜಾಸ್ತಿಯಾಗುತ್ತದೆ. ಅನವಶ್ಯಕವಾಗಿ ಋಣಾತ್ಮಕ ಚಿಂತನೆಯನ್ನು ಮಾಡುವುದನ್ನು ನಿಲ್ಲಿಸಿರಿ. ತರಕಾರಿ ವ್ಯಾಪಾರಿಗಳಿಗೆ ಹೆಚ್ಚು ವ್ಯವಹಾರವಾಗುತ್ತದೆ. ಕೆಲವು ರಾಜಕೀಯ ಪಟುಗಳಿಗೆ ಸಿಕ್ಕ ಸ್ಥಾನವನ್ನು ಉಳಿಸಿಕೊಳ್ಳಲು ಬಹಳ ಹೆಣಗಬೇಕಾಗುತ್ತದೆ. ಹಣದ ಒಳಹರಿವು ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಚರ್ಮದ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ಹೆಚ್ಚು ಆದಾಯವಿರುತ್ತದೆ. ನೀವು ಒಪ್ಪಿಕೊಂಡಿರುವ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿ ಮುಗಿಸುವುದು ಉತ್ತಮ. ವಿದೇಶಿ ವ್ಯವಹಾರಗಳನ್ನು ಮಾಡಬೇಕೆನ್ನುವವರಿಗೆ ಈಗ ಅವಕಾಶಗಳು ಒದಗುತ್ತವೆ. ಸಿನಿಮಾ ಕಲಾವಿದರಿಗೆ ಹೆಚ್ಚು ಅವಕಾಶಗಳು ದೊರೆಯುತ್ತವೆ. ಸಂಗಾತಿಯ ಕಠಿಣ ನಿರ್ಧಾರಗಳು ನಿಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಸಣ್ಣಪುಟ್ಟ ಅಡಚಣೆಗಳು ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಲಾರವು. ತಮ್ಮ ಕಾರ್ಮಿಕರನ್ನು ಒಲಿಸಿಕೊಳ್ಳುವುದರಿಂದ ಉದ್ದಿಮೆದಾರರು ಹೆಚ್ಚು ಉತ್ಪಾದನೆ ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳು ಉತ್ತಮ ಸವಲತ್ತನ್ನು ಪಡೆಯುವುದರ ಜೊತೆಗೆ ಉತ್ತಮ ಸಾಧನೆ ಕೂಡ ಮಾಡಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ವ್ಯವಹಾರದ ಪಾಲುದಾರರು ನಿಮ್ಮ ಮಾತಿನಂತೆಯೇ ನಡೆಯುವರು. ಮಗಳಿಂದ ಶುಭ ಸುದ್ದಿಯೊಂದನ್ನು ಕೇಳುವಿರಿ. ಕ್ರೀಡಾಪಟುಗಳಿಗೆ ಸೂಕ್ತ ಅವಕಾಶ ದೊರೆಯುತ್ತದೆ. ವರದಿಗಾರರು ಸ್ವಲ್ಪ ಎಚ್ಚರಿಕೆಯಿಂದ ವರದಿ ಪ್ರಕಟಿಸಿರಿ. ಬಹಳ ಕಷ್ಟಪಟ್ಟು ಉನ್ನತ ವಿದ್ಯೆಯನ್ನು ಮುಂದುವರಿಸುವಿರಿ. ಸರ್ಕಾರಿ ಸವಲತ್ತುಗಳು ಈಗ ಸರಾಗವಾಗಿ ದೊರೆಯುತ್ತವೆ. ಸಹೋದರಿಯರ ಸಹಕಾರ ನಿಮಗೆ ದೊರೆಯುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಆತ್ಮಾಭಿಮಾನದ ಜೊತೆಗೆ ಗೌರವವೂ ದೊರೆಯುತ್ತದೆ. ವಿಭಿನ್ನ ರೀತಿಯಲ್ಲಿ ಕ್ಲಿಷ್ಟಕರವಾದ ಸಮಸ್ಯೆಯೊಂದನ್ನು ಬಗೆಹರಿಸಿ ಸಹೋದ್ಯೋಗಿಗಳಿಂದ ಮೆಚ್ಚುಗೆ ಪಡೆಯುವಿರಿ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿ ಇರುತ್ತದೆ. ನಿಮ್ಮ ಉತ್ತಮ ನಡವಳಿಕೆಯಿಂದ ಎಲ್ಲರಿಗೂ ಅಚ್ಚುಮೆಚ್ಚು ಆಗುವಿರಿ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಜೀವನಶೈಲಿಯಲ್ಲಿ ಸಾಕಷ್ಟು ಸುಧಾರಣೆ ಕಂಡು ಬಂದು, ಎಲ್ಲವೂ ನಿಮಗೆ ಅನುಕೂಲವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಫಲಿತಾಂಶ ದೊರೆಯುತ್ತದೆ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಸ್ಥಿರಾಸ್ತಿಯನ್ನು ಹೊಂದುವಲ್ಲಿ ಯಶಸ್ವಿಯಾಗುವಿರಿ. ಸಂಗೀತ ಕಲಾವಿದರಿಗೆ ಬೇಡಿಕೆ ಹೆಚ್ಚಾಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಮಾನಸಿಕ ಒತ್ತಡಗಳಿಂದ ಹೊರಬರಲು ಹಿರಿಯರ ಬಳಿ ಸಲಹೆ ಸೂಚನೆಗಳನ್ನು ಪಡೆಯುವುದು ಒಳ್ಳೆಯದು. ಸಾಕಷ್ಟು ಆದಾಯವಿದ್ದರೂ ಖರ್ಚು ಹೆಚ್ಚಾಗುವ ಸಂದರ್ಭವಿದೆ. ಒಡಹುಟ್ಟಿದವರಿಗೆ ಕೆಲವೊಂದು ಕಾರಣಗಳಿಗಾಗಿ ನಿಮ್ಮ ಮೇಲೆ ಕೋಪವಿರುತ್ತದೆ. ವಿವಾಹ ವಿಚಾರದಲ್ಲಿ ವಯಸ್ಕರು ಮತ್ತು ಹಿರಿಯರು ಅಂತಿಮ ತೀರ್ಮಾನಕ್ಕೆ ಬರುವುದು ಬಹಳ ಒಳ್ಳೆಯದು.

ಪದಬಂಧ 2774



ಮೇಲಿನಿಂದ ಕೆಳಕ್ಕೆ

1. ಪಂಪನ ಬಿರುದು- ಕನ್ನಡ ನಾಡಿನ ಸಾಧಕ ಪ್ರಶಸ್ತಿ 3
2. ಕವಿಗಳ ಕಲ್ಪನೆಯನ್ನು ಪ್ರಸ್ತುತಪಡಿಸುವ ಸಮ್ಮೇಳನ 5
3. ಮುಕ್ತವಾಗಿ ಹೇಳಿದಂತೆಯೇ ಬರೆದುಕೊಂಡ ಪತ್ರ 5
4. ಮಹಾಪ್ರಾಣದಿಂದ ಆರಂಭವಾಗುವ ಕರಡು 3
7. ಆಡಳಿತದ ಸೇನೆಯಿರಬಹುದಾದ ಸ್ಥಳ 3
9. 'ಹರೋಹರ' ಎನ್ನುತ್ತಾ ಹೊರುವ ಹರಕೆಗೋಲು ತಲೆಕೆಳಗು 3
11. ಹೂವಿನೊಳಗಣ ಪರಾಗ 3
12. ಹಿಂದಿಯಿಂದ ಕನ್ನಡಕ್ಕೆ ಬಂದ ದೊಡ್ಡ ಪಟ್ಟಣ 3
14. ಕಾಪಾಡುವವ 3
15. ಪಾವತಿಸಿದ ಹಣಕ್ಕೆ ಪಡೆಯುವ ಚೀಟಿ 3
17. ಸುಬ್ರಹ್ಮಣ್ಯನ ತಮಿಳು ನಾಮ 3
18. ಕಣ್ಣು ಮುಚ್ಚಿ ಬಣ್ಣ ಬಣ್ಣದ ಕಲ್ಪನೆಯ ಸ್ವಪ್ನ ಕಾಣುವವ 5
19. ಪ್ರಯಾಣದಲ್ಲಿ ಜೊತೆಗೆ ಬರುವವ 5
20. ನ್ಯಾಯವಾದಿ ಕೆಳಗಿನಿಂದ ಮೇಲೆ 3
22. ಥಕಥಕ ಎಂಬ ಕುಣಿತದಿಂದಲೇ ಬಂದ ನೃತ್ಯ ಪ್ರಕಾರ 3
24. ಒಳ್ಳೆಯ ಹಾಗು ಕೆಡುಕಿನ ಪೂರ್ವ ಸೂಚನೆ 3

ಎಡದಿಂದ ಬಲಕ್ಕೆ

1. ಶ್ರೇಷ್ಠವಾದ ಹಾವಿನೊಂದಿಗೆ ಸುವಾಸಿತ ಸಂಪಿಗೆ 5
3. ಬೆಳಗಿನ ಸೂರ್ಯನಂತೆ ಬೆಳೆಯುತ್ತಿರುವ ಪ್ರತಿಭೆ 5
5. ವಿಶೇಷವಾಗಿ ಭವ ಬಂಧನದಿಂದ ಪಾರಾದವನು 3
6. 'ಅಮ್ಮ' ಎಂದೆನಿಸಿಕೊಂಡಿದ್ದ ಜಯಶಾಲಿ ನಾಯಕಿ 5
8. ಗೇಲಿ ಅಥವಾ ವ್ಯಂಗ್ಯ ಮಾಡು 5
10. ಹಸುವಿನಂತೆ ಕಾಣುವ ವ್ಯಾಘ್ರ 3
11. ಶಿವಪುತ್ರ ಸ್ಕಂದನಿಗೆ ಮೀಸಲಾದ ಆರನೆಯ ದಿನ 5
13. ನರಕಕ್ಕೆ ದಾರಿ ತೋರಿಸುವ ದಾನವ 5
16. ಗೃಹದ ಒಗ್ಗಟ್ಟನ್ನು ಒಡೆಯುವವ 5
19. ಎಲ್ಲರೂ ಸೇರಿದಂತೆ; ಸಮಸ್ತ ಜನ 5
21. ಹಿಂದುಮುಂದಾದ ಅಗ್ನಿ ಹೋತ್ರ 3
22. ತಿರಸ್ಕರಿಸಿ ಕೀಳಾಗಿ ನೋಡು 5
23. ಹಿಂದೆ ದ್ವಾರಕೆ ಮಥುರಾ, ಈಗ ಉತ್ತರಪ್ರದೇಶ ಬಿಹಾರಗಳಲ್ಲಿ ಪ್ರಬಲವಾಗಿರುವ ಪಂಗಡ 5
25. ಸೂರ್ಯನ ಧ್ಯಾನಕ್ಕೆ ಮಹಾಮಂತ್ರದ ಮಾತೆ 3
26. ಬಂಗಾರದ ವೃಷ್ಟಿ ಸುರಿಸುವ ಸ್ತೋತ್ರ 5
27. ಬಾಳೆ ಬೆಳೆದ ಕಾಡು 5

ಪದಬಂಧ ಉತ್ತರ -2773

ಮೇಲಿಂದ ಕೆಳಕ್ಕೆ

1. ಸಂಜೆಗೆಂಪು 2.ಯಕ್ಷಗಾನ 3.ವಾದಗ್ರಸ್ತ 4.ರೀತಿನೀತಿ 6.ಕಲ್ಲುವೀಣೆ 7.ನಾಯಕರು 9.ತಿರುಮಲೇಶ 12.ಪದುಮನಾಭ 13.ಮಕರ 15.ದ್ರವಿಣ 19.ಕಟಕಟೆ 20.ಗುರುದೇವ 21.ವಂಗದೇಶ 22.ಸ್ಥಳಾಂತರ 24.ವಿನೋದಿನಿ 25.ವಸುಮತಿ

ಎಡದಿಂದ ಬಲಕ್ಕೆ

1.ಸಂಜಯ 3.ವಾಗ್ಝರೀ 5.ಕ್ಷಣಿಕ 7.ನಾರದ 8.ಪುತಿನ 10.ವೀಕ್ಷಕ 11.ಸ್ತಪತಿ 13.ಮಣೆ 14.ರುದ್ರ 16.ಮಣಕ 17.ವಿರಾಮ 18.ರಕ 20.ಗುಣ 21.ವಂಶಸ್ಥ 23.ಟಗರು 24.ವಿಭವ 26.ತರಾಟೆ 27.ವರದಿ 28.ಶಕಾರ 29.ನಿಯತಿ

ದಣಿವರಿಯದ ‘ಕನ್ನಡದ ಪ್ರಧಾನ’

ಖ್ಯಾತ ವಿದ್ವಾಂಸ, ಸಂಶೋಧಕ, ಕನ್ನಡ ಹೋರಾಟಗಾರ ಡಾ. ಪಿ.ವಿ. ನಾರಾಯಣ ಅವರಿಗೆ ಇದೀಗ ಭರ್ತಿ ಎಂಬತ್ತು ವರ್ಷಗಳು. ಆ ನೆಪದಲ್ಲಿ, ಬೆಂಗಳೂರಿನ ಉದಯಭಾನು ಕಲಾಸಂಘದಲ್ಲಿ ಭಾನುವಾರ (ಜ. 29) ‘ಕನ್ನಡ ಪ್ರಧಾನ’ ಎಂಬ ಅಭಿನಂದನ ಗ್ರಂಥವನ್ನು ಹೊರತರಲಾಗುತ್ತಿದೆ...

ಆರ್. ಲಕ್ಷ್ಮೀನಾರಾಯಣ

ಪಿ.ವಿ. ನಾರಾಯಣ ಎಂದರೆ ‘ಪಾಂಡಿತ್ಯ, ಪ್ರತಿಭೆ, ವಿದ್ವತ್ತು ವಿನಯಗಳ ನಾರಾಯಣ’ ಎಂದು ತಮ್ಮ ಹೆಸರಿನ ಆದ್ಯಕ್ಷರಗಳಿಗೆ ಅನ್ವರ್ಥವಾಗಿ ಕನ್ನಡ ವಿದ್ವತ್ತು ಮತ್ತು ವಿಮರ್ಶೆಯ ಕ್ಷೇತ್ರದಲ್ಲಿ ಸಾರ್ಥಕ ಕೃಷಿ ಮಾಡುತ್ತಲೇ ಕನ್ನಡದ ಸ್ಥಾನಮಾನಗಳಿಗೆ ಸಂಬಂಧಿಸಿದ ಹೋರಾಟಗಳಲ್ಲೂ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಅಪೂರ್ವ ವ್ಯಕ್ತಿ ಎಂಬುದು ವೇದ್ಯ ಸಂಗತಿ. ಶ್ರೇಷ್ಠ ವಿದ್ವಾಂಸರಾಗಿ, ವಿದ್ಯಾರ್ಥಿಗಳ ಮನಸೂರೆಗೊಂಡ ಅಧ್ಯಾಪಕರಾಗಿ, ವಾಗ್ಮಿಯಾಗಿ, ಸಂಶೋಧಕರಾಗಿ, ವಿಮರ್ಶಕರಾಗಿ, ಕಾದಂಬರಿಕಾರರಾಗಿ ಕನ್ನಡವನ್ನು ಕಟ್ಟುವ ಕಾಯಕದಲ್ಲಿ ಅರ್ಧಶತಮಾನದಿಂದ ತಮ್ಮನ್ನು ತಾವು ಅರ್ಪಿಸಿಕೊಂಡವರು ಅವರು. ಸಂಶೋಧನೆ, ವಿಮರ್ಶೆ, ಅನುವಾದ, ಸಂಪಾದನೆ ಮತ್ತು ಸೃಜನಶೀಲ ಕೃತಿಗಳೂ ಸೇರಿದಂತೆ ಎಪ್ಪತ್ತೈದು ಕೃತಿಗಳನ್ನೂ ನೀಡಿದ್ದಾರೆ.

ದೂರದಿಂದ ನೋಡಿದಾಗ ಶ್ರೀಮದ್ಗಾಂಭೀರ್ಯದ ವ್ಯಕ್ತಿಯಂತೆ ಕಾಣುವ ಪಿ.ವಿ. ನಾರಾಯಣ ತಮ್ಮ ಪಾಂಡಿತ್ಯ, ವಿದ್ವತ್ತನ್ನು ಕಿಂಚಿತ್ತೂ ತೋರಿಸಿಕೊಳ್ಳದೆ ಹಿರಿಯರು, ಕಿರಿಯರು, ಸಮವಯಸ್ಸಿನ ಮಿತ್ರರು, ವಿದ್ವಾಂಸರು, ಜನಸಾಮಾನ್ಯರು ಹೀಗೆ ಎಲ್ಲರೊಂದಿಗೆ ನಗುನಗತ್ತಾ, ಲಘು ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಲೇ ಜೊತೆಗೂಡಿ ಕೆಲಸಮಾಡುವ ಸ್ನೇಹಜೀವಿ.

ಪ್ರಧಾನ್ ವೆಂಕಪ್ಪಯ್ಯ ನಾರಾಯಣ ಅವರು (ಜನನ: 18-12- 1942) ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಅಕ್ಕಿರಾಂಪುರದವರು. ಪಿ.ವಿ.ಎನ್. ಎಂದೇ ಹೆಸರಾದ ಅವರು, ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಮತ್ತು ಕಾಲೇಜಿನ ವಿದ್ಯಾರ್ಥಿ. ಪದವಿ ವ್ಯಾಸಂಗಕ್ಕೆ ತುಮಕೂರಿನ ಸರ್ಕಾರಿ ಪ್ರಥಮದರ್ಜೆ ಕಾಲೇಜಿಗೆ ಸೇರಿದರು. ಅಲ್ಲಿ ಸಿ. ಮಹಾದೇವಪ್ಪ, ಜಿ.ಎಸ್. ಸಿದ್ಧಲಿಂಗಯ್ಯ, ಸಾ.ಶಿ. ಮರುಳಯ್ಯ, ಎಚ್.ಜಿ. ಸಣ್ಣಗುಡ್ಡಯ್ಯ ಮುಂತಾದ ನುರಿತ ಕನ್ನಡ ಪ್ರಾಧ್ಯಾಪಕರ ವಿದ್ಯಾರ್ಥಿಯಾಗಿ ಬಿ.ಎ. ಮುಗಿಸಿ ಮಾನಸ ಗಂಗೋತ್ರಿಯಲ್ಲಿ (1962-64) ಎಸ್.ವಿ.ಪಿ., ದೇಜಗೌ, ಹಾಮಾನಾ, ಎಲ್. ಬಸವರಾಜು ಮುಂತಾದ ವಿದ್ವಾಂಸರ ಗರಡಿಯಲ್ಲಿ ಕನ್ನಡದಲ್ಲಿ ನಿಷ್ಣಾತಿಯನ್ನು ಗಳಿಸಿದರು.

ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ 32 ವರ್ಷಗಳಷ್ಟು ಸುದೀರ್ಘ ಕಾಲ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ 2000ದಲ್ಲಿ ನಿವೃತ್ತರಾದರು. 1968ರಿಂದ ಈ ದಿನದವರೆಗೆ ಸುಮಾರು ಐವತ್ತು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆನಿಂತು ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡವರು.

ನಾರಾಯಣ ಅವರದು ವಿದ್ಯೆ, ಪಾಂಡಿತ್ಯಗಳಿಗೆ ಹೆಸರಾದ ಮನೆತನ. ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಹತ್ತುಸಾವಿರ ವಾರ್ಧಕ ಷಟ್ಪದಿಗಳನ್ನೊಳಗೊಂಡ ‘ಶ್ರೀರಾಮಕಥಾಮೃತ’ ಎಂಬ ರಾಮಾಯಣ ಕಾವ್ಯವೇ ಅಲ್ಲದೆ ಇನ್ನೂ ಹಲವಾರು ಕನ್ನಡ, ಸಂಸ್ಕೃತ ಕೃತಿಗಳ ಕರ್ತೃವೆಂದು ಖ್ಯಾತರಾದ, ಅದ್ವಿತೀಯ ವಿದ್ವಾಂಸ, ಕವಿ ವೆಂಕಾಮಾತ್ಯ ಈ ವಂಶದ ಪ್ರಸಿದ್ಧ ವ್ಯಕ್ತಿ. ಹೈದರಾಲಿಯ ಆಸ್ಥಾನದಲ್ಲಿ ಮಂತ್ರಿಯಾಗಿದ್ದ (ಪ್ರಧಾನ್) ಕಾರಣದಿಂದ ‘ಅಮಾತ್ಯ’ ಎಂಬುದು ಅವರ ಹೆಸರಿನ ಜೊತೆ ಅವಿಭಾಜ್ಯವಾಗಿ ಸೇರಿಕೊಂಡಿತು. ಆ ಕಾರಣಕ್ಕಾಗಿಯೇ ಆ ಮನೆತನಕ್ಕೆ ಸೇರಿದವರೆಲ್ಲ ತಮ್ಮ ಹೆಸರಿನ ಮೊದಲಿಗೆ ಪ್ರಧಾನ್ ಅಥವಾ ಪಿ. ಅಕ್ಷರವನ್ನು ಸೇರಿಸಿಕೊಳ್ಳುವುದು ರೂಢಿ. ವೆಂಕಾಮಾತ್ಯರ ಪ್ರಧಾನಿ (= ಅಮಾತ್ಯ) ಪದವಿ ತಮ್ಮದಾಗದಿದ್ದರೂ ಅವರ ಪಾಂಡಿತ್ಯ ಪ್ರತಿಭೆಗಳ ಸಮರ್ಥ ಉತ್ತರಾಧಿಕಾರಿಯೆಂಬಂತೆ ನಾರಾಯಣ ಅವರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಕೃತಿಗಳ ಮೂಲಕ ವಿಶಿಷ್ಟವಾದ ಛಾಪನ್ನು ನಿಚ್ಚಳವಾಗಿ ಮೂಡಿಸಿರುವುದು ಕನ್ನಡಿಗರಿಗೆಲ್ಲ ತಿಳಿದೇ ಇದೆ.

ವಚನ ಸಾಹಿತ್ಯ ಪಿ.ವಿ.ಎನ್. ಅವರ ವಿಶೇಷ ಅಧ್ಯಯನ ಕ್ಷೇತ್ರವಾದ ಕಾರಣದಿಂದ ಸಹಜವಾಗಿಯೇ ಅವರ ಸಂಶೋಧನೆ ಮತ್ತು ವಿಮರ್ಶೆಯ ಬಹುಭಾಗ ವಚನಸಾಹಿತ್ಯಕ್ಕೆ ಸಂಬಂಧಿಸಿದ್ದಾಗಿದೆ. ಅವರ ಪಿಎಚ್.ಡಿ ನಿಬಂಧವಾದ ‘ವಚನ ಸಾಹಿತ್ಯ- ಒಂದು ಸಾಂಸ್ಕೃತಿಕ ಅಧ್ಯಯನ’, ವಚನ ಸಾಹಿತ್ಯ ಮತ್ತು ಚಳವಳಿಗಳ ಮೂಲಚೂಲಗಳನ್ನು ಸಮಗ್ರವಾಗಿ ವಿಶ್ಲೇಷಿಸುವ ಪ್ರಮಾಣಗ್ರಂಥವಾಗಿದ್ದು ವಿದ್ವಾಂಸರಿಂದ ಒಂದು ‘ತಲಸ್ಪರ್ಶಿಯಾದ’ ಹಾಗೂ ‘ಪರಾಮರ್ಶಿಸಲೇಬೇಕಾದ ಗ್ರಂಥ’ ಎಂಬ ಪ್ರಶಂಸೆಗೆ ಪಾತ್ರವಾಗಿದೆ. ಅದೂ ಸೇರಿದಂತೆ, ‘ವಚನ ವ್ಯಾಸಂಗ’, ‘ವಚನ ಪರಿಸರ’, ‘ವಚನ ಸಮಗ್ರ’, ‘ವಚನ ನಿರ್ವಚನ’, ‘ವಚನ ಚಳವಳಿ’, ‘ಕಾಯಕ ತತ್ವ’, ‘ಉರಿಲಿಂಗ ಪೆದ್ದಿ’, ‘ವಚನ ಸಮಸ್ತ’ ಮುಂತಾದ, ಬಹುಮಟ್ಟಿಗೆ ವಿವಿಧ ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಪ್ರಬಂಧಗಳನ್ನೊಳಗೊಂಡ ವಿದ್ವತ್ಪೂರ್ಣ ಕೃತಿಗಳನ್ನು ಅವರು ಕೊಟ್ಟಿದ್ದಾರೆ. ಕನ್ನಡದ ವಿದ್ವಾಂಸರು ಮತ್ತು ಪ್ರೌಢ ವಿದ್ಯಾರ್ಥಿಗಳು ಅವರ ಸಾಹಿತ್ಯವನ್ನು ಪರಾಮರ್ಶಿಸದೆ ಮುಂದೆ ಹೋಗಲು ಸಾಧ್ಯವೇ ಇಲ್ಲ ಎನ್ನುವ ಮಟ್ಟಿಗೆ ಈ ಕ್ಷೇತ್ರದಲ್ಲಿ ಅವರ ಸಾಧನೆ ಇದೆ.

ಗ್ರಂಥ ಸಂಪಾದನೆ ಅವರ ಇನ್ನೊಂದು ಆಸಕ್ತಿಯ ಕ್ಷೇತ್ರ. ‘ಬಸವ ಪುರಾಣ ಸಂಗ್ರಹ’, ‘ಕುಮುದೇಂದು ರಾಮಾಯಣ’, ‘ಶಾಂತಿನಾಥ-ಆಂಡಯ್ಯ ಸಂಪುಟ’, ಪಂಪನ ‘ಆದಿಪುರಾಣ’ ಮತ್ತು ‘ವಿಕ್ರಮಾರ್ಜುನ ವಿಜಯಗಳ’ ಸಂಕ್ಷಿಪ್ತ ಆವೃತ್ತಿ, ‘ಕುಮಾರವ್ಯಾಸ ಭಾರತ ಸಂಗ್ರಹ’, ವೆಂಕಾಮಾತ್ಯ ರಾಮಾಯಣದ ‘ಯುದ್ಧಕಾಂಡ’ ಇವು ಅವರು ಸಂಪಾದಿಸಿರುವ ಪ್ರಮುಖ ಕೃತಿಗಳು.

ಅನುವಾದ ಅವರ ಮತ್ತೊಂದು ಪ್ರಿಯವಾದ ಮತ್ತು ಆಸಕ್ತಿಯ ಕ್ಷೇತ್ರ. ಇಂಗ್ಲಿಷ್ ಮತ್ತು ತೆಲುಗು ಭಾಷೆಗಳಿಂದ ಅವರು ಹಲವಾರು ಕೃತಿಗಳನ್ನು ಅನುವಾದಿಸಿದ್ದಾರೆ. ಈ ಅನುವಾದಗಳ ಸಂಖ್ಯೆಯೇ ಇಪ್ಪತ್ತೆರಡರಷ್ಟಿದೆ. ಬರ್ಟ್ರಂಡ್ ರಸೆಲ್‌ನ ಪಾಶ್ಚಾತ್ಯ ತತ್ವಶಾಸ್ತ್ರದ ಇತಿಹಾಸದ ಬೃಹತ್ ಗ್ರಂಥವೂ ಇವುಗಳಲ್ಲಿ ಸೇರಿದೆ. ಪಾಲ್ಕುರಿಕೆ ಸೋಮನಾಥನ ತೆಲುಗು ಬಸವಪುರಾಣದ ಕಾವ್ಯಾನುವಾದ, ವೆಂಕಾಮಾತ್ಯ ರಾಮಾಯಣದ ಗದ್ಯಕಥನ ಹೆಸರಿಸಲೇಬೇಕಾದವು.


ಹಳಗನ್ನಡ ಸಾಹಿತ್ಯಾಭ್ಯಾಸಿಗಳಿಗೆ ನೆರವಾಗಲು ಅವರು ರಚಿಸಿರುವ ನಾಲ್ಕು ನಿಘಂಟುಗಳಾದ ‘ಪಂಪನ ನುಡಿಗಣಿ’, ‘ಚೆಂಪೂ ನುಡಿಗನ್ನಡಿ’, ‘ಹಳಗನ್ನಡ ಪದಸಂಪದ’ ಮತ್ತು ‘ಪದಸಂಚಯ’ ಹಾಗೂ ಜೈನಪರಿಭಾಷೆ’ ಇವುಗಳು ಹಳಗನ್ನಡದಲ್ಲಿನ ಅವರ ತಲಸ್ಪರ್ಶಿಯಾದ ಪಾಂಡಿತ್ಯಕ್ಕೆ ಸಾಕ್ಷಿಯಾಗಿವೆ.

ಅನುಭವ ಶೋಧನೆಯ ಸಲುವಾಗಿ ಸೃಜನಶೀಲ ಕ್ಷೇತ್ರದಲ್ಲೂ ಸಮದಂಡಿಯಾಗಿ ಕೃತಿ ರಚಿಸಿರುವುದಕ್ಕೆ ಗುರುತಾಗಿ ಅವರ ‘ಸಾಮಾನ್ಯ’, ‘ಶೋಧನೆ’, ‘ನಿರ್ಧಾರ’ ‘ಧರ್ಮಕಾರಣ’ವೇ ಮೊದಲಾದ 9 ಕಾದಂಬರಿಗಳಿವೆ. ಇವು ಒಂದೊಂದೂ ತನ್ನ ವಸ್ತು ವಿಶೇಷ ಮತ್ತು ಅದನ್ನು ನಿರ್ವಹಿಸಿರುವ ರೀತಿಯಿಂದಾಗಿ ಓದುಗರನ್ನು ಹಿಡಿದಿಟ್ಟುಕೊಂಡು ತನ್ನ ಕೇಂದ್ರದತ್ತ ಸೆಳೆದುಕೊಳ್ಳುತ್ತ ಓದಿಸಿಕೊಂಡು ಹೋಗುವ ಗುಣವನ್ನು ಮಿಗಿಲಾಗಿ ಹೊಂದಿವೆ.

ಶಿವನ ವಿಷಯಕ್ಕೆ ಬಸವಣ್ಣನ ವೀರನಿಷ್ಠೆಯಂತೆಯೇ ಕನ್ನಡದ ವಿಷಯಕ್ಕೆ ಅವರದು ಅನನ್ಯ ವೀರನಿಷ್ಠೆ ಮತ್ತು ಹುಚ್ಚು ಎನಿಸುವಷ್ಟು ಪ್ರೀತಿ. ಉತ್ತರಮುಖಿಯನ್ನು ಯಾವ ದಿಕ್ಕಿಗಿಟ್ಟರೂ ಅದು ಕೂಡಲೇ ಉತ್ತರದಿಕ್ಕಿಗೇ ತಿರುಗಿಕೊಳ್ಳುವಂತೆ ಪಿ.ವಿ.ಎನ್ ಅವರು ಸದಾ ಕನ್ನಡಮುಖಿ. ಕನ್ನಡದ ಸ್ಥಾನಮಾನಗಳ ವಿಷಯಕ್ಕೆ ಬಂದರೆ ಯಾವ ಬಗೆಯ ಹೋರಾಟಕ್ಕಾದರೂ ಅವರು ಸಿದ್ಧ. ಕನ್ನಡ ನಾಡಿಗೊಂದು ಪ್ರಾದೇಶಿಕ ಪಕ್ಷ ಬೇಕೆಂಬ, ಹಲವು ರಾಜ್ಯಗಳ (= ರಾಷ್ಟ್ರಗಳ) ಒಕ್ಕೂಟವಾದ ಭಾರತವನ್ನು ಪ್ರಾದೇಶಿಕ ಪಕ್ಷಗಳ ಒಕ್ಕೂಟವೊಂದು ಆಳಬೇಕೆಂಬ ಹಲವರಿಗೆ ಪಥ್ಯವಲ್ಲದ ಇಂಥ ಹಲವು ವಿಚಾರಗಳ ನಾರಾಯಣರ ಗ್ರಂಥ ‘ಕನ್ನಡತನ ಮತ್ತು ಭಾರತೀಯತೆ’ ಕನ್ನಡ ಚಳವಳಿಗೊಂದು ಅನನ್ಯ ಕಾಣಿಕೆ. ಸಾಹಿತಿ ಕಲಾವಿದರ ಬಳಗದ,ಕನ್ನಡ ಶಕ್ತಿಕೇಂದ್ರದ ಸಕ್ರಿಯ ಸಂಚಾಲಕರಾಗಿ ಗೋಕಾಕ್ ಚಳವಳಿ ಮೊದಲುಗೊಂಡು ಅವರು ಭಾಗವಹಿಸದಿರುವ ಹೋರಾಟವೇ ಇಲ್ಲವೆನ್ನಬಹುದು. ಅಲ್ಲದೆ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದವರೆಂಬ ಕಾರಣಕ್ಕೆ ಆ ಕ್ಷೇತ್ರದಲ್ಲಿ ಸಹಜವಾಗಿಯೇ ತಾರಾ ವರ್ಚಸ್ಸು ಹೊಂದಿರುವವರು.

ನಾಡಿನ ಪ್ರತಿಷ್ಠಿತ ಸಾಹಿತ್ಯ ಮತ್ತು ಸಂಶೋಧನ ಸಂಸ್ಥೆಯಾದ ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷರಾಗಿ ಅವರು ಮಾಡಿದ ಕಾರ್ಯ ಮೇಲಿನ ಅವರ ಬರಹ ಮತ್ತು ಹೋರಾಟಗಳಷ್ಟೇ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಮಹತ್ವವುಳ್ಳದು. ಹಾಗೆಯೇ ಉದಯಭಾನು ಕಲಾಸಂಘದಲ್ಲಿ ಶಾಸ್ತ್ರೀಯ ಕನ್ನಡದ ಅಧ್ಯಯನಾಂಗದ ಡೀನ್ ಆಗಿ ಆ ಸಂಸ್ಥೆಯ ಕನ್ನಡ ಪ್ರಕಟಣೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯ ಕೂಡ ತುಂಬ ಮಹತ್ವದ್ದು.

ಪ್ರಶಸ್ತಿಗಳಿಗಾಗಿ ಯಾವ್ಯಾವುದೋ ರೀತಿಯಲ್ಲಿ ಲಾಬಿಗಳನ್ನು ನಡೆಸುವ ಈ ಕಾಲದಲ್ಲಿ ತಮ್ಮನ್ನು ಅರಸಿಬಂದ ಹಲವಾರು ಪ್ರಶಸ್ತಿಗಳನ್ನು ನಯವಾಗಿಯೇ ನಿರಾಕರಿಸುವ ಮೂಲಕ ಪ್ರಶಸ್ತಿ ಒಬ್ಬ ವ್ಯಕ್ತಿಯ ಸಾಧನೆಯ ಅಳತೆಗೋಲಾಗಬೇಕಾಗಿಲ್ಲ ಎಂಬುದಕ್ಕೆ ನಿದರ್ಶನದಂತಿರುವ ಹಾಗೂ ಕನ್ನಡಕ್ಕಾಗಿ ಇಷ್ಟೆಲ್ಲ ಕೆಲಸ ಮಾಡಿರುವ ಈ ಹಿರಿಯ ಸಾಧಕರಿಗೆ ಈಗ ಭರ್ತಿ ಎಂಬತ್ತು ವರ್ಷಗಳು. ಈ ವಿದ್ವತ್ ಪ್ರತಿಭೆ ಕನ್ನಡದ ಅಂಗಳವನ್ನು ದಶಕಗಳಿಂದ ಬೆಳಗುತ್ತಲಿದೆ.



ಚಲನಚಿತ್ರದ ‘ಚುಟುಕು’ ಚರಿತ್ರೆ

ಮಹತಿ

ಒಂಬತ್ತು ದಶಕಗಳ ಕನ್ನಡ ಸಿನಿಮಾ ಚರಿತ್ರೆಯ ಪ್ರಮುಖ ಮೈಲಿಗಲ್ಲುಗಳನ್ನು ಗುರ್ತಿಸುವ ಪ್ರಯತ್ನದ ‘ಹೆಜ್ಜೆ ಗುರುತು’, ಚುಟುಕು–ಗುಟುಕು ಮಾದರಿಯ ಕೃತಿ.

ಕನ್ನಡ ಚಲನಚಿತ್ರ ಚರಿತ್ರೆಗೆ ಸಂಬಂಧಿಸಿದಂತೆ ಈಗಾಗಲೇ ಕೆಲವು ಕೃತಿಗಳು ಪ್ರಕಟವಾಗಿವೆ. ಇತಿಹಾಸದ ಭಿನ್ನ ನೋಟ–ವ್ಯಾಖ್ಯಾನಗಳು ಸಾಧ್ಯವಾದುದರಿಂದ, ಹೊಸ ಕೃತಿಗಳಿಗೆ ಅವಕಾಶವಿದ್ದೇ ಇದೆ. ಆದರೆ, ‘ಹೆಜ್ಜೆ ಗುರುತು‘ ಕೃತಿ ಭಿನ್ನ ನೋಟ ಅಥವಾ ವ್ಯಾಖ್ಯಾನಗಳ ಉದ್ದೇಶವನ್ನು ಹೊಂದಿಲ್ಲ. ಇದು ಮಾಹಿತಿಪ್ರಧಾನ ಕೃತಿ. ಸಿನಿಮಾಗಳ ಮೂಲಕ ಇತಿಹಾಸವನ್ನು ವಿಶ್ಲೇಷಿಸುವ ಮಾದರಿಯ ಬದಲು, ಕನ್ನಡ ಸಿನಿಮಾರಂಗವನ್ನು ರೂಪಿಸಿದ ಸಾಧಕರ ಹೆಜ್ಜೆಗುರುತುಗಳನ್ನು ದಾಖಲಿಸುವ ಮೂಲಕ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ಈ ಕೃತಿಯಲ್ಲಿದೆ. ಮಾಹಿತಿಯನ್ನು ಬಯಸುವ ಓದುಗರಿಗೆ ಇದು ಅನುಕೂಲಕರ ಮಾದರಿ.

ಅ.ನಾ. ಪ್ರಹ್ಲಾದರಾವ್ ಅವರದು ಸಂಗ್ರಹಿಸಿದ ಮಾಹಿತಿಯನ್ನು ಜೋಡಿಸುವ ಕ್ರಮ. ಆದರೆ, ಈ ಜೋಡಣೆಯೇನೂ ಸುಸಂಬದ್ಧವಾಗಿಲ್ಲ. ಖಾಲಿ ಜಾಗಗಳನ್ನು ತುಂಬುವ ಉದ್ದೇಶದಂತೆ ಪುಸ್ತಕದುದ್ದಕ್ಕೂ ಇಡುಕಿರಿದಿರುವ ‘ಪರಿಚಯ’ಗಳು ಮಾಹಿತಿ ನೀಡುವುದಕ್ಕಿಂತಲೂ ಹೆಚ್ಚಾಗಿ ಓದಿನ ರಸಭಂಗವನ್ನು ಉಂಟುಮಾಡುತ್ತವೆ. ಕನ್ನಡದ ಮೊದಲ ವಾಕ್ಚಿತ್ರಗಳ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ‘ನಿರ್ದೇಶಕ ಪಿ. ವಾಸು’ ಅವರ ಒಂದು ಪುಟದ ಪರಿಚಯ ಇದ್ದಕ್ಕಿದ್ದಂತೆ ಎದುರಾಗುತ್ತದೆ. ಇಂಥ ಪರಿಚಯಗಳನ್ನು ‘ಅನುಬಂಧ’ದ ರೂಪದಲ್ಲಿ ಪ್ರತ್ಯೇಕವಾಗಿ ನೀಡಬಹುದಾಗಿತ್ತು.


ಕೆಲವು ಮಾಹಿತಿಗಳು ಅಸ್ಪಷ್ಟತೆ ಹಾಗೂ ತಪ್ಪುಗ್ರಹಿಕೆಗೆ ಆಸ್ಪದ ಕಲ್ಪಿಸುವಂತಿವೆ. ‘ನಟಿ ಲಕ್ಷ್ಮೀಬಾಯಿ’ ಶೀರ್ಷಿಕೆಯಲ್ಲಿ, ‘ನಾಯಕಿ ಸುಲೋಚನಾ’ ಪಾತ್ರವನ್ನು ತ್ರಿಪುರಾಂಬ ನಿರ್ವಹಿಸಿದರು’ ಎನ್ನುವ ಮಾಹಿತಿಯಿದೆ. ಎರಡು ಪುಟಗಳ ನಂತರದ, ‘ಮೊದಲ ಚಿತ್ರದ ನಟಿ ಎಸ್.ಕೆ. ಪದ್ಮಾದೇವಿ’ ಎನ್ನುವ ಶೀರ್ಷಿಕೆಯ ಬರಹ ಆರಂಭವಾಗುವುದೇ, ‘ಕನ್ನಡದ ಮೊದಲ ಚಲನಚಿತ್ರ ಸತಿ ಸುಲೋಚನಾ ಪಾತ್ರಧಾರಿ ಎಸ್.ಕೆ. ಪದ್ಮಾದೇವಿ’ ಎನ್ನುವ ಸಾಲಿನಿಂದ. ಆದರೆ, ಪದ್ಮಾದೇವಿ ನಟಿಸಿದ್ದು ಕನ್ನಡದ ಎರಡನೇ ವಾಕ್ಚಿತ್ರ ‘ಭಕ್ತ ಧ್ರುವ’ದಲ್ಲಿ, ‘ಸತಿ ಸುಲೋಚನಾ‘ದಲ್ಲಿ ಅಲ್ಲ.

‘ಬೇಡರ ಕಣ್ಣಪ್ಪ’ ಚಿತ್ರಕ್ಕೆ ಸಂಬಂಧಿಸಿದ ಬರಹದಲ್ಲಿ – “1934ರಲ್ಲಿ ಕನ್ನಡ ಮೊದಲ ಚಿತ್ರ ‘ಸತಿ ಸುಲೋಚನಾ’ ಬಿಡುಗಡೆಗೊಂಡ ದಿನದಿಂದ 1954ರವರೆಗೆ ರಾಜಕುಮಾರ್ ಅಭಿನಯದ ‘ಬೇಡರ ಕಣ್ಣಪ್ಪ’ ಚಿತ್ರ ಬಿಡುಗಡೆಗೊಳ್ಳುವವರೆಗೆ 39 ಚಲನಚಿತ್ರಗಳು ಬಿಡುಗಡೆಗೊಂಡಿದ್ದವಾದರೂ, ಯಾವುದೇ ಚಿತ್ರ ಕೇಂದ್ರ ಸರ್ಕಾರದ ಪ್ರಶಸ್ತಿಗೆ ಪುರಸ್ಕೃತಗೊಂಡಿರಲಿಲ್ಲ. ‘ಬೇಡರ ಕಣ್ಣಪ್ಪ’ ಆ ಕೊರತೆಯನ್ನು ನೀಗಿಸಿ ರಾಷ್ಟ್ರಪತಿಗಳ ಅರ್ಹತಾ ಪತ್ರ ತಂದುಕೊಟ್ಟಿತು” ಎನ್ನುವ ಮಾಹಿತಿಯಿದೆ. ಆದರೆ, ರಾಷ್ಟ್ರಪ್ರಶಸ್ತಿಗಳನ್ನು ನೀಡುವ ಪರಿಪಾಟ ಆರಂಭವಾದುದೇ 1954ರಲ್ಲಿ. ಹಾಗಾಗಿ, ‘ಬೇಡರ ಕಣ್ಣಪ್ಪ’ನಿಗೆ ಮುನ್ನಾ ಸಿನಿಮಾಗಳು ರಾಷ್ಟ್ರಪತಿಗಳ ಅರ್ಹತಾ ಪತ್ರ ಪಡೆಯುವ, ಪಡೆಯದಿರುವ ಪ್ರಶ್ನೆಯೇ ಎದುರಾಗುವುದಿಲ್ಲ.

ತಾತ್ವಿಕತೆಯ ದೃಷ್ಟಿಯಿಂದಲೂ ಪ್ರಹ್ಲಾದರಾವ್ ಅವರ ಕೆಲವು ವಿಚಾರಗಳು ಚರ್ಚೆಗೆ ಆಸ್ಪದ ಕಲ್ಪಿಸುವಂತಿವೆ. ಸ್ತ್ರೀವಾದಿ ನೆಲೆಗಟ್ಟಿನಲ್ಲಿ ಮಹಿಳಾ ಶೋಷಣೆ ವಿರುದ್ಧ ಭಾರತದಲ್ಲಿ ಆರಂಭವಾದ ಚಳವಳಿ ಮತ್ತು ಹೋರಾಟಗಳಿಗೆ ಮೊದಲೇ ಪುಟ್ಟಣ್ಣ ಕಣಗಾಲ್ ತಮ್ಮ ಚಿತ್ರಗಳಲ್ಲಿ ಪರಿವರ್ತನೆಯ ನಾಂದಿ ಹಾಡಿದರು ಎನ್ನುವ ಅಭಿಪ್ರಾಯವನ್ನು ಒಪ್ಪುವುದು ಕಷ್ಟ. ಪುಟ್ಟಣ್ಣನವರ ಸಿನಿಮಾಗಳಲ್ಲಿ ಹೆಣ್ಣಿನ ಸಾಂಪ್ರದಾಯಿಕ ಚೌಕಟ್ಟಿನ ಗ್ರಹಿಕೆಯ ಚಿತ್ರಣಗಳಿವೆಯೇ ಹೊರತು, ಆಧುನಿಕ ಸ್ತ್ರೀವಾದಿ ವಿಚಾರಗಳ ತಾತ್ವಿಕತೆಯಲ್ಲ.

ಮೂಕಿಚಿತ್ರಗಳಿಂದ ಹೊಸ ಅಲೆಯ ಚಿತ್ರಗಳವರೆಗೆ ಕನ್ನಡ ಚಿತ್ರರಂಗ ಸಾಗಿಬಂದ ಹಾದಿಯ ಚಿತ್ರಣಕ್ಕೆ ಕೃತಿಯಲ್ಲಿ 450 ಪುಟಗಳು ಮೀಸಲಾಗಿದ್ದರೆ, 1966–2021ರವರೆಗಿನ ‘ಕನ್ನಡ ಚಿತ್ರಗಳು ಮುದ್ರಿಸಿದ ಹೆಜ್ಜೆಗುರುತುಗಳು’ ದಾಖಲೆಗೆ ದೊರೆತಿರುವುದು 80 ಪುಟಗಳಷ್ಟೇ. ಈ ಅಸಮತೋಲನದಿಂದಾಗಿ, ‘ತಿಥಿ’ಯಂಥ ಸಿನಿಮಾ ಪ್ರಾಸಂಗಿಕವಾಗಿಯಷ್ಟೇ ಬಂದುಹೋಗುತ್ತದೆ.

‘ಹೆಜ್ಜೆ ಗುರುತು’ ಕೃತಿಯನ್ನು ಪ್ರಹ್ಲಾದರಾವ್ ಅವರ ಮುಂದಿನ ಕೃತಿಗಳಿಗೆ ನಾಂದಿ ರೂಪದ ಕೃತಿ ಎಂದು ಭಾವಿಸಬಹುದು. ಈ ಕೃತಿಯಲ್ಲಿರುವ ಅಪಾರ ಮಾಹಿತಿ, ಸಿನಿಮಾ ಅಭ್ಯಾಸಿಗಳಿಗೆ ಆಕರವೂ ಹೌದು.



ಪು: 580 ₹750

ಹೆಜ್ಜೆ ಗುರುತು
ಲೇ: ಅ.ನಾ. ಪ್ರಹ್ಲಾದರಾವ್
ಪ್ರ: ತಾರಾ ಪ್ರಿಂಟ್ಸ್, ಮೈಸೂರು
ಸಂ: 9611227565

ಸೃಜನಶೀಲತೆಯ ಅಗ್ನಿದಿವ್ಯ!

10ನೇ ಪುಟದಿಂದ...

ಬರವಣಿಗೆಯ ವಿಷಯದಲ್ಲಿ ಸದ್ಯಕ್ಕೆ ಪರೀಕ್ಷೆಯಲ್ಲಿ ಅಚ್ಚುಕಟ್ಟಾಗಿ ಪುಟ ತುಂಬಿಸುವ ಚಾಲಾಕಿಗಳ ಹಂತದಲ್ಲಿದೆ ಈ Chat GPT. ಆದರೆ, ಪುಟ ತುಂಬಿಸಿರುವುದರಲ್ಲಿ ಸತ್ವವೇನಾದರೂ ಇದೆಯೇ ಎಂದು ಹುಡುಕಿದರೆ ನಿಜಬಣ್ಣ ಬಯಲಾಗುತ್ತದೆ. ಈ AIಗೆ ಸದ್ಯ ಇರುವ ಮಿತಿಯೂ ಇದೇ.

ಇದು ನೂರಾರು ಪದಗಳನ್ನು ಚಕಚಕನೆ ಬರೆದುಕೊಡಬಹುದು. ಆದರೆ, ಸತ್ವದ ವಿಚಾರದಲ್ಲಿ Chat GPT ವಿಶ್ವಾಸ ಗಳಿಸಿಕೊಳ್ಳುವುದು ಅಷ್ಟು ಸುಲಭವಿಲ್ಲ. ಅಲ್ಲದೆ, ಈ ಲೇಖನದ ಮೊದಲಿಗೆ ಪಟ್ಟಿ ಮಾಡಿರುವ ಕಳಂಕವೂ ಈಗಾಗಲೇ ಇದಕ್ಕೆ ಮೆತ್ತಿಕೊಂಡಿರುವುದರಿಂದ ಇದರ ಕಂಟೆಂಟ್ ಅನ್ನು ಕಣ್ಣು ಮುಚ್ಚಿಕೊಂಡು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್ (NLP) ಇನ್ನೂ ಆ ಹಂತ ತಲುಪಿಲ್ಲ.

ಏನಿದು NLP?: ಮನುಷ್ಯ ಭಾಷೆಯನ್ನು ಯಂತ್ರಗಳಿಗೆ ಸಹಜವಾಗಿ ಅರ್ಥ ಮಾಡಿಸುವ ಪ್ರಕ್ರಿಯೆ ಈ NLP. ಧ್ವನಿ ಅಥವಾ ಬರಹದ ಮೂಲಕ ನೀಡುವ ಕಮಾಂಡ್ ಅನ್ನು ಯಂತ್ರಗಳು ಮನುಷ್ಯರಂತೆಯೇ ಅರ್ಥ ಮಾಡಿಕೊಳ್ಳಲು ಈ ಪ್ರಕ್ರಿಯೆ ನೆರವಾಗುತ್ತದೆ. Chat GPTಯಲ್ಲಿ ಇದರ ಮುಂದುವರಿದ ತಂತ್ರಜ್ಞಾನ ಬಳಕೆಯಾಗುತ್ತಿದೆ. ಇದೇ ಕಾರಣಕ್ಕೆ ನಾವು ಕೊಡುವ ಕಮಾಂಡ್ ಅನ್ನು ಅದು ಕ್ಷಣಮಾತ್ರದಲ್ಲೇ ಬರೆದು ಮುಗಿಸುತ್ತದೆ. ಯಾವುದೇ ಭಾಷೆಯಿಂದ ಇನ್ಯಾವುದೇ ಭಾಷೆಗೆ ಬರಹವನ್ನು ಭಾಷಾಂತರಿಸುವ, ಧ್ವನಿಯ ಮೂಲಕ ನೀಡುವ ಕಮಾಂಡ್‌ಗಳಿಗೆ ಪ್ರತಿಕ್ರಿಯಿಸುವ ಹಾಗೂ ಬರಹವನ್ನು ಸಂಸ್ಕರಿಸಿ ಸಂಕ್ಷಿಪ್ತಗೊಳಿಸುವ AIನ ಕೆಲಸವನ್ನು NLP ಸುಲಭವಾಗಿಸುತ್ತದೆ. ಮಾಹಿತಿ ಸಂಗ್ರಹ ಮತ್ತು ಬರಹದ ಸಂಸ್ಕರಣೆ ಎರಡೂ ಕೆಲಸಗಳು Chat GPTಯ ಮೂಲಕ ಆಗುತ್ತಿರುವುದರಿಂದ ಇದರ ಕೆಲಸ ಅಚ್ಚರಿಯ ಹಾಗೆ ಕಾಣುತ್ತಿದೆಯಷ್ಟೆ.

ನೀವು ಗೂಗಲ್‌ಗೆ ಕೊಡುವ ವಾಯ್ಸ್ ಕಮಾಂಡ್ ಅದರ ಸರ್ಚ್ ಎಂಜಿನ್, ಫೋಟೊ, ವಿಡಿಯೊ, ನ್ಯೂಸ್, ಮ್ಯಾಪ್, ಟ್ರಾನ್ಸ್‌ಲೇಷನ್ ಸೇರಿದಂತೆ ಗೂಗಲ್‌ನ ಎಲ್ಲಾ ಸೇವೆಗಳಲ್ಲೂ ಹುಡುಕುವಂತೆ ಮಾಡಲು ನೆರವಿಗೆ ಬರುವುದು ಇದೇ NLP. ಮನುಷ್ಯಜೀವಿಯ ಉಗಮ, ವಿಕಾಸದ ಜತೆಗೆ ಭಾಷೆಗಳಲ್ಲಿ ಏನೆಲ್ಲಾ ಬೆಳವಣಿಗೆಗಳಾಗಿವೆಯೋ ಅವನ್ನೆಲ್ಲಾ ಜೀರ್ಣಿಸಿಕೊಂಡು ಈ ತಂತ್ರಜ್ಞಾನ ಸುಧಾರಿಸುತ್ತಿದೆ. ವ್ಯಾಕರಣ, ರೂಪಕ, ವಾಕ್ಯ ರಚನೆ, ಸಂಧಿ, ಸಮಾಸ, ನುಡಿಗಟ್ಟು, ಧ್ವನಿ, ಅರ್ಥ, ಅಲಂಕಾರ - ಇವುಗಳನ್ನೆಲ್ಲಾ NLP ವ್ಯವಸ್ಥೆಯು ಯಂತ್ರಗಳಿಗೆ ಮನುಷ್ಯನಷ್ಟೇ ಸಹಜವಾಗಿ ಅರ್ಥ ಮಾಡಿಸಲು ಪ್ರಯತ್ನಿಸುತ್ತದೆ.

‘ಸೆಂಟಿಮೆಂಟ್ ಅನಾಲಿಸಿಸ್’ ಎಂಬ ಟಾಸ್ಕ್ ಅಂತೂ ನೀವು ಕಮಾಂಡ್ ಕೊಡುವಾಗ ನಿಮ್ಮ ಭಾವನೆ ಹೇಗಿದೆ ಎನ್ನುವುದನ್ನು ಗ್ರಹಿಸಿ AI ನಿಮಗೆ ಸ್ಪಂದಿಸಲು ನೆರವಾಗುತ್ತದೆ. ಇದರ ಜತೆಜತೆಗೆ RLHF (ರಿಇನ್‌ಫೋರ್ಸ್‌ಮೆಂಟ್ ಲರ್ನಿಂಗ್ ಫ್ರಮ್ ಹ್ಯೂಮನ್ ಫೀಡ್‌ಬ್ಯಾಕ್) ವ್ಯವಸ್ಥೆಯೂ ಮನುಷ್ಯನನ್ನು ಅರ್ಥ ಮಾಡಿಕೊಳ್ಳಲು AIಗೆ ಸಹಕಾರಿಯಾಗುತ್ತಿದೆ.

ಕಲೆಯೂ, ತಲೆಯೂ, ವಿವೇಚನೆಯೂ...: ಮನುಷ್ಯಜೀವಿಯ ಸೃಜನಶೀಲತೆಗೆ ಮುಂದಿನ ದಿನಗಳಲ್ಲಿ ಕೆಲಸವೇ ಇಲ್ಲದಂತೆ ಮಾಡುವ ದಾಪುಗಾಲನ್ನು AI ಮಾಡುತ್ತಿದೆ ಎಂಬುದು ಸದ್ಯದ ಆತಂಕ. ಇದು ಉತ್ಪ್ರೇಕ್ಷೆ ಏನಲ್ಲ. ಸಾವಿರಾರು ವರ್ಷಗಳಿಂದ ಬೆಳೆದು ಬಂದಿರುವ ತಂತ್ರಜ್ಞಾನದ ಎಲ್ಲಾ ಆಯಾಮಗಳೊಂದಿಗೆ ಮನುಷ್ಯ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ದಾರಿಯಲ್ಲಿದೆ AI. ಕಮಾಂಡ್ ಕೊಡುವವರು ಶೇ 10ರಷ್ಟು ಮಿದುಳು ಉಪಯೋಗಿಸಿದರೆ ಉಳಿದ ಶೇ 90ರಷ್ಟು ಮಿದುಳಿನ ಕೆಲಸವನ್ನು AI ಮಾಡಿಕೊಡುತ್ತದೆ.

ಪೇಂಟ್ ಮಾಡುವ, ಹಾಡು ಹೇಳುವ, ಪಿಟೀಲು ನುಡಿಸುವ ರೋಬೊಗಳನ್ನು ತಮಾಷೆಯಾಗಿ ನೋಡುವ ಕಾಲ ಮುಗಿದಾಗಿದೆ. ಸಂಗೀತ ಕ್ಷೇತ್ರದಲ್ಲಿ ಈಗಾಗಲೇ ಬಳಕೆಯಲ್ಲಿರುವ AI ಸೌಂಡ್‌ಟ್ರ್ಯಾಕ್, ಸೌಂಡ್‌ಸ್ಕೇಪ್ ಎಡಿಟಿಂಗ್‌ನ ಬಹುಪಾಲು ಕೆಲಸವನ್ನು ತಾನೇ ಮಾಡುತ್ತಿದೆ. ಸಂಗೀತ ಸಂಯೋಜನೆ ಮಾತ್ರವಲ್ಲದೆ, ರಾಗ, ತಾಳ, ಪ್ರಾಕಾರಗಳ ಜತೆಗೆ ಯಾವ ಹಾಡುಗಾರರ ಧಾಟಿಯಲ್ಲಿ ಬೇಕೋ ಹಾಗೆ ಹಾಡನ್ನೂ AIನಿಂದ ಹಾಡಿಸಬಹುದು. ಆದರೆ, ಸೃಷ್ಟಿಕ್ರಿಯೆಯ ವಿಚಾರದಲ್ಲಿ ಈ ತಂತ್ರಜ್ಞಾನಕ್ಕಿರುವ ದೊಡ್ಡ ಮಿತಿ ಮನುಷ್ಯನಿಗಿರುವ ವಿವೇಚನೆ.

ತಂತ್ರಜ್ಞಾನದ ಭಾರೀ ಬದಲಾವಣೆಯ ಬಗ್ಗೆ ಭವಿಷ್ಯ ನುಡಿಯುವಂಥ ಸಾಕಷ್ಟು ವೈಜ್ಞಾನಿಕ ಕಾದಂಬರಿಗಳು ಶತಮಾನಗಳ ಹಿಂದೆಯೇ ಬಂದಿವೆ. 1872ರಲ್ಲಿ ಬಂದ ಸಾಮ್ಯುಲ್ ಬಟ್ಲರ್‌ನ ‘ಏರವನ್’ ಕಾದಂಬರಿಯಲ್ಲೇ AIನ ಸಾಧ್ಯತೆಗಳನ್ನು ಚಿತ್ರಿಸಲಾಗಿದೆ. ಈ ಕಾದಂಬರಿಗೆ ಪ್ರೇರಣೆಯಾಗಿದ್ದು ಚಾರ್ಲ್ಸ್ ಡಾರ್ವಿನ್‌ನ ‘ಆನ್ ದಿ ಆರಿಜನ್ ಆಫ್ ಸ್ಪೀಶೀಸ್’ ಮತ್ತು 18ನೇ ಶತಮಾನದ ಕೈಗಾರಿಕಾ ಕ್ರಾಂತಿ ಎಂಬ ಮಾತೂ ಇದೆ. ರೋಬೊಗಳ ಬಗ್ಗೆಯಂತೂ ದಂಡಿದಂಡಿ ಸಿನಿಮಾಗಳು ಬಂದಿವೆ. 1897ರ ‘Gusse etl’Automate’ ಎಂಬ ಫ್ರೆಂಚ್ ಶಾರ್ಟ್‌ನಿಂದ ಹಿಡಿದು ತಮಿಳಿನ ‘ಎಂದಿರನ್’, ಮಲಯಾಳದ ‘ಆಂಡ್ರಾಯ್ಡ್ ಕುಂಜಪ್ಪನ್’ವರೆಗೆ ಮನುಷ್ಯ - ರೋಬೊ ಸಂಬಂಧದ ವಿಷಯವಾಗಿ ಸಾಕಷ್ಟು ಸಿನಿಮಾಗಳು ಈ ತಂತ್ರಜ್ಞಾನದ ಭವಿಷ್ಯದ ಬಗ್ಗೆ ತಿಳಿಸಿವೆ.


ಹೀಗೆ ಸೃಜನಶೀಲತೆಗೆ ವಸ್ತುವಾಗುತ್ತಿದ್ದ AI ಈಗ ತಾನೇ ಹಾಡು ಹಾಡುವ, ಕವಿತೆ ಬರೆಯುವ, ಪೇಂಟ್ ಮಾಡುವ ಸೃಜನಶೀಲ ಸೃಷ್ಟಿಯ ಕೆಲಸ ಮಾಡುವ ಹಂತ ತಲುಪಿದೆ. ಕೆಲ ವರ್ಷಗಳ ಹಿಂದೆ ಡೀಪ್‌ಮೈಂಡ್ AI ಚೆಸ್‌ಗಿಂತಲೂ ಸಂಕೀರ್ಣವಾದ ‘ಗೋ’ ಆಟದಲ್ಲಿ ವಿಶ್ವ ಚಾಂಪಿಯನ್ ಅನ್ನೇ ಸೋಲಿಸಿತ್ತು. ಹೀಗೆ AI ತಂತ್ರಜ್ಞಾನ ಮತ್ತು ಅದರ ಕವಲುಗಳು ಬೆಳೆಯುತ್ತಿರುವ ಅತಿವೇಗವನ್ನು ನೋಡಿದರೆ ನಿಜಕ್ಕೂ ದಿಗಿಲಾಗುತ್ತದೆ.

AIನಿಂದ ಮನುಷ್ಯನಿಗೆ ಸಾಕಷ್ಟು ಪ್ರಯೋಜನ ಇದ್ದರೂ ಇದು ಮನುಷ್ಯನ ಬುದ್ಧಿಯನ್ನೂ ಮೀರಿ ಬೆಳೆಯುವ ಮೂಲಕ ಜಗತ್ತಿಗೆ ಅಪಾಯ ತಂದೊಡ್ಡುವ ಆತಂಕವೂ ಇದೆ. ‘AI ಮೇಲೆ ನಿಯಂತ್ರಣ ಇಡಬೇಕಾದ್ದು ಇಂದಿನ ಜಾಗತಿಕ ಜರೂರು’ ಎಂದು ಡೀಪ್‌ಮೈಂಡ್ ಕಂಪೆನಿಯ ಸಿಇಒ ಡೆಮಿಸ್ ಹಸಬೀಸ್ ಕಳೆದ ವಾರ ಸಂದರ್ಶನವೊಂದರಲ್ಲಿ ಎಚ್ಚರಿಸಿದ್ದಾರೆ. AI ಬೆಳವಣಿಗೆಯಿಂದ ಸೇವಾವಲಯದಲ್ಲಿ ದೊಡ್ಡ ಉದ್ಯೋಗ ನಷ್ಟವಾಗುವ ಸಾಧ್ಯತೆಯೂ ಇದೆ.

AI ತಂತ್ರಜ್ಞಾನ ಹೆಚ್ಚೆಚ್ಚು ಅಭಿವೃದ್ಧಿಯಾದಂತೆ ಅದು ಮನುಷ್ಯನ ಕಮಾಂಡ್‌ಗೆ ಕಾಯದೆ ತಾನೇ ನಿರ್ಧಾರ ತೆಗೆದುಕೊಳ್ಳುವ ಹಂತಕ್ಕೆ ಬೆಳೆಯುತ್ತದೆ ಎಂಬುದು ಸದ್ಯದ ದೊಡ್ಡ ಕಳವಳ. ಸೇನೆ, ಶಸ್ತ್ರಾಸ್ತ್ರ ಅಭಿವೃದ್ಧಿ, ಹಣಕಾಸು, ಷೇರು ಮಾರುಕಟ್ಟೆ ಸೇರಿದಂತೆ ಹಲವು ಕ್ಷೇತ್ರಗಳ ಮೇಲೂ AI ಬೆಳವಣಿಗೆ ಕಂಟಕಪ್ರಾಯವಾಗಬಲ್ಲದು. ಹೀಗಾಗಿಯೇ ಇದನ್ನು ಹೆಚ್ಚು ಬೆಳೆಯಲು ಬಿಡಬೇಡಿ ಎಂಬ ಕೂಗೂ ಹೆಚ್ಚಾಗುತ್ತಿರುವುದು.

ತಂತ್ರಜ್ಞಾನ ಇಷ್ಟೆಲ್ಲಾ ಮುಂದುವರೆದಿದ್ದರೂ ಮನುಷ್ಯನ ಸೃಷ್ಟಿಕ್ರಿಯೆಯ ಅನನ್ಯತೆ ಇರುವುದು ಕಲಾಸೃಷ್ಟಿಯ ಹದದಲ್ಲಿ. ಯಾವ ಬಣ್ಣ, ಯಾವ ರಾಗ, ಯಾವ ಪದ, ಯಾವ ಹದದಲ್ಲಿ ಬರಬೇಕೆನ್ನುವ ವಿವೇಚನೆಯೇ ಕೊನೆಗೂ ಕಲೆಗಾರರನ್ನು ಕೈಹಿಡಿಯುವುದು. ತಂತ್ರಜ್ಞಾನದ ಪ್ರವಾಹದಲ್ಲಿ ಕಲಾವಿದರನ್ನು ಉಳಿಸುವುದೂ ಈ ವಿವೇಚನೆಯೇ. ಹೀಗಾಗಿ ಅರಿವಿನ ಜತೆಗೆ, ಆತ್ಮದ ಅನುಭೂತಿ ಇಲ್ಲದ ತಂತ್ರಜ್ಞಾನದ ಸೃಷ್ಟಿಕ್ರಿಯೆ ಸಹಜ ಎನಿಸಲು ಇನ್ನೂ ಸಾಕಷ್ಟು ವರ್ಷ ಅದು ಸವೆಯಬೇಕೇನೋ. ಆದರೆ, ಮನುಷ್ಯನ ಹಾಗೆಯೇ AI ವರ್ತಿಸುವ ದಿನಗಳು ಬಂದರೂ ಅಚ್ಚರಿಯೇನಲ್ಲ.

ಕೊನೆ ಮಾತು: ಅಂದಹಾಗೆ, ಪ್ರಯೋಗದ ಕಾರಣಕ್ಕೆ ಈ ಲೇಖನದ ಕೆಲ ಭಾಗವನ್ನು ಇದೇ AIನಿಂದ ಕನ್ನಡದಲ್ಲಿ ಬರೆಸಲು ಪ್ರಯತ್ನಿಸಿದೆ. ಆದರೆ, ಇದರ ಕನ್ನಡ ಭಾಷಾಜ್ಞಾನ ಇನ್ನೂ ಪ್ರಾಥಮಿಕ ಹಂತದಲ್ಲಿದೆ. ಆದರೆ, ತಂತ್ರಜ್ಞಾನದ ನಾಗಾಲೋಟದ ವೇಗ ನೋಡಿದರೆ, ಇದೇ AI ಕನ್ನಡದಲ್ಲಿ ಇಂಥದ್ದೇ ಒಂದಿಡೀ ಲೇಖನ ಬರೆದುಕೊಡುವ ಕಾಲವೂ ದೂರ ಇಲ್ಲ!




ಮೊದಲ ಓದು

ಅನುಭವಗಳ ಬುತ್ತಿಯ ‘ಇಸ್ಕೂಲು’

ಅಂಕಣ ಬರಹವಾಗಿ ಮಾಸಪತ್ರಿಕೆಯಲ್ಲಿ ಪ್ರಕಟವಾದ ಅಕ್ಷತಾ ಕೃಷ್ಣಮೂರ್ತಿ ಅವರ ಲೇಖನಗಳ ಗುಚ್ಛ ಇದೀಗ ‘ಇಸ್ಕೂಲು’ ಎಂಬ ಕೃತಿ ರೂಪ ಪಡೆದಿದೆ.

‘ಇಸ್ಕೂಲು’ ಹಲವು ನೆನಪುಗಳ ಬುತ್ತಿ ಬಿಚ್ಚಿಡುವ ಪದ. ಸ್ಲೇಟು, ಬಳಪ, ನೀರ್‌ಕಡ್ಡಿ ಮನಸ್ಸಿನಾಳದಿಂದ ಹೊರಬರುವ ಗಳಿಗೆಯದು. ನೆನಪಿನ ಅಲೆಯನ್ನು ಹಬ್ಬಿಸಿ ಹರಿವ ಹೊಳೆ ‘ಇಸ್ಕೂಲು’. ಅಕ್ಷತಾ ಅವರು ತಾವು ಅಧ್ಯಾಪಕಿಯಾಗಿ ಕೆಲಸ ಮಾಡುವ ಜೋಯಿಡಾ ತಾಲ್ಲೂಕಿನ ‘ಅಣಶಿ’ ಎಂಬ ಹಳ್ಳಿಶಾಲೆಯಲ್ಲಿನ ಅನುಭವಗಳನ್ನು ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಆರಂಭದಲ್ಲೇ ಬಾವುಟ ಹಾರಿಸಿ, ಮಕ್ಕಳೊಂದಿಗೆ ಪ್ರವಾಸಕ್ಕೆ ತೆರಳಿ, ಮೊದಲ ದಿನ ಮೌನವಾಗಿ, ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಕಣ್ಣಂಚಲ್ಲಿ ನೀರು ತುಂಬಿಕೊಂಡು, ಇಲಿಯಣ್ಣ ಬಂದಾಗ ಬೆದರಿ, ಗಾಂಧಿ ಜಯಂತಿಗೆ ಪೇಪರ್ ಟೋಪಿ ಮಾಡಿ, ಚಾರಣದ ಕಥೆ ಹೇಳುತ್ತಾ ಇಲ್ಲಿನ ‘ರಾಧಕ್ಕೋರು’ ಅನುಭವಗಳ ಮೂಸೆ ತೆರೆದಿದ್ದಾರೆ. ಇಡೀ ಕೃತಿಯಲ್ಲಿ ಈ ‘ರಾಧಕ್ಕೋರು’ ಶಾಲಾ ಮಕ್ಕಳ ಜೊತೆ ಒಡನಾಡುತ್ತಲೇ ಶೈಕ್ಷಣಿಕ ಮಾದರಿಯಾಗಿ ಕಾಣಿಸುತ್ತಾರೆ. ಲೇಖನಗಳು ಶಾಲೆಗೆ ಸೀಮಿತವಾಗದೆ, ಸುತ್ತಲಿನ ಪರಿಸರ, ಅದರ ವೈಶಿಷ್ಟ್ಯವೂ ಸೂಚ್ಯವಾಗಿ ಅಡಕವಾಗಿದೆ.

ಇಲ್ಲಿನ ಬರಹಗಳಲ್ಲಿ ಆತ್ಮೀಯತೆ ಇದೆ. ವಿವರವಾದ ನಿರೂಪಣೆ, ಸೃಜನಾತ್ಮಕ ಬರವಣಿಗೆಯೂ ಇಲ್ಲಿದೆ. ಶಿಕ್ಷಕಿಯಾಗಿ ಮಕ್ಕಳಿಗೆ ಹತ್ತಿರವಾಗಿರುವ ಅಕ್ಷತಾ ಅವರು ಲೇಖಕಿಯಾಗಿ ಓದುಗರಿಗೂ ಇಷ್ಟವಾಗುತ್ತಾರೆ. ಲಾಕ್‌ಡೌನ್ ಸಂದರ್ಭದಲ್ಲಿ ಶಾಲಾಕಟ್ಟಡಗಳು ಮಾತನಾಡಿದ ಮಾತಿಗೂ ‘ರಾಧಕ್ಕೋರು’ ಕಿವಿಯಾಗಿದ್ದಾರೆ! ಆದರೆ, ಈ ‘ರಾಧಕ್ಕೋರು’ ಯಾರು ಎನ್ನುವ ಗುಟ್ಟನ್ನು ಮುನ್ನುಡಿಯಲ್ಲೇ ಬರಗೂರು ರಾಮಚಂದ್ರಪ್ಪನವರು ರಟ್ಟು ಮಾಡಿದ್ದಾರೆ. ‘ಈ ಕೃತಿಯನ್ನು ನಮ್ಮ ಸಚಿವರು, ಶಾಸಕರು, ಅಧಿಕಾರಿಗಳು ಮತ್ತು ಅಧ್ಯಾಪಕರು ಒಮ್ಮೆಯಾದರೂ ಓದಬೇಕು’ ಎನ್ನುವ ಬರಗೂರು ಅವರ ಮಾತಿಗೆ ಸಹಮತವಿದೆ.



ಪು: 184 ₹200

ಇಸ್ಕೂಲು
ಲೇ: ಅಕ್ಷತಾ ಕೃಷ್ಣಮೂರ್ತಿ
ಪ್ರ: ಜನ ಪ್ರಕಾಶನ
ಸಂ: 9632329955

ಹಾಡಷ್ಟೇ ಅಲ್ಲ, ಆಳಕ್ಕಿಳಿದ ಆಲಾಪ

ಹಲವು ಸಾಹಿತ್ಯ ಪ್ರಕಾರಗಳ ಪರಿಚಯ (ಗಝಲ್, ಹಾಯ್ಕು, ಕವಿತೆ, ಬರಹ...), ಅವುಗಳ ಒಂದಿಷ್ಟು ಉದಾಹರಣೆ, ಸರಳವಾದ ನಿರೂಪಣೆ, ತನ್ನದೇ ಆದ ವಿಮರ್ಶೆಯ ಕಿರುನೋಟ –ಇವು ಈ ಕೃತಿಯ ಜೀವಾಳ. ಹೌದು ಒಲಿದಂತೆ ಹಾಡಿದ್ದಷ್ಟೇ ಅಲ್ಲ, ಆಳಕ್ಕಿಳಿದು ಆಲಾಪಿಸಿದ್ದೂ ಬರಹಗಳಲ್ಲಿ ಇಣುಕಿದಾಗ ಕಾಣುತ್ತದೆ.

ಕೃತಿಯಲ್ಲಿ ಲಂಕೇಶರ ನೆನಪುಗಳಿವೆ, ಪತ್ರಕರ್ತರ ಬಗೆಗೆ ಅಭಿಮಾನದ ನುಡಿಗಳಿವೆ. ನಾಡಿನ ಪ್ರಮುಖ ಬರಹಗಾರರ ಕೃತಿಗಳ ಆಳವಾದ ಓದು ಮತ್ತು ಒಳನೋಟ ಇದೆ. ಲೇಖಕರು ವಿಮರ್ಶೆಗೊಳಪಡಿಸಿದ ಹೆಚ್ಚಿನ ಸಾಹಿತ್ಯ ಕೃತಿಗಳು ಗಝಲ್, ಕವನ ಸಂಕಲನಗಳಿಗೆ ಸೇರಿದವುಗಳು. ಅವುಗಳನ್ನು ಅಲ್ಲಲ್ಲಿ ಉದಾಹರಿಸಿರುವುದರಿಂದ ಓದುವಿಕೆಯ ಓಘವನ್ನು ಸರಾಗವಾಗಿಸಿವೆ. ಏಕತಾನತೆ ನೀಗಿಸಿವೆ. ಮಾತ್ರವಲ್ಲ, ಕನ್ನಡದ ಪುಟ್ಟ ಪುಟ್ಟ ಕವಿಗಳು ವಿಮರ್ಶೆಯ ಮೂಸೆಯಲ್ಲಿ ಇಲ್ಲಿ ದಾಖಲಾಗಿದ್ದು ಕೂಡ ಗಮನಾರ್ಹವಾಗಿದೆ.

ಅಕ್ಬರನ ಮನೆಯಲ್ಲಿ ರಾಮ; ಕೃಷ್ಣನ ಮನೆಯಲ್ಲಿ ರಹೀಮ/ ಒಬ್ಬರನ್ನೊಬ್ಬರು ಬಚ್ಚಿಟ್ಟುಕೊಂಡು ಕಾಪಾಡಿದೆವು.../ ಇಂದು ರಾಮನನ್ನು ಕೊಲ್ಲಲು ಅಕ್ಬರನು ಕತ್ತಿ ಮಸೆಯುತಿಹನು/ ರಹೀಮನನ್ನು ಕೊಲ್ಲಲು ಕೃಷ್ಣನು ಹೊಂಚು ಹಾಕುತಿಹನು. (ಕವಯಿತ್ರಿ ನೂರ್ ಜಹಾನ್ ಅವರ ಸಾಲುಗಳು) ಇಂಥ ಉದಾಹರಣೆಗಳನ್ನು ಉಲ್ಲೇಖಿಸಿ ಕವಿಯ ಜವಾಬ್ದಾರಿಯನ್ನು ಎತ್ತಿ ಹಿಡಿದಿದ್ದಾರೆ ಲೇಖಕರು.



ಪು: 328 ₹380

ಒಲಿದಂತೆ ಹಾಡಿರುವೆ
ಲೇ: ಸಿದ್ಧರಾಮ ಹೊನ್ಕಲ್
ಪ್ರ: ಬೆರಗು ಪ್ರಕಾಶನ ಕಡಣಿ ವಿಜಯಪುರ ಜಿಲ್ಲೆ
ಸಂ.7795341335



ಪೃಥ್ವಿ ಕೊಣನೂರು ನಿರ್ದೇಶನದ 'ಹದಿನೇಳೆಂಟು' ಸಿನಿಮಾದ ದೃಶ್ಯ

ಏನೆಲ್ಲಾ ಉಂಟು; ಇದು ಹದಿನೇಳೆಂಟು

ರಘುನಾಥ ಚ.ಹ.

'ನೋಡಿ, ಇದು ಕನ್ನಡ ಸಿನಿಮಾ' ಎಂದು ಕನ್ನಡಿಗರು ಆರ್ದ್ರ ಗರ್ವದಿಂದ ಹೇಳಬಹುದಾದ ಈ ಸಿನಿಮಾ 'ಪ್ಯಾನ್ ಇಂಡಿಯಾ' ಲೇಬಲ್ಲನ್ನು ಅಂಟಿಸಿಕೊಂಡಿಲ್ಲ. ಕೋಟಿ ಕೋಟಿ ಗಳಿಕೆ ದಾಖಲೆಯ ಗರಿಯನ್ನೂ ಹೊಂದಿಲ್ಲ. ಇಂದಲ್ಲಾ ನಾಳೆ ಈ ಸಿನಿಮಾ ತೆರೆಕಾಣುತ್ತದೆಂದು ಹೇಳುವುದೂ ಕಷ್ಟ. ಸದ್ಯಕ್ಕೆ ಚಿತ್ರೋತ್ಸವಗಳ ಸಂಚಾರದಲ್ಲಿರುವ ಈ ಚಲನಚಿತ್ರದ ಹೆಸರು, 'ಹದಿನೇಳೆಂಟು'.

ಗಣಿತದ ಸಮಸ್ಯೆಯೊಂದರಂತೆ ಕಾಣಿಸುವ ಶೀರ್ಷಿಕೆಯ 'ಹದಿನೇಳೆಂಟು' ಸಾಮಾಜಿಕ ಗಣಿತದ ಸಿಕ್ಕುಗಳ ಬಗ್ಗೆ ಮಾತನಾಡುತ್ತದೆ. ಯಾವ ಸಿಕ್ಕನ್ನೂ ಬಿಡಿಸುವುದು ಅಥವಾ ಪರಿಹಾರದ ಸಾಧ್ಯತೆ ಸೂಚಿಸುವುದು ಸಿನಿಮಾದ ಉದ್ದೇಶವಲ್ಲ. ಸಿನಿಮಾ ಕಾಣಿಸುವ ಸಿಕ್ಕುಗಳಲ್ಲಿ, ಸಿನಿಮಾ ನೋಡುವ ನಾವು ಯಾವುದಾದರೊಂದು ಬಗೆಯಲ್ಲಿ ಸಿಲುಕಿಕೊಂಡಿದ್ದೇವೆಯೇ ಎನ್ನುವ ಜಿಜ್ಞಾಸೆಯನ್ನು ಹುಟ್ಟುಹಾಕುವುದು ನಿರ್ದೇಶಕರ ಉದ್ದೇಶ ಇರುವಂತಿದೆ.

ದೀಪಾ ಮತ್ತು ಹರಿ ಎನ್ನುವ ಎರಡನೇ ಪಿಯುಸಿ ವಿದ್ಯಾರ್ಥಿಗಳ ಭಾನಗಡಿಯೊಂದಿಗೆ ಸಿನಿಮಾ ತೆರೆದುಕೊಳ್ಳುತ್ತದೆ. ಕಾಲೇಜಿನ ಕೋಣೆಯೊಂದರಲ್ಲಿ ದೀಪಾ–ಹರಿ ತಮ್ಮ ಖಾಸಗಿ ಕ್ಷಣಗಳನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಳ್ಳುತ್ತಾರೆ. ಆ ವಿಡಿಯೊ ವೈರಲ್ ಆಗುವುದರೊಂದಿಗೆ ಸಮಸ್ಯೆ ಶುರುವಾಗುತ್ತದೆ. ಇಬ್ಬರ ಹಣೆಬರಹ ನಿರ್ಧರಿಸಲು ರೂಪುಗೊಳ್ಳುವ ಕಾಲೇಜಿನ ಆಂತರಿಕ ಸಮಿತಿ, ಬುದ್ಧಿವಂತ ವಿದ್ಯಾರ್ಥಿಯಾದ ಹರಿಯನ್ನು ಉಳಿಸಿಕೊಳ್ಳಲು ಹಾಗೂ ಕಲಿಕೆಯಲ್ಲಿ ಅಷ್ಟೇನೂ ಜಾಣೆಯಲ್ಲದ ದೀಪಾಳನ್ನು ಕಾಲೇಜಿನಿಂದ ಹೊರಹಾಕಲು ನಿರ್ಧರಿಸುತ್ತದೆ. ಈ ಮೊದಲು ಬೇರೆ ಬೇರೆ ಸಂದರ್ಭಗಳಲ್ಲಿ ದೀಪಾ ತೋರಿದ ಒರಟು ವರ್ತನೆ ಈಗ ಅವಳಿಗೆ ಮುಳುವಾಗಿದೆ. ಸಮಸ್ಯೆ ಎದುರಾಗುವುದು ಇಲ್ಲಿಯೇ. ಸಮಿತಿಯ ಸದಸ್ಯರಲ್ಲಿ ಒಬ್ಬರು– ದೈಹಿಕ ಶಿಕ್ಷಕ ಅಬ್ದುಲ್ಲಾ– ಜಾತಿಯ ಪ್ರಶ್ನೆ ಎತ್ತುತ್ತಾರೆ. ದೀಪಾ ದಲಿತ ಹುಡುಗಿ. ಹರಿ ಬ್ರಾಹ್ಮಣ ಸಮುದಾಯದವನು. ಸಮಿತಿಯ ಸದಸ್ಯರಲ್ಲಿ ತನ್ನನ್ನುಳಿದು ಉಳಿದವರೆಲ್ಲರೂ ಮೇಲ್ವರ್ಗಕ್ಕೆ ಸೇರಿದವರು ಎನ್ನುವ ಸಂಗತಿಯನ್ನೂ ಅಬ್ದುಲ್ಲಾ ಸಭೆಯ ಗಮನಕ್ಕೆ ತರುತ್ತಾರೆ. ಕಾಲೇಜಿನ ಪ್ರತಿಷ್ಠೆಯ ಹಟದಿಂದಾಗಿ ಜಾತಿಯ ಪ್ರಶ್ನೆ ಕೋರ್ಟಿಗೆ ವರ್ಗಾವಣೆಯಾಗುತ್ತದೆ. ಇಡೀ ಘಟನೆ, ವಿದ್ಯಾರ್ಥಿಗಳು, ಅವರ ಕುಟುಂಬ ಮತ್ತು ಕಾಲೇಜಿನ ಆಡಳಿತ ಮಂಡಳಿಯ ಕೈಮೀರಿ, ಕಾನೂನು ಸಂಘರ್ಷವಾಗಿ ಬದಲಾಗುತ್ತದೆ.

ಹದಿಹರೆಯದ ವಿದ್ಯಾರ್ಥಿಗಳ ಕೆಲವು ಕ್ಷಣಗಳ ಮೈಮರೆವೆ ಏನೆಲ್ಲ ಅನಾಹುತಗಳಿಗೆ ಕಾರಣವಾಗಬಲ್ಲದು ಎನ್ನುವುದನ್ನು ಬಹು ಸೂಕ್ಷ್ಮವಾಗಿ ಪರಿಶೀಲಿಸುವ 'ಹದಿನೇಳೆಂಟು' ಸಿನಿಮಾವನ್ನು ನೈತಿಕಪಠ್ಯದ ರೂಪದಲ್ಲಿ ನೋಡಲಿಕ್ಕೆ ಸಾಧ್ಯವಿದೆ. ಆದರೆ, ಅಂಥ ಸಾಧ್ಯತೆಗಳನ್ನು ಸ್ವತಃ ಸಿನಿಮಾ ನಿರಾಕರಿಸುತ್ತದೆ. ಕಥಾನಾಯಕಿ ದೀಪಾಳಿಗೆ ತನ್ನ ಬದುಕು ಕುಸಿಯುತ್ತಿದ್ದರೂ ಯಾವ ಕ್ಷಣದಲ್ಲೂ ತನ್ನ ಲೈಂಗಿಕಸಾಹಸ ಅನೈತಿಕವೆಂದು ಅನ್ನಿಸುವುದಿಲ್ಲ. ಅದರ ಬಗ್ಗೆ ಅವಳಿಗೆ ವಿಷಾದವೂ ಇಲ್ಲ, ಪಶ್ಚಾತ್ತಾಪವೂ ಇಲ್ಲ. ಅವಳ ಪ್ರಶ್ನೆಗಳು ಸರಳ ಹಾಗೂ ನೇರ. ಇಂಥ ಘಟನೆಗಳು ಕಾಲೇಜಿನಲ್ಲಿ ಈ ಮೊದಲೂ ನಡೆದಿವೆ. ಆಗ ಯಾಕೆ ಕ್ರಮ ಕೈಗೊಂಡಿಲ್ಲ? ಈ ಘಟನೆಯಲ್ಲಿ ಇಬ್ಬರೂ ಭಾಗಿಯಾಗಿದ್ದರೂ, ಹರಿಯ ಬಗ್ಗೆ ಮಾತ್ರ ಯಾಕೆ ಸಹಾನುಭೂತಿ? ಈ ಪ್ರಶ್ನೆಗಳ ಜೊತೆಗೆ, ಜಾತಿಯ ಕಾರಣದಿಂದಾಗಿ ಕಾಲೇಜಿನ ಆಡಳಿತ ಮಂಡಳಿ ತನ್ನನ್ನು ನಿಕೃಷ್ಟವಾಗಿ ನಡೆಸಿಕೊಳ್ಳುತ್ತಿದೆ ಎನ್ನುವ ಭಾವನೆಯೂ ದೀಪಾಳಿಗಿದೆ.

ದೀಪಾಳಿಗೆ ಆತಂಕವಿರುವುದು, ವೈರಲ್ ಆದ ವಿಡಿಯೊ ಕಾರಣದಿಂದಾಗಿ ಸಮಾಜ ತನ್ನನ್ನು ಹೇಗೆ ನೋಡುತ್ತದೆ ಎನ್ನುವುದರ ಬಗ್ಗೆಯಲ್ಲ. ಸುದ್ದಿಯಾದ ಘಟನೆಯಿಂದಾಗಿ ಕಾಲೇಜಿನಿಂದ ಹೊರಬಿದ್ದರೆ, 18 ವರ್ಷದೊಳಗಿನ ರಾಷ್ಟ್ರೀಯ ಫುಟ್‌ಬಾಲ್ ತಂಡಕ್ಕೆ ಆಯ್ಕೆಯಾಗುವ ಅವಕಾಶ ತಪ್ಪಿಹೋಗುವ ಹಾಗೂ ಕ್ರೀಡಾ ವಿಭಾಗದಲ್ಲಿ ಎಂಜಿನಿಯರಿಂಗ್ ಪ್ರವೇಶ ಕೈತಪ್ಪುವ ಸಾಧ್ಯತೆಗಳು ಅವಳನ್ನು ಕಂಗಾಲಾಗಿಸಿವೆ. ಫುಟ್‌ಬಾಲ್ ಹಾಗೂ ಎಂಜಿನಿಯರಿಂಗ್ ತನ್ನನ್ನು ಕೊಳೆಗೇರಿಯಿಂದ ಹೊರತರುವ ಬೆಳಕಿಂಡಿಗಳೆಂದು ಅವಳಿಗೆ ತಿಳಿದಿದೆ. ಈಗ ನಡೆದ ಅಚಾತುರ್ಯದಿಂದ ಆ ಬೆಳಕಿಂಡಿಗಳು ಮುಚ್ಚಿಕೊಳ್ಳುತ್ತಿರುವುದು ಅವಳನ್ನು ಅಧೀರಳನ್ನಾಗಿಸಿದೆ. ಹರಿಯೊಂದಿಗಿನ ಸಂಬಂಧದಿಂದಾಗಿ ತನ್ನ ಮದುವೆಗೆ ತೊಂದರೆಯಾಗಬಹುದು ಎನ್ನುವುದರ ಬಗ್ಗೆ ಅವಳು ಒಂದು ಕ್ಷಣವೂ ಯೋಚಿಸುವುದಿಲ್ಲ. ಅವಳು ಯಾರ ಅನುಕಂಪವನ್ನೂ ಬಯಸುತ್ತಿಲ್ಲ; ನ್ಯಾಯಯುತ ಅವಕಾಶವನ್ನಷ್ಟೇ ನಿರೀಕ್ಷಿಸುತ್ತಿದ್ದಾಳೆ. ತನ್ನದು ತಾನೇ ಕಟ್ಟಿಕೊಳ್ಳಬೇಕಾದ ಬದುಕು ಎನ್ನುವ ಸ್ಪಷ್ಟತೆ ಅವಳಿಗಿದೆ. ಆ ಅರಿವು ಅವಳ ವ್ಯಕ್ತಿತ್ವಕ್ಕೆ ವಿಶೇಷವಾದ ಹೊಳಪು ತಂದುಕೊಟ್ಟಿದೆ.

ದೀಪಾಳಿಗೆ ಇರುವ ತೊಡಕುಗಳು ಹರಿಗಿಲ್ಲ. 'ಸಂಧ್ಯಾವಂದನೆ ಮಾಡುವ ಮಗ ಇಂಥ ಕೆಲಸದಲ್ಲಿ ತೊಡಗುವುದು ಹೇಗೆ ಸಾಧ್ಯ?' ಎಂದು ಪ್ರಶ್ನಿಸುವ ಅಮ್ಮ ಅವನ ಬೆನ್ನಿಗಿದ್ದಾಳೆ. ತಪ್ಪು ಮಾಡಿದ ಮಗನ ಭವಿಷ್ಯವನ್ನು ವಿದೇಶಕ್ಕೆ ಕಳಿಸಿಯಾದರೂ ರಕ್ಷಿಸಲಿಕ್ಕೆ ಅಪ್ಪ ಬದ್ಧನಾಗಿದ್ದಾನೆ. ತಪ್ಪು ಮಾಡಿದ್ದಾರೆ ಎಂದು ಭಾವಿಸಲಾದ ಇಬ್ಬರನ್ನೂ ಸಮಾನವಾಗಿ ನೋಡಬೇಕಾದ ಕಾಲೇಜಿನ ಆಡಳಿತ ಮಂಡಳಿಗೆ ಹರಿಯ ಬಗ್ಗೆ ಒಳ ಒಲವಿದೆ. ಕುಟುಂಬ, ಕಾಲೇಜು, ಸಮಾಜ, ಪೊಲೀಸ್ ವ್ಯವಸ್ಥೆ – ಎಲ್ಲೆಡೆಯೂ ಘಟಿಸಿದ ಅಚಾತುರ್ಯದಲ್ಲಿ ಹೆಣ್ಣಿನ ಪಾತ್ರವೇ ಎದ್ದುಕಾಣುವುದನ್ನು 'ಹದಿನೇಳೆಂಟು' ವಾಚ್ಯವಾಗಿಸದೆ ಸೂಚಿಸುತ್ತದೆ.

ಚಿತ್ರದ ಹೆಚ್ಚುಗಾರಿಕೆ ಇರುವುದು, ಚಿತ್ರದಲ್ಲಿ ಯಾರನ್ನೂ ಖಳರನ್ನಾಗಿಸದೆ ಇರುವುದರಲ್ಲಿ ಹಾಗೂ ಘಟನೆಯನ್ನು ನಿರ್ದಿಷ್ಟ ಸಂಗತಿಯೊಂದಕ್ಕೆ ಸೀಮಿತಗೊಳಿಸದೆ, ಅದಕ್ಕೆ ಇರಬಹುದಾದ ಹಲವು ಸಾಧ್ಯತೆಗಳನ್ನು ತಳಕು ಹಾಕುವುದರಲ್ಲಿ. ಅಪ್ಪನನ್ನು ಕಳೆದುಕೊಂಡಿರುವುದು ಹಾಗೂ ಕೊಳಗೇರಿ ಹಿನ್ನೆಲೆಯಿಂದಾಗಿ ದೀಪಾಳ ಬಗ್ಗೆ ಅನುಕಂಪ ಉಂಟಾದರೂ, ಹರಿಯ ಕುಟುಂಬದ ನೋವನ್ನೂ ಸಿನಿಮಾ ಘನತೆಯಿಂದ ಚಿತ್ರಿಸಿದೆ. ದೀಪಾಳ ಕುಟುಂಬದ ಬೆನ್ನಿಗೆ ನಿಲ್ಲುವ ಹೋರಾಟಗಾರ್ತಿ ಹಾಗೂ ವಕೀಲೆ, ಯಾವ ಕ್ಷಣದಲ್ಲೂ ಭಾವೋದ್ವೇಗಕ್ಕೆ ಒಳಗಾಗದೆ ವರ್ತಿಸುವುದು ವಿಶೇಷವಾಗಿದೆ. ಕಾಲೇಜಿನ ಪ್ರಾಂಶುಪಾಲ, ಉಪ ಪ್ರಾಂಶುಪಾಲೆ, ಉಪನ್ಯಾಸಕಿ, ಪೊಲೀಸ್ ಅಧಿಕಾರಿ, ಹುಡುಗನ ಪರವಾದ ವಕೀಲ – ಎಲ್ಲರೂ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಬಯಸುವ ಸಮಾಜದ ಬಹುಸಂಖ್ಯಾತರ ಮನಸ್ಥಿತಿಯ ಪ್ರತಿನಿಧಿಗಳೇ ಆಗಿದ್ದಾರೆ. ಇವರೆಲ್ಲರ ನಡುವೆ, 'ನಾನ್ ಮುಂದೇನು ಮಾಡ್ಲಿ?' ಎಂದು ಅಸಹಾಯಕತೆಯಿಂದ ಪ್ರಶ್ನಿಸುವ ದೀಪಾಳ ಅಮ್ಮನ ಪ್ರಶ್ನೆಗೆ ಉತ್ತರಿಸುವವರು ಯಾರು? ನ್ಯಾಯಾಲಯದಲ್ಲಿ, 'ಹದಿನೆಂಟು' ಎಂದು ತನ್ನ ವಯಸ್ಸನ್ನು ಒಪ್ಪಿಕೊಳ್ಳುವ ಮೂಲಕ ಸಿನಿಮಾ ಮುಗಿದರೂ, ಅದೊಂದು ಹೇಳಿಕೆ ದೀಪಾಳ ಬದುಕಿನ ಮೇಲೆ ಉಂಟು ಮಾಡಬಹುದಾದ ಪರಿಣಾಮ ಸಹೃದಯರನ್ನು ಖಿನ್ನರನ್ನಾಗಿಸುವಂತಹದ್ದು.

> ಪೃಥ್ವಿ ಕೊಣನೂರು ಅವರ ಸಿನಿಮಾಗಳು ಚಿತ್ರೋತ್ಸವಗಳಿಗೆ ಸೀಮಿತವಾಗಿ ಉಳಿಯಬೇಕಾದ ಕಲಾಕೃತಿಗಳಲ್ಲ. ಅವು ಜನಸಾಮಾನ್ಯರ ನೋಟಕ್ಕೂ ದೊರೆಯಬೇಕು. ದೊಡ್ಡ ಬಂಡವಾಳ ಹಾಗೂ ವ್ಯಾಪಾರ ತಂತ್ರಗಳನ್ನು ನೆಚ್ಚಿಕೊಂಡ ಪೇಟೆಸಾಲಿನಲ್ಲಿ, ಸೃಜನಶೀಲ ಶಕ್ತಿಯನ್ನು ನೆಚ್ಚಿಕೊಂಡ ಪೃಥ್ವಿ ಅಂಥವರ ಸಿನಿಮಾಗಳು ತೆರೆಕಾಣುವುದು ಸುಲಭವಲ್ಲ

'ಹದಿನೇಳೆಂಟು' ಸಿನಿಮಾದ ನಿರ್ದೇಶಕ ಪೃಥ್ವಿ ಕೊಣನೂರು, 'ರೈಲ್ವೆ ಚಿಲ್ಡ್ರನ್' ಹಾಗೂ 'ಪಿಂಕಿ ಎಲ್ಲಿ?' ಸಿನಿಮಾಗಳ ಮೂಲಕ ಚಿತ್ರರಸಿಕರಿಗೆ ಪರಿಚಿತರು. ಈ ಮೂರೂ ಸಿನಿಮಾಗಳು ಬೇರೆ ಬೇರೆ ಕಥನಗಳ ನಿರೂಪಣೆಯಾದರೂ, ಈ ಚಿತ್ರಗಳ ನಡುವೆ ಅಂತರ್ಗತ ಸಂಬಂಧ ಇರುವಂತಿದೆ. ಅದು, ಕೊಳೆಗೇರಿಗಳ ಬಗ್ಗೆ, ನಿರ್ಲಕ್ಷಿತ ಸಮುದಾಯಗಳ ಬಗ್ಗೆ ನಿರ್ದೇಶಕರಿಗೆ ಇರುವ ಕಾಳಜಿ. ವರ್ತಮಾನದ ಸುಡುಕೆಂಡದಂಥ ಸಮಸ್ಯೆಗಳನ್ನು ಕಪ್ಪುಬಿಳುಪಾಗಿ ನೋಡದೆ, ಅವುಗಳ ಬಹು ಆಯಾಮಗಳನ್ನೂ ಪರಿಶೀಲಿಸುವ ಸಾವಧಾನ ಹಾಗೂ ಪ್ರೌಢಿಮೆ ಪೃಥ್ವಿ ಅವರಲ್ಲಿವೆ. 'ರೈಲ್ವೆ ಚಿಲ್ಡ್ರನ್'ನಲ್ಲಿ ಕೆಲವು ಕ್ಷಣಗಳಷ್ಟೇ ಕಾಣಿಸುವ ಮಕ್ಕಳ ತಾಯಂದಿರು, 'ಪಿಂಕಿ ಎಲ್ಲಿ?' ಚಿತ್ರದ ಸಣ್ಣಮ್ಮ ಹಾಗೂ 'ಹದಿನೇಳೆಂಟು' ಚಿತ್ರದ ದೀಪಾಳ ತಾಯಿ – ಪಾತ್ರಗಳು ಬದಲಾದರೂ ಇವರುಗಳ ಬದುಕಿನ ಬಣ್ಣಗಳಲ್ಲಿ ವ್ಯತ್ಯಾಸಗಳೇನಿಲ್ಲ. ಸತತವಾಗಿ ಮೂರು ಉತ್ತಮ ಸಿನಿಮಾಗಳನ್ನು ರೂಪಿಸಿರುವ ಪೃಥ್ವಿ, ಹೊಸ ತಲೆಮಾರಿನ ಕನ್ನಡ ಸಿನಿಮಾ ನಿರ್ಮಾತೃಗಳ ಸಾಲಿನಲ್ಲಿ ಅತ್ಯಂತ ಭರವಸೆಯ ನಿರ್ದೇಶಕ.

'ನನ್ನ ಸಿನಿಮಾಗಳು ಸಮಾಜಕ್ಕೆ ಕನ್ನಡಿಯಾಗಬೇಕು' ಎನ್ನುವ ಅರ್ಥದ ಮಾತೊಂದನ್ನು ಪೃಥ್ವಿ ಸಂದರ್ಶನವೊಂದರಲ್ಲಿ ಆಡಿದ್ದಾರೆ. ಅವರ ಸಿನಿಮಾಗಳು ಕನ್ನಡಿ ಹಿಡಿಯುವ ಕೃತಿಗಳಷ್ಟೇ ಆಗಿ ರೂಪುಗೊಂಡಿಲ್ಲ; ಯಾವುದೇ ಅತ್ಯುತ್ತಮ ಸೃಜನಶೀಲ ಕಲೆ ಹೊಂದಿರುವ, ಸಮಾಜದ ಆತ್ಮವಿಮರ್ಶೆಗೆ ಪ್ರೇರಣೆಯಾಗುವ ಶಕ್ತಿ ಪೃಥ್ವಿ ಅವರ ಚಲನಚಿತ್ರಗಳಿಗೂ ಇದೆ.

'ಹದಿನೇಳೆಂಟು' ಈಗಾಗಲೇ 'ಬೂಸಾನ್ ಅಂತರರಾಷ್ಟ್ರೀಯ ಸಿನಿಮೋತ್ಸವ'ದಲ್ಲಿ ಪ್ರದರ್ಶನ ಕಂಡಿದೆ. 2022ರ ಗೋವಾ ಚಿತ್ರೋತ್ಸವದ 'ಭಾರತೀಯ ಪನೋರಮಾ' ವಿಭಾಗದಲ್ಲಿ ಆರಂಭಿಕ ಚಿತ್ರವಾಗಿ ತೆರೆ ಕಂಡಿದೆ. ಚಿತ್ರೋತ್ಸವಗಳ ಪಯಣ ಮುಂದುವರೆದಿದೆ. ಪೃಥ್ವಿ ಅವರ ಸಿನಿಮಾಗಳು ಚಿತ್ರೋತ್ಸವಗಳಿಗೆ ಸೀಮಿತವಾಗಿ ಉಳಿಯಬೇಕಾದ ಕಲಾಕೃತಿಗಳಲ್ಲ. ಅವು ಜನಸಾಮಾನ್ಯರ ನೋಟಕ್ಕೂ ದೊರೆಯಬೇಕು. ದೊಡ್ಡ ಬಂಡವಾಳ ಹಾಗೂ ವ್ಯಾಪಾರ ತಂತ್ರಗಳನ್ನು ನೆಚ್ಚಿಕೊಂಡ ಪೇಟೆಸಾಲಿನಲ್ಲಿ, ಸೃಜನಶೀಲ ಶಕ್ತಿಯನ್ನು ನೆಚ್ಚಿಕೊಂಡ ಪೃಥ್ವಿ ಅಂಥವರ ಸಿನಿಮಾಗಳು ತೆರೆಕಾಣುವುದು ಸುಲಭವಲ್ಲ. 'ಸಿನಿಮಾ ಸಂಸ್ಕೃತಿ'ಗೆ ನಮ್ಮ ಸಂಪೂರ್ಣ ಬೆಂಬಲ ಎಂದು ಪದೇ ಪದೇ ಹೇಳುವ ಸರ್ಕಾರ, ಕನ್ನಡವನ್ನು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಪ್ರತಿನಿಧಿಸುವವರ ಸಿನಿಮಾಗಳ ಪ್ರದರ್ಶನ ಮಾಡಬಹುದಾದ ಸಣ್ಣ ಸಣ್ಣ ಚಿತ್ರಮಂದಿರಗಳ ವ್ಯವಸ್ಥೆಯನ್ನೇ ಯೋಜಿಸಿಲ್ಲ. ಸರ್ಕಾರಕ್ಕಿಲ್ಲದ ಸೃಜನಶೀಲ ಚಿಂತನೆ ಗಾಂಧಿ ನಗರಕ್ಕೂ ಚಲನಚಿತ್ರ ವಾಣಿಜ್ಯ ಮಂಡಳಿಗೂ ಇರಬೇಕೆಂದು ಅಪೇಕ್ಷಿಸುವುದು ದುರಾಸೆ ಆಗಬಹುದು.



ಪೃಥ್ವಿ ಕೊಣನೂರು

ತುಂಗಾ ತೀರದಿ



10ನೇ ಪುಟದಿಂದ...

ಗೋಷ್ಠಿ ಗಾಯನದಲ್ಲಿ ಯಾವಾಗಲೂ ಹಾಡುವ ನವರತ್ನ ಮಾಲಿಕೆ ಎಂದು ಕರೆಯಲಾಗುವ ಹಾಡುಗಳ ಗುಚ್ಛವನ್ನು ಬಿಟ್ಟು ಹೆಚ್ಚು ಪ್ರಚಾರದಲ್ಲಿಲ್ಲದ ಆದರೆ ಅರ್ಥಗರ್ಭಿತವಾದ ಹೊಸದಾದ 10 ಹಾಡುಗಳನ್ನು ಆರಿಸಿಕೊಂಡು ಅವಕ್ಕೆ 'ದಶರತ್ನ ಮಾಲಿಕೆ' ಎಂದು ಹೆಸರು ಕೊಡಲಾಗಿತ್ತು. ಇವುಗಳಲ್ಲಿ ನಾಮ ಸ್ಮರಣೆ, ಬೋಧನೆ, ಮುಂಡಿಗೆ, ವಿಡಂಬನೆ ಮುಂತಾದ ಹಲವು ಬಗೆಯ ವಸ್ತು ವಿಷಯವುಳ್ಳ ಹಾಡುಗಳನ್ನು ಆರಿಸಿಕೊಳ್ಳಲಾಗಿತ್ತು. ಪ್ರೊ. ಅರವಿಂದ ಹೆಬ್ಬಾರ್ ಮತ್ತು ಡಾ.ನಾಗರಾಜ್ ಹವಾಲ್ದಾರ್ ಅವರು ಈ ಹಾಡುಗಳಿಗೆ ರಾಗ ಸಂಯೋಜಿಸಿದ್ದರು.

ಆಧುನಿಕ ಸೌಲಭ್ಯದ ಝೂಮ್ ಮಾಧ್ಯಮದ ಮೂಲಕ ಜೊತೆ ಸೇರಿ ಅಭ್ಯಾಸ ಮಾಡಿಕೊಂಡ ಗಾಯಕ/ಗಾಯಕಿಯರಿಂದ ಅತ್ಯಂತ ಮನೋಜ್ಞವಾಗಿ ಈ ಗಾಯನ ಮೂಡಿಬಂತು. ವಯೋಲಿನ್, ಮೃದಂಗ, ಮೋರ್ಸಿಂಗ್ ಜೊತೆಯಲ್ಲಿ ತಬಲಾ, ಹಾರ್ಮೋನಿಯಂ ವಾದನಗಳು ಕಳೆಗಟ್ಟಿದ್ದವು. ಒಂದೂವರೆ ಗಂಟೆಯ ಈ ಕಾರ್ಯಕ್ರಮದಲ್ಲಿ ಸುಧಾ ರಘುನಾಥನ್ ಅವರೂ ಎಲ್ಲರೊಂದಿಗೆ ಸೇರಿಕೊಂಡು ಭಾಗವಹಿಸಿದ್ದು ಅಪರೂಪದ್ದಾಗಿತ್ತು. ಕೇರಳದ ತಿರುವಯ್ಯಾರ್‌ನಲ್ಲಿ ನಡೆಯುವ ತ್ಯಾಗರಾಜರ ಆರಾಧನೆ, ಎಟಿಯಾಪುರಂನಲ್ಲಿ ನಡೆಯುವ ದೀಕ್ಷಿತರ ಆರಾಧನೆ ತಾನಸೇನರ ನೆನಪಿನಲ್ಲಿ ನಡೆಯುವ ತಾನಸೇನ್ ಮಹೋತ್ಸವ, ಸ್ವಾಮಿ ಹರಿದಾಸರ ನೆನಪಿನಲ್ಲಿ ನಡೆಯುವ ಹರಿವಲ್ಲಭ ಸಂಗೀತ ಮಹೋತ್ಸವ ಮುಂತಾದವುಗಳನ್ನು ಇಲ್ಲಿ ನೆನೆಯಬಹುದು.

ಕಲಾವಿದರು, ಸರ್ಕಾರ, ಊರಿನ ಜನತೆ ಹೀಗೆ ಎಲ್ಲಾ ಕಡೆಯಿಂದ ಸಹಕಾರ ದೊರಕಿ ಪ್ರತಿವರ್ಷ ಈ ಬಗೆಯ ಸಂಗೀತಾರಾಧನೆ ನಡೆದಲ್ಲಿ ಅದೇ ಸಾಲಿಗೆ ಸೇರಬಲ್ಲ ಈ ಕಾಯಕ್ರಮದಲ್ಲಿ ನಮ್ಮ ಮಣ್ಣಿನ ವಿಶೇಷವಾದ ಕರ್ನಾಟಕಿ ಮತ್ತು ಹಿಂದೂಸ್ತಾನಿ ಎರಡೂ ಪದ್ಧತಿಯ ಗಾಯನ/ವಾದನ ಜೊತೆ ಸೇರುವುದು ತುಂಬಾ ಮಹತ್ವದ್ದೆನಿಸುತ್ತದೆ. ಇಲ್ಲಿ ಕೊಡು ಕೊಳ್ಳುವಿಕೆ ಸಾಧ್ಯವಾಗುತ್ತದೆ, ಪರಾಮರ್ಶೆ-ಅನುಸಂಧಾನಗಳಿಗೊಂದು ಅವಕಾಶವೂ ಆಗುತ್ತದೆ.

ಗೋಷ್ಠಿ ಗಾಯನದ ನಂತರ ಆರಂಭವಾಗಿ ಸಂಜೆಯವರೆಗೂ ನಡೆದ 15-15 ನಿಮಿಷಗಳ ಪುರಂದರ ದಾಸರ ಕೀರ್ತನೆಯ ಕಾರ್ಯಕ್ರಮದಲ್ಲಿ ಎಲ್ಲ ಸಂಗೀತಗಾರರಿಂದ ಬಗೆಬಗೆಯ ಉಗಾಭೋಗಗಳು-ಹಾಡುಗಳು ಅತ್ಯಂತ ಸುಂದರವಾಗಿ ಮೂಡಿಬಂದವು. ಕರ್ನಾಟಕಿ ಸಂಗೀತಗಾರರಾದ ಗಿರಿಜಾಶಂಕರ್, ಅದಿತಿ ಪ್ರಹ್ಲಾದ್, ಶ್ರೇಯ ಕೊಳತ್ತಾಯ, ಸ್ಮೃತಿ ಭಾಸ್ಕರ್, ಡಾ.ವಂದನಾ, ವೈ.ಜಿ. ಶ್ರೀಲತಾ, ಲಕ್ಷ್ಮೀ ವರುಣ್ ಮುಂತಾದವರು ಹಾಗೂ ಹಿಂದೂಸ್ತಾನಿ ಗಾಯಕರಾದ ದತ್ತಾತ್ರೇಯ ವೇಲಣಕರ್, ಹಿರಣ್ಮಯೀ, ಅನಿರುದ್ಧ ಐತಾಳ್, ಸಮೀರ್ ಕುಲಕರ್ಣಿ, ಜನನಿ ಕುಲಕರ್ಣಿ, ಆದಿತ್ಯ ಪಲ್ಲಕ್ಕಿ, ಶ್ರೀಮತಿ ದೇವಿ ಮುಂತಾದವರು ಭಾಗವಹಿಸಿದ್ದರು. ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಹೊಸಪೇಟೆ, ಬಳ್ಳಾರಿ ಕಡೆಯ ಭಜನಾ ತಂಡಗಳು ಕೊಂಬು ಕಹಳೆಗಳೊಂದಿಗೆ ನಗರ ಸಂಕೀರ್ತನೆಯನ್ನು ನಡೆಸಿಕೊಟ್ಟದ್ದು ಆಕರ್ಷಕವಾಗಿತ್ತು.

ಸಂಜೆ 4 ಗಂಟೆಯ ನಂತರದ ಕಾರ್ಯಕ್ರಮದ ಸ್ಥಳ ಅತ್ಯಂತ ಮೋಹಕವಾಗಿತ್ತು. ಸುತ್ತಮುತ್ತ ಬಂಡೆಗಳಿಂದ ಆವೃತವಾಗಿ, ಮುಕ್ತವಾದ ನೀಲಾಕಾಶ ಕಾಣುವ ವಿಜಯ ವಿಠಲ ದೇವಸ್ಥಾನದ ಹೊರ ಆವರಣ ಬಣ್ಣ ಬಣ್ಣದ ದೀಪಗಳಿಂದ ಕಂಗೊಳಿಸುತ್ತಿತ್ತು. ನೂರಾರು ದಾಸರ ಹಾಡುಗಳಿಗೆ ರಾಗ ಸಂಯೋಜಿಸಿರುವ ಪ್ರೊ.ಅರವಿಂದ ಹೆಬ್ಬಾರ್ ಅವರು ತಮ್ಮ ಶಿಷ್ಯೆಯರಾದ ಅರ್ಚನಾ ಮತ್ತು ಸಮನ್ವಿ ಅವರೊಂದಿಗೆ 'ದಾಸರ ಪದಗಳನ್ನು ಹೇಗೆ ಹಾಡಬೇಕು' ಎಂಬ ವಿಷಯದ ಬಗ್ಗೆ ಸಮರ್ಪಕವಾದ ಉದಾಹರಣೆಗಳನ್ನು ನೀಡುತ್ತಾ ಮಾತನಾಡಿದರು. ಮಾತಿನ ಮಧ್ಯದಲ್ಲಿ ಹೊಮ್ಮುತ್ತಿದ್ದ ಅರ್ಚನ-ಸಮನ್ವಿಯವರ ಕಂಠದಲ್ಲಿನ ಹಾಡುಗಳಂತೂ ಕೇಳುವ ಹಸಿವನ್ನು ಇನ್ನೂ ಹೆಚ್ಚಿಸುವಂತಿದ್ದವು.

ಮಾನಕರಿ ಅಚಾರ್ ಅವರ ಉಪನ್ಯಾಸದ ಬಳಿಕ, ಖ್ಯಾತ ಹಿಂದೂಸ್ತಾನಿ ಗಾಯಕ ಡಾ.ನಾಗರಾಜ್ ಹವಾಲ್ದಾರ್ ಅವರ ಗಾಯನವಿತ್ತು. ರಾಗ ಪೂರಿಯಾಕಲ್ಯಾಣ್‌ನಲ್ಲಿ ಉಗಾಭೋಗವೊಂದನ್ನು ಝಪ್‌ತಾಲ್‌ಗೆ ಅಳವಡಿಸಿ ಹಾಡುವುದರ ಜೊತೆಗೆ ಹಲವಾರು ದಾಸರ ಪದಗಳನ್ನು ಅವರು ಹಾಡಿದರು. ಆ ನಂತರ ಸುಪ್ರಸಿದ್ಧ ಗಾಯಕಿ, ಚೆನ್ನೈನ ಸುಧಾ ರಘುನಾಥನ್ ಅವರ ಗಾಯನವಿತ್ತು. ತಮ್ಮ ಗುರು ಎಂ.ಎಲ್.ವಸಂತಕುಮಾರಿ ಅವರಿಂದ ಪಡೆದ ದಾಸರಪದಗಳನ್ನು ಹಾಡುವ ಪರಂಪರೆಯನ್ನು ಮುಂದುವರಿಸಿಕೊಂಡು ಬಂದ ಸುಧಾ ಅವರ ಸಿರಿಕಂಠದಲ್ಲಿ, ಶುದ್ಧವಾದ ಕನ್ನಡ ಶಬ್ದೋಚ್ಚಾರದಲ್ಲಿ ಹಾಡು ಕೇಳುವುದು ಅತ್ಯಂತ ಸುಖದಾಯಕವಾದದ್ದು. ಅವರಿಗೆ ಪಕ್ಕವಾದ್ಯದಲ್ಲಿ ಸಹಕಾರವಿತ್ತ ಎಂಬಾರ್ ಕಣ್ಣನ್, ಆರ್.ಶಂಕರನಾರಾಯಣನ್, ಆರ್.ರಾಮನ್ ಅವರುಗಳೂ ಶ್ಲಾಘನೀಯರು.

ಜನ ಸಂಚಾರ, ವಾಹನ ವ್ಯವಸ್ಥೆ, ಅಂಗಡಿ-ಮುಂಗಟ್ಟುಗಳ್ಯಾವುವೂ ಇಲ್ಲದ ನಿಸರ್ಗದ ಮಡಿಲಲ್ಲಿ ಸಂಗೀತ ಕೇಳುವುದು ಆನಂದವೇ ಆದರೂ, ಇಂಥ ಕಡೆ ಕಾರ್ಯಕ್ರಮವನ್ನು ಆಯೋಜಿಸುವುದು ಸುಲಭದ ಕೆಲಸವಲ್ಲ. ಸಣ್ಣ-ಪುಟ್ಟ ಸಾಮಾನುಗಳನ್ನೂ ನೆನಪಿಟ್ಟು ಬಹುದೂರದಿಂದ ತಂದು ಜೋಡಿಸಿಕೊಳ್ಳುವ ಅನಿವಾರ್ಯತೆ ಇರುವಲ್ಲಿ, ಕಲಾವಿದರನ್ನು ಕರೆದೊಯ್ಯುವುದು, ಊಟ-ಉಪಚಾರ, ವೇದಿಕೆಯನ್ನು ಸಜ್ಜುಗೊಳಿಸುವುದೇ ಮೊದಲಾದ ಹಲವು ದೊಡ್ಡ ಜವಾಬ್ದಾರಿಗಳನ್ನು ಹೆಗಲ ಮೇಲೆ ಹೊತ್ತುಕೊಂಡು ನಗುತ್ತಾ ಮಾಡಿ ಮುಗಿಸಿದವರು ಇತಿಹಾಸದ ಸಂಶೋಧನಾ ವಿದ್ಯಾರ್ಥಿ ಪ್ರೀತ್ ಖೋನ ಮತ್ತು ಅವರ ತಂಡ. ಹಂಪಿಯ ಗಲ್ಲಿ ಗಲ್ಲಿಯನ್ನು ಬಲ್ಲ ಅವರ ಬಳಿ ಇದ್ದದ್ದು ತಮ್ಮ ಊರು-ಪರಂಪರೆಯ ಬಗ್ಗೆ, ಸಂಗೀತ ಮತ್ತು ಸಂಗೀತಗಾರರ ಬಗ್ಗೆ ಪ್ರೀತಿ ಮತ್ತು ರಾಯರ ಬಗ್ಗೆ ಗೌರವ.

ಯಾವುದೇ ಬಗೆಗಿನ ಢಂಬಾಚಾರ-ಆಡಂಬರಗಳಿಲ್ಲದೇ, ಹಿರಿ-ಕಿರಿ ತಾರತಮ್ಯವಿಲ್ಲದೇ ದಾಸರನ್ನು ಸ್ಮರಿಸಿ ದಿನವಿಡೀ ಸಂಗೀತದಲ್ಲಿ ತೊಡಗಿಕೊಳ್ಳುವ ಅವಕಾಶ ಈ ಕಾರ್ಯಕ್ರಮದ ಮೂಲಕ ಆಯಿತು ಮಾತ್ರವಲ್ಲ, ಅಳಿದುಳಿದ ಸ್ಮಾರಕಗಳ ನಡುವಿನಲ್ಲಿ ಗತ ವೈಭವದ ಒಂದು ಸಣ್ಣ ಝಲಕ್‌ನ್ನು ನೀಡಿದ ಈ ಕಾರ್ಯಕ್ರಮ ಬಹುಕಾಲ ನೆನಪಿನಲ್ಲಿ ಉಳಿಯುವಂತಾಯ್ತು.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿಗಮ್ಮತ್ತು

ಮಗ್ಗಿಯಲ್ಲೊಂದು ಚಟುವಟಿಕೆ

ಮಕ್ಕಳೇ ನೀವೆಲ್ಲಾ ಮಗ್ಗಿ 1ರಿಂದ 20ರವರೆಗೆ ಮಗ್ಗಿ ಕಲಿತಿದ್ದರೆ ನಿಮಗೊಂದು ಚಟುವಟಿಕೆ. ಗುಣ್ಯ, ಗುಣಕ, ಹಾಗೂ ಗುಣಲಬ್ದದಲ್ಲಿ ಒಂದು ಅಂಕಿ ಒಮ್ಮೆ ಮಾತ್ರ ಬಂದಿರುವ ಮಗ್ಗಿಗಳಾವುವು? 2ರಿಂದ 20ರವರೆಗಿನ ಇಂಥ ಜೋಡಿಗಳನ್ನು ಪಟ್ಟಿ ಮಾಡಿ.

ಉದಾ: 9x4 = 36

ಇಲ್ಲಿ ಯಾವ ಅಂಕಿಯೂ ಪುನರಾವರ್ತನೆ ಆಗಿಲ್ಲ.

1...... X ...... =
2...... X ...... =
3...... X ...... =
4...... X ...... =
5...... X ...... =
6...... X ...... =
7...... X ...... =

------- ಮುಂದುವರಿಸಿ

ಮಗ್ಗಿ ಹೀಗೂ ಮಾಡಬಹುದು

1	3		=13
2	6		=26
3	9		=39
4	1	2	=52
5	1	5	=65
6	1	8	=78
7	2	1	=91
8	2	4	=104
9	2	7	=117
10	3	0	=130

ಅದಲು ಬದಲು ಕಂಚಿ ಕದಲು

1) ಕಸಹರಿಸು = ...
2) ಮದನಾರಿ = ...
3) ಅತಿಸಣ್ಣ = ...
4) ಮೊದಲಬೇಟೆ = ...



ಅಕ್ಷರ ಆಟ

ಇಲ್ಲಿ ಕೊಟ್ಟಿರುವ 'ಮನ' ಪದದ ಹಿಂದೆ ಒಂದಕ್ಷರ ಸೇರಿಸಿ ಬೇರೆ ಬೇರೆ ಪದ ಮಾಡಿ.

1) ......ಮನ
2) ......ಮನ
3) ......ಮನ
4) ......ಮನ
5) ......ಮನ
6) ......ಮನ

ಒಗಟುಗಳಿಗೂ ಉತ್ತರಗಳಿಗೂ ಹೊಂದಿಸಿ

1 ಅಂತಪ್ಪನ ಕುದುರಿ ನಿಂತಲ್ಲೇ ಉಚ್ಚಿ ಹೊಯ್ತೈತಿ	A ಹೊಸ್ತಿಲು
2 ಅಂಜುಬುರುಕಿ ಕಲ್ಲವ್ವ ಸಂದ್ಯಾಗ ಡೊಗ್ಗಿ ಡೊಗ್ಗಿ ಓಡ್ತಾಳ	B ಜೇನುಗೂಡು
3 ಕರೆ ಎತ್ತ ತೇಲತೈತಿ ಬಿಳಿ ಎತ್ತ ಮುಳಗತೈತೆ	C ಬೆಂಕಿಕಡ್ಡಿ
4 ಅಟ್ಟಂ ಬಟ್ಟಂ ಅರಣ್ಯದಾಗ ಶೆಟ್ಟಿ ಅಂಗಡಿ ಇಟ್ಟಾನ	D ಹರನಾಳಗಿ
5 ಗಿಡ್ಡ ಅಡ್ಡ ಬಿದ್ದಾನ	E ಸಕ್ರಿ ಚಾಪುಡಿ
6 ಅಪ್ಪ ಅಂದ್ರ ಹತ್ತತೈತಿ ಅವ್ವ ಅಂದ್ರ ಹತ್ತೂದಿಲ್ಲ	F ಇಲಿ
7 ಕತ್ತಲದಾಗ ಕರೆವ್ವ ಕುಂತಾಳ	G ತುಟಿ
8 ಬಿಳಿ ಸೈನಿಕನ ಕರಿ ಟೋಪಿ ಮಸಿ	H ಅರಿವಿ

ಪ್ರ–ಪಂಚ ಪ್ರಶ್ನೆಗಳು

1 ಜಪಾನ್ ದೇಶದ ರಾಜಧಾನಿ ಯಾವುದು?
2 ಕುವೈತ್ ದೇಶದ ಕರೆನ್ಸಿ ಯಾವುದು?
3 ಜಗತ್ತಿನ ಅತಿದೊಡ್ಡ ಸಾಗರ ಯಾವುದು?
4 ದಕ್ಷಿಣ ಭಾರತದ ಅತ್ಯಂತ ಎತ್ತರದ ಶಿಖರ ಯಾವುದು?
5 ಥರ್ಮಾಮೀಟರ್ ಕಂಡುಹಿಡಿದವರು ಯಾರು?

ಪುಟಾಣಿ ಪದಬಂಧ

1	–	ಲ	ತಾ	–	ಲತಾಳ ಎರಡನೇ ತಾಯಿ
2	–	ಕ	ಲಿ	–	ಕಲಿಯುತ್ತಾ ಕೂಡಿಸು
3	–	ಗು	ರಿ	–	ಗುರಿ ಇಟ್ಟುಕೊಂಡು ಮೊಳಕೆ ತರಿಸು
4	–	ರಾ	ಗ	–	ರಾಗ ಮಾಡಲು ಬರುವ ನಟನಟಿಯರ ಗುಂಪು
5	–	ಮೇ	ರಿ	–	ಮೇರಿ ಈ ದೇಶದವಳು





ಕಳೆದ ಸಂಚಿಕೆಯ ಸರಿ ಉತ್ತರಗಳು

ಕ್ವಿಜ್ ಇಂಡಿಯಾ : 1. ತೆಲುಗು 2. 1956 3. ಜಾರ್ಖಂಡ್ 4. 1951 5. ಆರ್ಯಭಟ 6. ಮುಂಬೈ 7. 1976 8. ಮುತ್ತು ರತ್ನ ಆಭರಣ 9. ಬಾಂಗ್ಲಾದೇಶ 10.ಹಿಂದಿ

ಚಿತ್ರದಲ್ಲಿರುವ ಕಟ್ಟಡ: ಸೆಂಟ್ರಲ್ ವಿಸ್ತಾ – ನವದೆಹಲಿಯ ರೈಸಿನಾ ಹಿಲ್‌ನಲ್ಲಿರುವ ಹೊಸ ಪಾರ್ಲಿಮೆಂಟ್ ಭವನ

ಪುಟಾಣಿ ಪದಬಂಧ: 1. ನಾಗರಿಕ 2. ರಾಮಾಯಣ 3. ಜಾಲತಾಣ 4. ಅಜಗರ 5. ವಿವರಣೆ


ಅದಲು ಬದಲು: BADAMI

ಅಕ್ಷರ ಆಟ: 1. ಅಂಗಾರ 2. ಬಂಗಾರ 3. ಪಗಾರ 4. ಶೃಂಗಾರ 5. ಹೂಗಾರ

ಹೊಂದಿಸು ಆನಂದಿಸು: 1. ಲಿಲ್ಲಿ 2. ಕಮಲ 3. ಸೇವಂತಿಗೆ 4. ದಾಳಿಂಬೆ ಹೂ 5. ಗುಲಾಬಿ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಆದರ್ಶ ಹೊರಕೇರಿ, ಪಿ.ಕೆ. ಹಳ್ಳಿ (ವಿಜಯನಗರ)



ಚಿನ್ಮಯಿ ಎಂ.ಕೆ., ಬ್ಯಾಡಗಿ (ಹಾವೇರಿ)



ಶ್ರೇಯನ್ ಎಂ.ಎಲ್., ಮೈಸೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ: ಎಲೆನಾ ರಿಬಾಕಿನಾಗೆ ನಿರಾಸೆ

ಸಬಲೆಂಕಾ ಮುಡಿಗೆ ಮೊದಲ ಕಿರೀಟ

ಮೆಲ್ಬರ್ನ್ (ಎಎಫ್‌ಪಿ/ಎಪಿ): ಬೆಲಾರೂಸ್ ದೇಶದ ಅರಿನಾ ಸಬಲೆಂಕಾ ಶನಿವಾರ ಮೊಟ್ಟಮೊದಲ ಬಾರಿಗೆ ಆಸ್ಟ್ರೇಲಿಯಾ ಓಪನ್ ಟೆನಿಸ್ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡರು. ಇದು ಅವರ ವೃತ್ತಿಜೀವನದಲ್ಲಿ ಜಯಿಸಿದ ಪ್ರಪ್ರಥಮ ಗ್ರ್ಯಾನ್‌ಸ್ಲಾಂ ಪ್ರಶಸ್ತಿಯಾಗಿದೆ.

ರಾಡ್ ಲೇವರ್ ಅರೆನಾದಲ್ಲಿ ನಡೆದ ಫೈನಲ್‌ನಲ್ಲಿ ಮೊದಲ ಸೆಟ್ ಹಿನ್ನಡೆಯಿಂದ ಪುಟಿದೆದ್ದ ಅವರು 4-6, 6-3, 6-4ರಿಂದ ಕಜಕಸ್ತಾನದ ಎಲೆನಾ ರಿಬಾಕಿನಾ ಅವರನ್ನು ಪರಾಭವಗೊಳಿಸಿದರು.

ತೀವ್ರ ಕುತೂಹಲ ಕೆರಳಿಸಿದ್ದ ಹಣಾಹಣಿಯು 2 ತಾಸು 28 ನಿಮಿಷಗಳ ಕಾಲ ನಡೆಯಿತು. ಹಾಲಿ ವಿಂಬಲ್ಡನ್ ಚಾಂಪಿಯನ್‌ಗೆ ಸೋಲುಣಿಸಿದ ಸಂತಸದಲ್ಲಿ ಸಬಲೆಂಕಾ ಆನಂದಬಾಷ್ಪ ಸುರಿಸಿದರು. ಬಿರುಸಿನ ಗ್ರೌಂಡ್‌ಸ್ಟ್ರೋಕ್‌ಗಳು, ನಿಖರ ಸರ್ವ್‌ಗಳು ಮತ್ತು ಅದ್ಭುತ ರ‍್ಯಾಲಿಗಳು ಪಂದ್ಯದ ಮೆರುಗು ಹೆಚ್ಚಿಸಿದವು.

ಕೇವಲ 34 ನಿಮಿಷಗಳಲ್ಲಿ ಮೊದಲ ಸೆಟ್ ಗೆದ್ದುಕೊಂಡ ರಿಬಾಕಿನಾ, ಪ್ರಶಸ್ತಿ ಜಯಿಸುವ ನಿರೀಕ್ಷೆ ಮೂಡಿಸಿದ್ದರು. ಆದರೆ ಎರಡನೇ ಸೆಟ್‌ಅನ್ನು 57 ನಿಮಿಷಗಳಲ್ಲಿ ತಮ್ಮದಾಗಿಸಿಕೊಂಡ ಸಬಲೆಂಕಾ, ನಿರ್ಣಾಯಕ ಸೆಟ್‌ನ ಕುತೂಹಲ ಹೆಚ್ಚುವಂತೆ ಮಾಡಿದರು.

ಮೂರನೇ ಸೆಟ್‌ನಲ್ಲಿ 3-3 ಗೇಮ್‌ಗಳಿಂದ ಸಮಬಲವಾಗಿದ್ದಾಗ ರಿಬಾಕಿನಾ ಎರಡು ಬ್ರೇಕ್ ಪಾಯಿಂಟ್ಸ್ ಉಳಿಸಿಕೊಂಡರು. ಏಸ್ ಸಿಡಿಸಿದ ಸಬಲೆಂಕಾ 5-3ರಿಂದ ಮುನ್ನಡೆದರು. ಬಳಿಕ ಅದೇ ಲಯದೊಂದಿಗೆ ಸೆಟ್ ಹಾಗೂ ಪಂದ್ಯವನ್ನು ತಮ್ಮದಾಗಿಸಿಕೊಂಡರು.

ಪಂದ್ಯದಲ್ಲಿ ರಿಬಾಕಿನಾ ಒಂಬತ್ತು ಮತ್ತು ಸಬಲೆಂಕಾ 17 ಏಸ್‌ಗಳನ್ನು ಸಿಡಿಸಿದರು. ಬೆಲಾರೂಸ್ ಆಟಗಾರ್ತಿ ಏಳು ಡಬಲ್ ಫಾಲ್ಟ್ಸ್ ಎಸಗಿದರು. ರಿಬಾಕಿನಾ ಒಂದು ಡಬಲ್ ಫಾಲ್ಟ್ ಮಾತ್ರ ಮಾಡಿದರು. ಇಲ್ಲಿ ಟ್ರೋಫಿ ಜಯಿಸುವುದರೊಂದಿಗೆ ಸಬಲೆಂಕಾ ವಿಶ್ವ ರ‍್ಯಾಂಕಿಂಗ್‌ನಲ್ಲಿ ಜೀವನಶ್ರೇಷ್ಠ ಎರಡನೇ ಸ್ಥಾನಕ್ಕೇರಲಿದ್ದಾರೆ.

7 ತಿಂಗಳ ಅವಧಿಯಲ್ಲಿ 2ನೇ ಗ್ರ್ಯಾನ್‌ಸ್ಲಾಮ್ ಫೈನಲ್ ತಲುಪಿದ ರಿಬಾಕಿನಾ ಮೊದಲ ಬಾರಿಗೆ ಅಗ್ರ 10ರೊಳಗಿನ ರ‍್ಯಾಂಕಿಂಗ್ ಪಡೆಯಲಿದ್ದಾರೆ.

ಡಿ ಗ್ರೂಟ್ ಸತತ ಒಂಬತ್ತನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ: ನೆದರ್ಲೆಂಡ್ಸ್ ದಂತಕತೆ ಡಿಯೆಡ್ ಡಿ ಗ್ರೂಟ್ ಅವರು ಮಹಿಳೆಯರ ವೀಲ್‌ಚೇರ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು. ಇದರೊಂದಿಗೆ ಸತತ ಒಂಬತ್ತು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಕಿರೀಟ ಧರಿಸಿದ ಸಾಧನೆ ಮಾಡಿದರು. ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಡಿಗ್ರೂಟ್ 0-6, 6-2, 6-2ರಿಂದ ಜಪಾನ್‌ನ ಯುಯಿ ಕಮಿಜಿ ಅವರನ್ನು ಪರಾಭವಗೊಳಿಸಿದರು. ಡಿ ಗ್ರೂಟ್ ಅವರಿಗೆ ಇದು ಐದನೇ ಆಸ್ಟ್ರೇಲಿಯಾ ಓಪನ್ ಕಿರೀಟ. ಒಟ್ಟಾರೆ 17ನೇ ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಗರಿಯಾಗಿದೆ.




ಪ್ರಶಸ್ತಿಯೊಂದಿಗೆ ಅರಿನಾ ಸಬಲೆಂಕಾ ಸಂಭ್ರಮ (ಎಡಚಿತ್ರ). ಮಹಿಳೆಯರ ವೀಲ್‌ಚೇರ್ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಡಿಯೆಡೆ ಡಿ ಗ್ರೂಟ್– ಎಎಫ್‌ಪಿ ಮತ್ತು ಎಪಿ ಚಿತ್ರಗಳು

ಪುರುಷರ ಫೈನಲ್: ಯಾರಾಗುವರು ಚಾಂಪಿಯನ್?

ಜೊಕೊವಿಚ್‌ಗೆ ಸಿಟ್ಸಿಪಸ್ ಸವಾಲು

ಮೆಲ್ಬರ್ನ್ (ಎಎಫ್‌ಪಿ): ತಾನು ಆಡಿದ ಈ ಹಿಂದಿನ ಎಲ್ಲ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಫೈನಲ್‌ಗಳಲ್ಲಿ ವಿಜಯ ಸಾಧಿಸಿರುವ ಸರ್ಬಿಯಾದ ನೊವಾಕ್ ಜೊಕೊವಿಚ್ ಈಗ ಮತ್ತೊಂದು ಪ್ರಶಸ್ತಿಯ ಹೊಸ್ತಿಲಲ್ಲಿ ಬಂದು ನಿಂತಿದ್ದಾರೆ.

ಇಲ್ಲಿ 10ನೇ ಪ್ರಶಸ್ತಿ ನಿರೀಕ್ಷೆಯಲ್ಲಿರುವ ಜೊಕೊವಿಚ್ ಅವರಿಗೆ ಗ್ರೀಸ್‌ನ ಯುವ ಆಟಗಾರ ಸ್ಟೆಫಾನೊಸ್ ಸಿಟ್ಸಿಪಸ್ ಸವಾಲು ಎದುರಾಗಿದೆ. ಈ ಟ್ರೋಫಿ ಗೆದ್ದರೆ ಜೊಕೊವಿಚ್ ಅವರು ಸ್ಪೇನ್‌ನ ರಫೆಲ್ ನಡಾಲ್ ಅವರ ದಾಖಲೆ (22 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ) ಸರಿಗಟ್ಟಲಿದ್ದಾರೆ.

ಆಸ್ಟ್ರೇಲಿಯಾ ಓಪನ್ ಸಾಧನೆ	
ಜೊಕೊವಿಚ್	9 ಬಾರಿ ಚಾಂಪಿಯನ್ (2008, 2011, 2012, 2013, 2015, 2016, 2019, 2020, 2021)
ಸಿಟ್ಸಿಪಸ್	ಫೈನಲ್ (2023)

ಕೊರೊನಾ ಲಸಿಕೆ ಹಾಕಿಸಿಕೊಳ್ಳದ ಕಾರಣ ಜೊಕೊವಿಚ್ ಅವರು ಕಳೆದ ಆವೃತ್ತಿಯ ಟೂರ್ನಿಯಲ್ಲಿ ಆಡುವ ಅವಕಾಶ ಕಳೆದುಕೊಂಡಿದ್ದರು.

ಭಾನುವಾರ ರಾಡ್ ಲೇವರ್ ಅರೆನಾದಲ್ಲಿ ನಡೆಯಲಿರುವ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಜೊಕೊವಿಚ್ ಗೆಲುವಿನ ಫೇವರೀಟ್ ಆಗಿದ್ದರೂ ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ತವಕದಲ್ಲಿರುವ ಸಿಟ್ಸಿಪಸ್ ತೀವ್ರ ಪೈಪೋಟಿ ನೀಡುವ ನಿರೀಕ್ಷೆಯಿದೆ. ಈ ಪಂದ್ಯದಲ್ಲಿ ಗೆದ್ದವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಲಿದ್ದು, ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರನ್ನು ಹಿಂದಿಕ್ಕಲಿದ್ದಾರೆ.

24 ವರ್ಷದ ಸಿಟ್ಸಿಪಸ್, 2021ರ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಫೈನಲ್ ತಲುಪಿದ್ದರು. ಆಗ ಪ್ರಶಸ್ತಿ ಸುತ್ತಿನಲ್ಲಿ ಜೊಕೊವಿಚ್ ಎದುರೇ ಸೋತಿದ್ದರು. ಈಗ ಪ್ರಶಸ್ತಿ ಬರ ನೀಗಿಸಿಕೊಳ್ಳುವ ವಿಶ್ವಾಸದಲ್ಲಿದ್ದಾರೆ.



ನೊವಾಕ್ ಜೊಕೊವಿಚ್ ಮತ್ತು ಸ್ಟೆಫಾನೊಸ್ ಸಿಟ್ಸಿಪಸ್– ಎಎಫ್‌ಪಿ ಚಿತ್ರ

ಅಂಕಿ ಅಂಶ	ನೊವಾಕ್ ಜೊಕೊವಿಚ್	ಸ್ಟೆಫಾನೊಸ್ ಸಿಟ್ಸಿಪಸ್
ವಯಸ್ಸು	35	24
ವಿಶ್ವ ರ‍್ಯಾಂಕಿಂಗ್	5	4
ಒಟ್ಟು ಪ್ರಶಸ್ತಿ	92	9
ಗ್ರ್ಯಾನ್‌ಸ್ಲಾಮ್ ಕಿರೀಟ	21	0
ಕೋಚ್	ಗೊರಾನ್ ಇವಾನಿಸೆವಿಚ್	ಅಪೊಸ್ಟೊಲೊಸ್ ಸಿಟ್ಸಿಪಸ್

ಪಂದ್ಯ ಆರಂಭ ಮಧ್ಯಾಹ್ನ 2 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಕ್ರಿಕೆಟ್: ಲಖನೌನಲ್ಲಿ ಭಾರತ–ನ್ಯೂಜಿಲೆಂಡ್ ಮುಖಾಮುಖಿ ಇಂದು

ಗೆಲುವಿನ ಒತ್ತಡದಲ್ಲಿ ಹಾರ್ದಿಕ್ ಬಳಗ

ಲಖನೌ (ಪಿಟಿಐ): ಹಾರ್ದಿಕ್ ಪಾಂಡ್ಯ ನಾಯಕತ್ವದ ಭಾರತ ತಂಡವು ನ್ಯೂಜಿಲೆಂಡ್ ಎದುರಿನ ಚುಟುಕು ಕ್ರಿಕೆಟ್ ಸರಣಿ ಜಯಿಸುವ ಗುರಿ ಈಡೇರಬೇಕಾದರೆ ಭಾನುವಾರ ನಡೆಯುವ ಪಂದ್ಯದಲ್ಲಿ ಗೆಲ್ಲಲೇಬೇಕು.

ಮೂರು ಪಂದ್ಯಗಳ ಸರಣಿಯಲ್ಲಿ ನ್ಯೂಜಿಲೆಂಡ್ ಈಗ 1-0ಯ ಮುನ್ನಡೆಯಲ್ಲಿದೆ. ರಾಂಚಿಯಲ್ಲಿ ಶುಕ್ರವಾರ ನಡೆದಿದ್ದ ಮೊದಲ ಪಂದ್ಯದಲ್ಲಿ ಆತಿಥೇಯ ತಂಡವು 21 ರನ್‌ಗಳಿಂದ ಸೋತಿತ್ತು.

ಜಾರ್ಖಂಡ್ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದ ಪಿಚ್‌ನಲ್ಲಿ ವೇಗಿಗಳಾದ ಉಮ್ರಾನ್ ಮಲಿಕ್ ಮತ್ತು ಅರ್ಷದೀಪ್ ಸಿಂಗ್ ದುಬಾರಿಯಾದರು. ಕಿವೀಸ್ ಆಟಗಾರ ಡೆವೊನ್ ಕಾನ್ವೆ ಆರಂಭಿಕ ಹಂತದ ಓವರ್‌ಗಳಲ್ಲಿ ಮತ್ತು ಡೆರಿಲ್ ಮಿಚೆಲ್ ಕೊನೆಯ ಹಂತದ ಓವರ್‌ಗಳಲ್ಲಿ ಅಬ್ಬರಿಸಿ ಸವಾಲಿನ ಮೊತ್ತ ಪೇರಿಸಿದರು. ಆದರೆ ಭಾರತದ ಅಗ್ರಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ್ದು ಸೋಲಿಗೆ ಮುಖ್ಯ ಕಾರಣವಾಯಿತು.

ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಹಾಗೂ ಸೂರ್ಯಕುಮಾರ್ ಯಾದವ್ ಅವರ ಚೆಂದದ ಬ್ಯಾಟಿಂಗ್ ನೋಡುಗರ ಮನಸೆಳೆಯಿತು. ಆದರೆ, ತಂಡ ಜಯಿಸಲಿಲ್ಲ. 2ನೇ ಪಂದ್ಯದಲ್ಲಿ ಈ ಲೋಪಗಳು ಮರುಕಳಿಸಿದರೆ ಸರಣಿ ಜಯದ ಆಸೆ ಕಮರುವುದು ಖಚಿತ. ಫೀಲ್ಡಿಂಗ್‌ನಲ್ಲಿ ಚುರುಕಾಗಿರುವ ಕಿವೀಸ್ ರನ್‌ಗಳಿಗೆ ತಡೆಯೊಡ್ಡಬಲ್ಲದು. ಏಕದಿನ ಕ್ರಿಕೆಟ್‌ನ ದ್ವಿಶತಕ ಸಾಧಕರಾದ ಶುಭಮನ್ ಮತ್ತು ಇಶಾನ್ ಇಲ್ಲಿ ಉತ್ತಮ ಆರಂಭ ನೀಡಿದರೆ ನಂತರದ ಬ್ಯಾಟರ್‌ಗಳಿಗೆ ಕೆಲಸ ಸುಲಭವಾಗುತ್ತದೆ.

ಭಾರತರತ್ನ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಕ್ರೀಡಾಂಗಣದ ಪಿಚ್ ಕೂಡ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ನೀಡುವ ನಿರೀಕ್ಷೆ ಇದೆ.

ಪಂದ್ಯ ಆರಂಭ: ರಾತ್ರಿ 7.

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್, ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್,ಋತುರಾಜ್ ಗಾಯಕವಾಡ್ ಹಾಗೂ ಜಿತೇಶ್ ಶರ್ಮಾ

ಸಂಕ್ಷಿಪ್ತ ಸುದ್ದಿ

ಗುಜರಾತ್ ಜೈಂಟ್ಸ್‌ಗೆ ಮಿಥಾಲಿ ಮೆಂಟರ್



ಮಿಥಾಲಿ ರಾಜ್

ಅಹಮದಾಬಾದ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ಅವರನ್ನು ಮುಂಬರುವ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡುವ ಗುಜರಾತ್ ಜೈಂಟ್ಸ್ ತಂಡಕ್ಕೆ ಮೆಂಟರ್ ಆಗಿ ನೇಮಕ ಮಾಡಲಾಗಿದೆ.

23 ವರ್ಷಗಳ ಕಾಲ ಭಾರತ ತಂಡದಲ್ಲಿ ಆಡಿದ್ದ ಮಿಥಾಲಿ ಮಹಿಳಾ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ್ದಾರೆ. 40 ವರ್ಷದ ಮಿಥಾಲಿ ಈಚೆಗೆ ನಿವೃತ್ತಿ ಘೋಷಿಸಿದ್ದರು.

‘ಇದೇ ಮೊದಲ ಬಾರಿಗೆ ಮಹಿಳಾ ಐಪಿಎಲ್ ಆಯೋಜನೆಯಾಗುತ್ತಿದೆ. ಮಹಿಳಾ ಕ್ರಿಕೆಟ್ ಬೆಳವಣಿಗೆಯ ದೃಷ್ಟಿಯಿಂದ ಇದೊಂದು ಪ್ರಮುಖ ಹೆಜ್ಜೆಯಾಗಿದೆ. ಅದಾನಿ ಸಮೂಹವು ಕ್ರಿಕೆಟ್‌ನಲ್ಲಿ ಸಹಭಾಗಿತ್ವ ಹೊಂದಿರುವುದು ಆಶಾದಾಯಕ ಬೆಳವಣಿಗೆ’ ಎಂದು ಮಿಥಾಲಿ ಹೇಳಿದ್ದಾರೆ.

ದರ್ಶನ್ ಮಿಂಚು

ಬೆಂಗಳೂರು: ದರ್ಶನ್ ಡಿ.ಎಸ್. ಗಳಿಸಿದ ನಾಲ್ಕು ಗೋಲುಗಳ ಬಲದಿಂದ ಕರ್ನಾಟಕ ಅರಣ್ಯ ಇಲಾಖೆ ತಂಡವು ಕೆಎಸ್‌ಎಚ್‌ಎ ಎ ಡಿವಿಷನ್ ಹಾಕಿ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಶನಿವಾರ ನಡೆದ ಪಂದ್ಯದಲ್ಲಿ ಅರಣ್ಯ ಇಲಾಖೆ 7-2ರಿಂದ ಎಚ್‌ಎಂಟಿ ತಂಡವನ್ನು ಪರಾಭವಗೊಳಿಸಿತು. ದರ್ಶನ್ 16, 29, 42 ಮತ್ತು 52ನೇ ನಿಮಿಷಗಳಲ್ಲಿ ಕೈಚಳಕ ತೋರಿದರು.

ವಿಜೇತ ತಂಡಕ್ಕಾಗಿ ಮಿಥುನ್ ಬಿಜವಾಡ (12ನೇ ನಿ.), ನಾಗರಾಜ (46ನೇ ನಿ.), ನವೀನ್ ಕೆ.ಎ. (54ನೇ ನಿ.) ಗೋಲು ದಾಖಲಿಸಿದರು. ಎಚ್‌ಎಂಟಿ ಪರ ಕಾರ್ತಿಕ್ (14ನೇ ನಿ.) ಮತ್ತು ಮೊಸಿನ್ (48ನೇ ನಿ.) ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಯಂಗ್‌ಸ್ಟಾರ್ ಹಾಕಿ ಕ್ಲಬ್, ರಾಯಚೂರು 4-2ರಿಂದ ಗುರು ಕ್ಲಬ್ ತಂಡಕ್ಕೆ ಸೋಲುಣಿಸಿತು.

19 ವರ್ಷದೊಳಗಿನವರ ಟಿ20 ವಿಶ್ವಕಪ್: ಭಾರತ–ಇಂಗ್ಲೆಂಡ್ ಫೈನಲ್ ಇಂದು

ಚಾರಿತ್ರಿಕ ಸಾಧನೆಯತ್ತ ಶಫಾಲಿ ಪಡೆ ಚಿತ್ತ

ಪೊಷೆಫ್‌ಸ್ಟ್ರೂಮ್ (ಪಿಟಿಐ): ಶನಿವಾರ ತಮ್ಮ ಜನ್ಮದಿನ ಆಚರಿಸಿಕೊಂಡ ಶಫಾಲಿ ವರ್ಮಾ ಇದೇ ಮೊದಲ ಸಲ ಆಯೋಜಿಸಲಾಗಿರುವ 19 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಜಯದ ಹೊಸ್ತಿಲಲ್ಲಿದ್ದಾರೆ.

ಭಾನುವಾರ ಇಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಶಫಾಲಿ ನಾಯಕತ್ವದ ಭಾರತ ತಂಡವು ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಭಾರತದ ಸೀನಿಯರ್ ಮಹಿಳಾ ತಂಡವು ಇದುವರೆಗೂ ಯಾವುದೇ ಮಾದರಿಯಲ್ಲಿಯೂ ವಿಶ್ವಕಪ್ ಜಯಿಸಿಲ್ಲ. ಹೋದ ವರ್ಷ ವಿಶ್ವಕಪ್ ಫೈನಲ್ ಮತ್ತು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಆಡಿದ್ದ ಮಹಿಳಾ ತಂಡದಲ್ಲಿ ಶಫಾಲಿ ಕೂಡ ಆಡಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಭಾರತ ಯುವಪಡೆಯ ನಾಯಕತ್ವದ 19 ವರ್ಷದ ಶಫಾಲಿಗೆ ಈಗ ಇತಿಹಾಸ ರಚಿಸುವ ಅವಕಾಶ ಒದಗಿಬಂದಿದೆ.

‘ವಿಶ್ವಕಪ್ ಫೈನಲ್‌ಗಳಲ್ಲಿ ಆಡಿದ ಅನುಭವ ನನಗಿದೆ. ಸಂಪೂರ್ಣ ಸಾಮರ್ಥ್ಯವನ್ನು ವಿನಿಯೋಗಿಸಿ ಆಡಬೇಕೆಂದು ಸಹ ಆಟಗಾರ್ತಿಯರಿಗೆ ಸಲಹೆ ಕೊಟ್ಟಿದ್ದೇನೆ’ ಎಂದು ಶಫಾಲಿ ಹೇಳಿದರು.

ತಂಡದ ಶ್ವೇತಾ ಶೆಹ್ರಾವತ್, ರಿಚಾ ಘೋಷ್ ಮತ್ತು ಪಾರ್ಶ್ವಿ ಚೋಪ್ರಾ ಅವರು ಉತ್ತಮ ಫಾರ್ಮ್‌ನಲ್ಲಿದ್ದಾರೆ. ಇಂಗ್ಲೆಂಡ್ ತಂಡವು ಕೂಡ ಎಲ್ಲ ವಿಭಾಗಗಳಲ್ಲಿ ಉತ್ತಮ ಲಯದಲ್ಲಿದ್ದು ಉಭಯ ತಂಡಗಳ ಪೈಪೋಟಿಯು ರೋಚಕವಾಗುವ ನಿರೀಕ್ಷೆ ಇದೆ.

ಪಂದ್ಯ ಆರಂಭ: ಸಂಜೆ 5.15



ಟ್ರೋಫಿಯೊಂದಿಗೆ ಭಾರತದ ಶಫಾಲಿ ವರ್ಮಾ ಮತ್ತು ಇಂಗ್ಲೆಂಡ್‌ನ ಗ್ರೇಸ್ ಸ್ಕ್ರೀವೆನ್ಸ್–ಟ್ವಿಟರ್ ಚಿತ್ರ



ಜಿಲನ್‌ಗೆ ಪ್ರಶಸ್ತಿ

ಬೆಂಗಳೂರು: ಕೋಲಾರದ ಜಿಲನ್ ಅವರು ಗಣರಾಜ್ಯೋತ್ಸವದ ಪ್ರಯುಕ್ತ ನಡೆದ ರಾಷ್ಟ್ರಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ‘ಭಾರತ್ ಕ್ಲಾಸಿಕ್’ ಪ್ರಶಸ್ತಿ ಗೆದ್ದುಕೊಂಡರು. ಟ್ರಾನ್ಸ್‌ಫಾರ್ಮರ್ ಜಿಮ್ ಮತ್ತು ಕರ್ನಾಟಕ ದೇಹದಾರ್ಢ್ಯ ಸಂಸ್ಥೆ ಜಂಟಿಯಾಗಿ ಸ್ಪರ್ಧೆ ಆಯೋಜಿಸಿದ್ದವು. ಸೀನಿಯರ್ ವಿಭಾಗದಲ್ಲಿ ಶಾಹಿಲ್ ವಿಜೇತರಾದರು.

ಫೈನಲ್‌ಗೆ ಚಾಮರಾಜನಗರ

ಮೈಸೂರು: ಚಾಮರಾಜನಗರ ತಂಡದವರು ರಾಜ್ಯ ಮಟ್ಟದ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರು ದಕ್ಷಿಣ ತಂಡದವರನ್ನು ಮಣಿಸಿ ಫೈನಲ್ ಪ್ರವೇಶಿಸಿದರು.

ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ನಡೆದ ಮಹಿಳೆಯರ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ 25-11, 25-14, 25-10ರಿಂದ ಎದುರಾಳಿ ತಂಡದವರನ್ನು ಮಣಿಸಿದರು. ಚಾಮರಾಜನಗರ ತಂಡದವರು ಬ್ಲಾಕಿಂಗ್, ಸ್ಪೈಕಿಂಗ್ ಮೂಲಕ ಎಲ್ಲರ ಗಮನಸೆಳೆದರು. ಕಾವ್ಯಾ ಹಾಗೂ ಮಹಿಮಾ ಚುರುಕಿನ ಆಟವಾಡಿದರು.

ಬ್ಯಾಡ್ಮಿಂಟನ್: 500 ಸ್ಪರ್ಧಿಗಳು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೇಂಜ್‌ಮೇಕರ್ಸ್ ಆಫ್ ಕನಕಪುರ ರೋಡ್ ಅಸೋಸಿಯೇಷನ್ ಆಶ್ರಯದಲ್ಲಿ ಶನಿವಾರ ಆರಂಭವಾದ ಫೆಡರೇಷನ್ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯಲ್ಲಿ ಕನಿಷ್ಠ 500 ಸ್ಪರ್ಧಿಗಳು ಭಾಗವಹಿಸಿದ್ದರು.

ಜುಡಿಷಿಯಲ್ ಬಡಾವಣೆಯಲ್ಲಿರುವ ಸೆಲೆನೈಟ್ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ಟೂರ್ನಿ ನಡೆಯುತ್ತಿದ್ದು, ಭಾನುವಾರ ಕೊನೆಯ ದಿನವಾಗಿದೆ. 13 ವರ್ಷದೊಳಗಿನವರು, 13 ರಿಂದ 20 ವರ್ಷ, 20 ರಿಂದ 30 ವರ್ಷ, 30 ರಿಂದ 40 ವರ್ಷ, 40 ರಿಂದ 50 ವರ್ಷ ಮತ್ತು 50 ವರ್ಷಕ್ಕಿಂತ ಮೇಲಿನವರ ವಿಭಾಗಗಳಲ್ಲಿ ಪಂದ್ಯಗಳು ಆಯೋಜನೆಯಾಗಿವೆ

ಕನಕಪುರ ರಸ್ತೆಯ ಸಾರಕ್ಕಿಯಿಂದ ಕಗ್ಗಲೀಪುರದವರೆಗೆ ಹರಡಿಕೊಂಡಿರುವ ಬಡಾವಣೆಗಳು ಮತ್ತು ಅಪಾರ್ಟ್‌ಮೆಂಟ್‌ಗಳ ನೂರಕ್ಕೂ ಹೆಚ್ಚು ಕ್ಷೇಮಾಭಿವೃದ್ಧಿ ಸಂಘಗಳ ಸದಸ್ಯರು ಪಾಲ್ಗೊಂಡಿದ್ದಾರೆ.



ಟೂರ್ನಿಯಲ್ಲಿ ಪಾಲ್ಗೊಂಡ ಸ್ಪರ್ಧಿಗಳು

ಹೈದರಾಬಾದ್ ರೇಸ್

ಸ್ಕ್ಯಾಲೆಂಟೊ ಡರ್ಬಿ ಗೆಲ್ಲುವ ನಿರೀಕ್ಷೆ

ವೂಲ್ಫ್777 ಗೋಲ್ಕಂಡ ಡರ್ಬಿ ಸ್ಟೇಕ್ಸ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಕ್ಯಾಲೆಂಟೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮ್ಯಾಕ್ಸಿಮಮ್ ಗ್ಲಾಮರ್ 1, ಅನ್‌ಸಂಗ್ ಹೀರೊ 2, ದಿ ಥಂಡರ್ 6
2ನೇ ರೇಸ್: ಹ್ಯಾಪಿ ಸೋಲ್ 5, ಆಸ್ಟ್ರೇಲಿಯಾ 1, ಒನ್ಲಿ ದಿ ಬ್ರೇವ್ 6
3ನೇ ರೇಸ್: ಬ್ಯೂಟಿ ಬ್ಲೇಝ್ 3, ಬ್ರಿಯರ್ ರಿಡ್ಜ್ 2, ಬೆಲ್ಲಾಕ್ಯೂ 7
4ನೇ ರೇಸ್: ಎನ್.ಆರ್.ಐ ಫಾಂಟಸಿ 2, ವಾಂಡರಿಂಗ್ ವಾರಿಯರ್ 4, ಕೀಪ್ ಫೈತ್ 6
5ನೇ ರೇಸ್: ಬ್ಯಾಲೆರಿನ 1, ರಾಯಲ್ ಗ್ರೇಸ್ 7, ಅಕಿಡೊ 4
6ನೇ ರೇಸ್: ಸೊಪ್ರನೋಸ್ 7, ರಾಯಲ್ ಸ್ಟಾರ್ 3, ಓಕೆ ಬಾಸ್ 2
7ನೇ ರೇಸ್: ಪಾತ್ ಆಫ್ ಪೀಸ್ 10, ಕಾರ್ನಿವಲ್ ಲೇಡಿ 11, ಜುರಾಮೆಂಟೊ 5
8ನೇ ರೇಸ್: ಸ್ಕ್ಯಾಲೆಂಟೊ 4, ಡಿಫ್ 2, ಆಲ್ ಅಟ್ರ್ಯಾಕ್ಷನ್ 1
9ನೇ ರೇಸ್: ಸೀ ಆಫ್ ಕ್ಲಾಸ್ 5, ಡಾಸ್ 2, ಗುಡ್ ಟೈಡಿಂಗ್ಸ್ 8

ಅತ್ಯುತ್ತಮ ಬೆಟ್: ಬ್ಯೂಟಿ ಬ್ಲೇಝ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
1,2,3,4,5,6	5,6,7,8,9	1,2,3	4,5,6	7,8,9

ಶಿವಶಕ್ತಿ ಮೋಡಿ: ಬಿಎಫ್‌ಸಿಗೆ ಜಯ

ಐಎಸ್‌ಎಲ್ ಫುಟ್‌ಬಾಲ್: ಚೆನ್ನೈಯಿನ್ ತಂಡ ಪರಾಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಶಕ್ತಿ ನಾರಾಯಣನ್ ಅವರ ಕಾಲ್ಚಳಕದ ಬಲದಿಂದ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ 3-1ರಿಂದ ಚೆನ್ನೈಯಿನ್ ಎಫ್‌ಸಿ ತಂಡಕ್ಕೆ ಸೋಲುಣಿಸಿತು. ಇದರೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಆರನೇ ಸ್ಥಾನಕ್ಕೇರುವ ಮೂಲಕ ಪ್ಲೇ ಆಫ್ ಹಂತ ತಲುಪುವ ವಿಶ್ವಾಸ ವೃದ್ಧಿಸಿಕೊಂಡಿತು.

ಟೂರ್ನಿಯಲ್ಲಿ ಬಿಎಫ್‌ಸಿಗೆ ಇದು ಸತತ ನಾಲ್ಕನೇ ಗೆಲುವು. 16 ಪಂದ್ಯಗಳನ್ನು ಆಡಿರುವ ಬೆಂಗ ಳೂರು ಏಳರಲ್ಲಿ ಗೆದ್ದು, ಎಂಟರಲ್ಲಿ ಸೋತಿದೆ. ಒಂದು ಪಂದ್ಯ ಡ್ರಾ ಮಾಡಿ ಕೊಂಡಿದೆ. ಚೆನ್ನೈ ತಂಡವು ಈ ಸೋಲಿನೊಂದಿಗೆ ಎಂಟನೇ ಸ್ಥಾನದಲ್ಲಿ ಉಳಿಯಿತು.

ಪಂದ್ಯದ ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕಿಳಿದ ಬಿಎಫ್‌ಸಿ ಅದಕ್ಕೆ ಪ್ರತಿಫಲವನ್ನೂ ಪಡೆಯಿತು. ಮೊದಲಾರ್ಧದ ಅವಧಿಯಲ್ಲೇ ಮೂರೂ ಗೋಲುಗಳನ್ನು ದಾಖಲಿಸಿ ಮೇಲುಗೈ ಸಾಧಿಸಿತು. 15ನೇ ನಿಮಿಷದಲ್ಲಿ ರಾಯ್‌ಕೃಷ್ಣ ಅವರು ನೀಡಿದ ಪಾಸ್‌ನಲ್ಲಿ ಚೆಂಡನ್ನು ಗುರಿ ಸೇರಿಸಿದ ಶಿವಶಕ್ತಿ ತವರಿನ ಅಭಿಮಾನಿಗಳ ಉತ್ಸಾಹ ಹೆಚ್ಚಿಸಿದರು.

23ನೇ ನಿಮಿಷದಲ್ಲಿ ಶಿವಶಕ್ತಿ ತಮ್ಮ ಎರಡನೇ ಗೋಲು ಗಳಿಸಿ, ಚೆನ್ನೈಯಿನ್ ತಂಡದ ಒತ್ತಡ ಹೆಚ್ಚಿಸಿದರು. ಚೆನ್ನೈನ ವಫಾ ಹಕಮನೇಶಿ ತಮ್ಮ ತಂಡದ ಜೀತೇಶ್ವರ್ ಸಿಂಗ್ ಅವರಿಗೆ ಪಾಸ್ ನೀಡಿದರು. ಆದರೆ ಈ ವೇಳೆಗೆ ಚುರುಕಾಗಿ ಚೆಂಡನ್ನು ತಮ್ಮತ್ತ ಪಡೆದ ಶಿವ ಸುಲಭವಾಗಿ ಗೋಲುಪೆಟ್ಟಿಗೆಗೆ ಸೇರಿಸಿದರು.

ರೋಹಿತ್ ಕುಮಾರ್ ಅವರು 30ನೇ ನಿಮಿಷದಲ್ಲಿ ಬೆಂಗಳೂರು ತಂಡದ ಮೂರನೇ ಗೋಲು ಗಳಿಸಿದರು. ಎದುರಾಳಿ ತಂಡದ ಕಳಪೆ ಡಿಫೆನ್ಸ್ ಲಾಭ ಪಡೆದ ಅವರು ಗೋಲ್‌ಕೀಪರ್ ಸಮಿಕ್ ಮಿತ್ರ ಅವರನ್ನು ವಂಚಿಸಿ ಚೆಂಡನ್ನು ಸೊಗಸಾಗಿ ಗುರಿ ತಲುಪಿಸಿದರು.

ಚೆನ್ನೈ ತಂಡಕ್ಕಾಗಿ ಎಡ್ವಿನ್ ವನ್‌ಸ್ಪಾಲ್ 59ನೇ ನಿಮಿಷದಲ್ಲಿ ಸಮಾಧಾನದ ಗೋಲು ದಾಖಲಿಸಿದರು. ಇದಾದ ಬಳಿಕ ಉಭಯ ತಂಡಗಳು ಪ್ರಯತ್ನಿಸಿದರೂ ಗೋಲು ಗಳಿಕೆ ಸಾಧ್ಯವಾಗಲಿಲ್ಲ.

ಬೆಂಗಳೂರು ತಂಡದ ರೋಹಿತ್ ಕುಮಾರ್, ರಾಯ್‌ಕೃಷ್ಣ ಮತ್ತು ಚೆನ್ನೈಯಿನ್ ತಂಡದ ಅಜಿತ್ ಕುಮಾರ್ ಹಳದಿ ಕಾರ್ಡ್ ದರ್ಶನ ಮಾಡಿದರು.

ಬಿಎಫ್‌ಸಿ ಈ ಪಂದ್ಯದಲ್ಲಿ ನಾಯಕ ಸುನಿಲ್ ಚೆಟ್ರಿ ಅವರಿಗೆ ವಿಶ್ರಾಂತಿ ನೀಡಿತ್ತು. ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ತಂಡವನ್ನು ಮುನ್ನಡೆಸಿದರು.



ಶಿವಶಕ್ತಿ ನಾರಾಯಣನ್ ಸಂಭ್ರಮ– ಪ್ರಜಾವಾಣಿ ಚಿತ್ರ

ಪ್ರಶಸ್ತಿಗಾಗಿ ಬೆಲ್ಜಿಯಂ–ಜರ್ಮನಿ ಸೆಣಸು

ಪುರುಷರ ವಿಶ್ವಕಪ್ ಹಾಕಿ ಟೂರ್ನಿ: ಫೈನಲ್ ಪಂದ್ಯ ಇಂದು

ಭುವನೇಶ್ವರ್(ಪಿಟಿಐ): ಒಲಿಂಪಿಕ್ ಚಾಂಪಿಯನ್ ಬೆಲ್ಜಿಯಂ ತಂಡವು ಭಾನುವಾರ ನಡೆಯಲಿರುವ ವಿಶ್ವಕಪ್ ಹಾಕಿ ಟೂರ್ನಿಯ ಫೈನಲ್‌ನಲ್ಲಿ ಜರ್ಮನಿ ಎದುರು ಸೆಣಸಲಿದೆ.

ಈ ಹಿಂದೆ ವಿಶ್ವಕಪ್ ಟೂರ್ನಿಗಳಲ್ಲಿ ಜರ್ಮನಿ, ಆಸ್ಟ್ರೇಲಿಯಾ ಮತ್ತು ಪಾಕಿಸ್ತಾನ ತಂಡಗಳು ಒಂದರ ಹಿಂದೆ ಒಂದರಂತೆ ಪ್ರಶಸ್ತಿ ಗೆದ್ದಿರುವ ಇತಿಹಾಸ ಇದೆ. ಈಗ ಆ ಸಾಲಿಗೆ ಸೇರುವ ಅವಕಾಶ ಬೆಲ್ಜಿಯಂ ತಂಡಕ್ಕೂ ಇದೆ. ಕಳೆದ ಬಾರಿ (2018) ಚಾಂಪಿಯನ್ ಆಗಿದ್ದ ಬೆಲ್ಜಿಯಂ 2021ರಲ್ಲಿ ಟೋಕಿಯೊ ಒಲಿಂಪಿಕ್ಸ್ ಚಿನ್ನ ಕೂಡ ಜಯಿಸಿತ್ತು.

ಈ ವರ್ಷದ ಟೂರ್ನಿಯಲ್ಲಿಯೂ ಅಮೋಘ ಆಟವಾಡಿದೆ. ಈ ತಂಡದಲ್ಲಿರುವ 11 ಆಟಗಾರರು 30 ವರ್ಷ ಮತ್ತು ಮೂವರು 35 ವರ್ಷ ದಾಟಿರುವವರಾಗಿದ್ದಾರೆ. ಈ ತಂಡವು ಬೆಲ್ಜಿಯಂ ಹಾಕಿ ಇತಿಹಾಸದ ಬಂಗಾರದ ಪೀಳಿಗೆ ಎಂದೇ ಪ್ರಖ್ಯಾತವಾಗಿದೆ. ಎಲ್ಲ ವಿಭಾಗಗಳಲ್ಲಿಯೂ ಉತ್ತಮವಾಗಿ ಆಡುವ ಬಲಾಢ್ಯ ತಂಡ ಇದಾಗಿದೆ.

ಎರಡು ಬಾರಿಯ ಚಾಂಪಿಯನ್ (2002 ಹಾಗೂ 2006) ಈ ಸಲದ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಶೂಟೌಟ್‌ನಲ್ಲಿ ರೋಚಕ ಜಯಸಾಧಿಸಿತ್ತು.

ಭಾರತಕ್ಕೆ ಒಂಬತ್ತನೇ ಸ್ಥಾನ

ರೂರ್ಕೆಲಾ: ಆತಿಥೇಯ ಭಾರತ ತಂಡವು ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಜಂಟಿ ಒಂಬತ್ತನೇ ಸ್ಥಾನ ಪಡೆಯಿತು.

ಬಿರ್ಸಾ ಮುಂಡಾ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸ್ಥಾನ ನಿರ್ಣಯ ಪಂದ್ಯದಲ್ಲಿ ಭಾರತ ತಂಡವು 5–2ರಿಂದ ದಕ್ಷಿಣ ಆಫ್ರಿಕಾ ಎದುರು ಗೆದ್ದಿತು. ಭಾರತಕ್ಕೆ ಈ ಪಂದ್ಯದಲ್ಲಿ ಆರು ಪೆನಾಲ್ಟಿ ಕಾರ್ನರ್‌ಗಳು ಲಭಿಸಿದವು. ಅದರಲ್ಲಿ ಒಂದು ಗೋಲಿನಲ್ಲಿ ಪರಿವರ್ತನೆಯಾಯಿತು.ಪಂದ್ಯದ ಐದನೇ ನಿಮಿಷದಲ್ಲಿ ಭಾರತದ ಅಭಿಷೇಕ್ ಗೋಲು ಗಳಿಸಿದರು. ನಾಯಕ ಹರ್ಮನ್‌ಪ್ರೀತ್ ಸಿಂಗ್ 12ನೇ ನಿಮಿಷದಲ್ಲಿ ಡ್ರ್ಯಾಗ್ ಫ್ಲಿಕ್ ಮೂಲಕ ಗೋಲು ಸಾಧಿಸಿದರು. ಇದರಿಂದಾಗಿ ಭಾರತವು ಅರ್ಧವಿರಾಮಕ್ಕೆ 2–0 ಮುನ್ನಡೆ ಗಳಿಸಿತು. ಮೂರನೇ ಕ್ವಾರ್ಟರ್‌ನಲ್ಲಿ ಅಮಿತ್ ರೋಹಿದಾಸ್ ಒರಟು ಆಟವಾಡಿ ಹಳದಿಕಾರ್ಡ್ ದರ್ಶನ ಪಡೆದರು. 45ನೇ ನಿಮಿಷದಲ್ಲಿ ಶಂಶೇರ್ ಸಿಂಗ್ ಗೋಲು ಗಳಿಸಿದರು. ಐದು ನಿಮಿಷ ಬೆಂಚ್‌ನಲ್ಲಿದ್ದ ರೋಹಿದಾಸ್ ಕಣಕ್ಕೆ ಮರಳಿದರು. ಪಂದ್ಯದ ಕೊನೆಯ ನಿಮಿಷದಲ್ಲಿ ಗೋಲು ಗಳಿಸಿ ಮಿಂಚಿದರು. ನಾಲ್ಕನೇ ಕ್ವಾರ್ಟರ್‌ನಲ್ಲಿ ಒಟ್ಟು ನಾಲ್ಕು ಗೋಲುಗಳು ದಾಖಲಾದವು. ಅದರಲ್ಲಿ ದಕ್ಷಿಣ ಆಫ್ರಿಕಾದ್ದು ಎರಡು ಇದ್ದವು.